ಅಧ್ಯಕ್ಷರು.—ಗೈರುಹಾಜರಾಗಲು ಶ್ರೀ ಜ್ಞಾನದೇವ ದೊಡ್ಡಮೇಟಿಯವರಿಗೆ ಅನುಮತಿ ನೀಡಲಾಗಿದೆ.

೫. ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ

ಅಭಿಯಾಚನೆ ಕ್ರಮಾಂಕ ೨೫ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೧,೫೯,೬೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ

ಅಭಿಯಾಚನೆ ಕ್ರಮಾಂಕ ೨೩ ರಾಜ್ಯದ ಅಬಕಾರಿ

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩,೫೭,೬೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೧೯ ಸಣ್ಣ ಉಳಿತಾಯಗಳು

ಶ್ರೀ ವೀರಣ್ಣ.—ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೬೮,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೨೬ ಬಂಧಿಖಾನೆ ಇತ್ಯಾದಿಗಳು

ಶ್ರೀ ವೀರಣ್ಣ.—ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜೈಲುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೪೪,೭೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ,

ಪ್ರಸ್ತಾವಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು.—ಈ ಬೇಡಿಕೆಗಳನ್ನು ಸಭೆಯ ಮುಂದೆ ಇಡಲಾಗಿದೆ. ಈಗ ಈ ಬೇಡಿಕೆಗಳು ಸಭೆಯ ಮುಂದೆ ಚರ್ಚೆಗೆ ಇವೆ. ಮಾನ್ಯ ಧರ್ಮಸಿಂಗ್ ಅವರು ಚರ್ಚೆಯನ್ನು ಪ್ರಾರಂಭಿಸಲಿ.

† ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆ ಸಂಖ್ಯೆ ೨೫, ೨೩, ೧೯ ಹಾಗೂ ೨೬ಗಳಿಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ ಈ ದಿವಸ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ಮಾನ್ಯ ಗೃಹ ಸಚಿವರು ಮಂಡಿಸಿರತಕ್ಕ ಬೇಡಿಕೆ ಏನು ಇದೆ ಅದನ್ನು ಬಹಳ ತೀವ್ರತರವಾಗಿ ನಾನು ವಿರೋಧಿಸುತ್ತೇನೆ. ಅಧ್ಯಕ್ಷರೇ, ಈಗಾಗಲೇ ಹೇಳಬೇಕೆಂದರೆ, ನಿನ್ನೆಯ ದಿವಸ ಈ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ವಾರ್ಷಿಕ ವರದಿ ನಮಗೆ ತಲುಪಿದೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧ್ಯಕ್ಷರು.—ತಾವು ತಮ್ಮ ಭಾಷಣ ಮುಗಿಸಲು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ ?

ಶ್ರೀ ಧರ್ಮಸಿಂಗ್.—ತಾವು ಎಷ್ಟು ಹೊತ್ತು ಅವಕಾಶ ಕೊಟ್ಟರೂ ಮಾತನಾಡುತ್ತೇನೆ.

ಅಧ್ಯಕ್ಷರು.—ತಮಗೆ ೧೨ ನಿಮಿಷ ಕೊಟ್ಟರೂ, ಅರ್ಧ ಗಂಟೆ ಕೊಟ್ಟರೂ ಕೂಡಾ ವಿಷಯವನ್ನೆಲ್ಲಾ ಒಳಗೊಂಡೇ ಕೊಟ್ಟ ವೇಳೆಯಲ್ಲಿ ಮಾತನಾಡುವ ಸಾಮರ್ಥ್ಯ ನಿಮಗೆ ಇದೆ. ಇವತ್ತು ವೇಳೆ ಕಡಿಮೆ ಇದ್ದು ಈ ಬೇಡಿಕೆಗಳು ಇವತ್ತೇ ಮುಗಿಯಬೇಕಾಗಿರುವುದರಿಂದ ಅರ್ಧ ತಾಸಿನಲ್ಲಿ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಧರ್ಮಸಿಂಗ್.—ನಾನು ಈಗಾಗಲೇ ಹೇಳಿದಹಾಗೆ ಮೊಟ್ಟಮೊದಲನೆಯದಾಗಿ ರಾಚಯ್ಯ ಅವರು ಮಂಡಿಸಿರತಕ್ಕ ಬೇಡಿಕೆಗೆ ನಾನು ಬಹಳ ವಿರೋಧವನ್ನು ವ್ಯಕ್ತಪಡಿಸುತ್ತೇನೆ.

(ಶ್ರೀ ಬ್ಲೇಸಿಯಸ್ ಡಿ-ಸೌಜ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಇವತ್ತು ವಿರೋಧಪಕ್ಷದಲ್ಲಿ ಕೂತು ಸರ್ಕಾರದ ವತಿಯಿಂದ ಯಾವುದಾದರೂ ಬೇಡಿಕೆಯನ್ನು ಇಲ್ಲಿ ಮಂಡಿಸತಕ್ಕಂತಹ ಕಾಲದಲ್ಲಿ ನಾವು ಕೆಲವು ಸಲಹೆಗಳನ್ನು ಕೊಡತಕ್ಕದ್ದು ಪದ್ಧತಿ ಇದೆ. ಆದರೆ ಇವತ್ತು ಯಾವ ಪ್ರಸಂಗದಲ್ಲಿ ಕರ್ನಾಟಕ ರಾಜ್ಯದಲ್ಲಿ ಗೃಹಮಂತ್ರಿಯಾಗಿ ತಾವು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುತ್ತಿದ್ದೀರೋ ಎಂಬುದನ್ನು ನೋಡಬೇಕು. ಹಿಂದೆ ಕೂಡಾ ತಾವು ಮಂತ್ರಿಗಳಾಗಿದ್ದಿರಿ. ನಿಮ್ಮ ಆಡಳಿತದಲ್ಲಿ ವಿರೋಧಪಕ್ಷದವರು ಹಾಗೂ ಸಾರ್ವಜನಿಕರೂ ಕೂಡಾ ಬಹಳ ನಿರೀಕ್ಷೆಯನ್ನು ಮಾಡಿದರು. ನಾಲ್ಕು ಕೋಟಿ ಜನಸಂಖ್ಯೆ ಇರತಕ್ಕ ಕರ್ನಾಟಕ ರಾಜ್ಯದಲ್ಲಿ ವ್ಯವಸ್ಥಿತವಾಗಿ ತಾವು ಆಡಳಿತ ನಡೆಸುತ್ತೀರೆನ್ನುವ ಆಸೆಯನ್ನು ಎಲ್ಲರೂ ಇಟ್ಟುಕೊಂಡಿದ್ದರು. ಆದರೆ ಈ ದಿವಸ ಏನು ವರದಿ ಬರುತ್ತದೆ ? ತಮ್ಮ ವಾರ್ಷಿಕ ವರದಿಯಲ್ಲಿ ಎಲ್ಲವನ್ನು ಉಲ್ಲೇಖ ಮಾಡಿದ್ದೀರಿ. ಇವತ್ತು ತಾವು ಏನು ವಾರ್ಷಿಕ ವರದಿ ಇಟ್ಟಿದ್ದೀರಿ ಅದರಲ್ಲಿ ಇಲಾಖೆಯ ಹುದ್ದೆಗಳ ಬಗ್ಗೆ, ಪೋಲೀಸರು ಎಷ್ಟು ಜನ ಇದ್ದಾರೆ, ಠಾಣೆಗಳು ಎಷ್ಟು ಇವೆ ಎಂಬುದನ್ನು ಮಾತ್ರ ತಿಳಿಸತಕ್ಕದ್ದು ಅಲ್ಲ, ಇವತ್ತು ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನು ಒದಗಿಸಿದ್ದರ ಬಗ್ಗೆ ಅಂಕಿಸಂಖ್ಯೆ ಕೊಟ್ಟಂತೆ ಇದನ್ನು ಕೊಡುವುದು ಅಲ್ಲ. ೧೯೮೫ರಲ್ಲಿ ಪ್ರಜಾಪ್ರಭುತ್ವದಲ್ಲಿ ಜನರು ತಮ್ಮನ್ನು ಅಧಿಕ ಬಹುಮತದಿಂದ ಆರಿಸಿ ಕಳುಹಿಸಿದ್ದಾರೆ. ಹಾಗೂ ಎಲ್ಲಾ ರೀತಿಯಲ್ಲೂ ಸಂರಕ್ಷಣೆಯನ್ನು ಕೊಡುತ್ತೇವೆಂದು ತಾವು ಜನತೆಗೆ ವಾಗ್ದಾನ ಕೊಟ್ಟು ಬಂದಿದ್ದೀರಿ ಇದರ ಆಧಾರದ ಮೇಲೆ ಇವತ್ತು ತಾವು ಗೃಹ ಸಚಿವರಾದ ಮೇಲೆ ಕಳೆದ ೧ ವರ್ಷದ ತಮ್ಮ ಆಡಳಿತ ವೈಖರಿ ನೋಡಿದರೆ, ಯಾವ ರೀತಿ ಮುಂದುವರಿಸಿಕೊಂಡು ಹೋಗುತ್ತಿದ್ದೀರಿ ಎಂಬುದನ್ನು ನೋಡಿದರೇ ಗೊತ್ತಾಗುತ್ತದೆ, ೧೯೮೫-೮೬ರಲ್ಲಿ ಏನು ತಮ್ಮ ಪರ್‌ಫಾರ್ಮೆನ್ಸ್ ಬಜೆಟ್ ಇದೆ, ಇದನ್ನು ಎಲ್ಲಾ ಇಲಾಖೆಯವರೂ ಕೊಡುತ್ತಾರೆ. ಕೇವಲ ರಿಪೋರ್ಟ್ ಅಲ್ಲ, ೧೯೮೫-೮೬ರಲ್ಲಿ ಯಾವರೀತಿ ಸುಧಾರಣೆ ಮಾಡಿದ್ದೇವೆ ಹಾಗೂ ಯಾವ ರೀತಿ ಹೋಗುತ್ತಿದ್ದೇವೆ ಎನ್ನುವುದನ್ನು ಉಲ್ಲೇಖ ಮಾಡಬೇಕಾಗಿತ್ತು. ಅದನ್ನು ತಾವು ತಿಳಿಸಬೇಕಾಗುತ್ತದೆ ನಾನು ನಿನ್ನೆ ೧೦ ಗಂಟೆಗೆ ತಲುಪಿದೆ ಇವತ್ತು ಡಿಮಾಂಡ್ ಮೇಲೆ ಇನಿಶಿಯೇಟ್ ಮಾಡಬೇಕೆಂದು ನಮ್ಮ ಸಚೇತಕರು ಹೇಳಿದ್ದರಿಂದ ಸುಮಾರು ೧೦ ಗಂಟೆಗಳ ಕಾಲ ನಾನು ನೋಡಿದೆ. ನನಗೆ ಈ ಬಗ್ಗೆ ನೋಟೀಸ್ ತಲುಪಿದೆ. ಆಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಷನ್ ರೆಕಮೆಂಡೇಷನ್ ಮೇರೆಗೆ ಇವತ್ತು ಎಲ್ಲಾ ಇಲಾಖೆಗೆ ಸಂಬಂಧಪಟ್ಟಹಾಗೆ ಪರ್‌ಫಾರ್ಮೆನ್ಸ್ ಬಜೆಟ್‌ನ್ನು ಸದನದಲ್ಲಿ ಮಂಡಿಸಬೇಕಾಗುತ್ತದೆ. ಈ ಇಲಾಖೆ ಹೇಗೆ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ನನಗೆ ವಿಷಯ ತಲುಪೇ ಇಲ್ಲ. ನಾನು ಈಗಾಗಲೇ ಹೇಳಿದ ಹಾಗೆ ತಾವು ಹಿರಿಯರಿದ್ದೀರಿ. ಆದರೆ ತಾವು ಏನು ಒಂದು ವರ್ಷದ ಅವಧಿಯಲ್ಲಿ ಯಾವ ರೀತಿಯಲ್ಲಿ ಗೃಹ ಸಚಿವರಾಗಿ ಕೆಲಸ ನಿರ್ವಹಿಸಿದ್ದೀರೋ ಆ ಬಗ್ಗೆ ಜನರ ಮನಸ್ಸಿನಲ್ಲಿ ಏನು ಭಾವನೆ ಬಂದಿದೆ ಎನ್ನುವುದನ್ನು ತಿಳಿದುಕೊಳ್ಳಬೇಕಾದ ಪ್ರಯತ್ನ ಮಾಡಬೇಕಾಗಿದೆ. ರಾಜ್ಯದಲ್ಲಿ ಕೊಲೆ, ದರೋಡೆ, ರೇಪ್‌ಗಳು ಆಗುತ್ತಿವೆ. ಮೊನ್ನೆ ಕೂಡಾ ಕೋಲಾರದ ಬಗ್ಗೆ ಒಂದು ವಿಷಯ ಬಂದಾಗ ಇದು ಸ್ವಾಭಾವಿಕ ಎಂದು ಈ ಮನೆಯಲ್ಲೇ ಹೇಳಿದಿರಿ. ಇವತ್ತು ಮನುಷ್ಯ ತನ್ನ ದೈನಿಕ ಜೀವನದಲ್ಲಿ ನೆಮ್ಮದಿಯಿಂದ ಬಾಳಬೇಕು, ಆತ ಒಂದು ಶಾಂತವಾತಾವರಣದಲ್ಲಿ ಜೀವನ ನಡೆಸಬೇಕು. ಇಂತಹ ಪರಿಸ್ಥಿತಿ ರಾಜ್ಯದ ಎಲ್ಲಾ ಭಾಗದಲ್ಲಿ ಇರಬೇಕೆಂಬುದು ನಮ್ಮೆಲ್ಲರ ಆಸೆ. ಆದರೆ ಮೊನ್ನೆ ಶಿವಮೊಗ್ಗದಲ್ಲಿ ಮಾತನಾಡುವಾಗ, ಹೌದು ಇವುಗಳು ನಡೆಯುತ್ತಿವೆ, ಇದರಲ್ಲಿ ಕೆಲವು ರಾಜಕಾರಣಗಳು ಇವೆ, ರಾಜಕೀಯ ಪಕ್ಷಗಳ ಕೈವಾಡ ಇದೆ

ಎಂದು ಹೇಳಿದ್ದೀರಿ. ಮಾನ್ಯ ರಾಚಯ್ಯನವರು, ಗೃಹ ಸಚಿವ ಸ್ಥಾನದಲ್ಲಿ ನಿಂತು ಹೇಳುವಾಗ, ಅತ್ಯಂತ ಬಹುಮತ ಪಡೆದು ರಾಜ್ಯ ನಡೆಸುತ್ತಿರುವ ಸರ್ಕಾರದ ಪತಿಯಿಂದ ಹೇಳುವಾಗ, ಜನರಿಗೆ ಏನು ತೊಂದರೆ ಆಗಿದೆ ಯಾವ ಸನ್ನಿವೇಶ ಇದೆ ಎಂಬುದನ್ನು ಪರಿಪಕ್ವವಾಗಿ ವಿಚಾರ ಮಾಡಿ ಏನು ತೊಂದರೆ ಅವರಿಗೆ ಆಗಿದೆ ಎಂಬುದನ್ನು ನೋಡಬೇಕು. ಇವರು ೧೯೮೫ರಲ್ಲಿ ಆರಿಸಿ ಬಂದ ಕಾಲದಲ್ಲಿ ಇದು ಜನರಿಗೆ ಸ್ಪಂದಿಸತಕ್ಕ ಸರ್ಕಾರ, ಅವರ ಆಶ್ರಯಕ್ಕೆ ಬರತಕ್ಕ ಸರ್ಕಾರ ಎಂದು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಆದರೆ ಇಲ್ಲಿ ಡಕಾಯಿತ್ ಆದಾಗ ಜನರಿಗೆ ೧೬ನೇ ತಾರೀಖು ಈ ಬಗ್ಗೆ ಕೇಳಿದಾಗ ನಾವು ಈ ಬಗ್ಗೆ ನಮ್ಮ ಲೆವೆಲ್ ಬೆಸ್ಟ್ ಟ್ರೈ ಮಾಡುತ್ತಿದ್ದೇವೆ. ಆದರೆ ಕಳೆದ ೩ ವರ್ಷಗಳಿಂದ ನಾವು ನಮ್ಮ ಪೋಲೀಸ್ ಫೋರ್ಸ್‌ನ್ನು ಇನ್‌ಕ್ರೀಸ್ ಮಾಡುವುದಕ್ಕೆ ಆಗಿಲ್ಲವೆಂದು ಹೇಳಿದ್ದಾರೆ. ಇವತ್ತು ತಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇರುವುದರಿಂದ ನಾನು ಈ ವಿಷಯವನ್ನು ಇಲ್ಲಿ ಚರ್ಚೆ ಮಾಡುತ್ತಿದ್ದೇನೆ. ಇವತ್ತು ತಮ್ಮ ಕಾರ್ಯಪಾಲನೆಯನ್ನು ತಾವು ಮಾಡಬೇಕಾಗಿದೆ. ಇವತ್ತು ಯಾವ ಧಾಟಿಯಲ್ಲಿ ಹೋಗಬೇಕೋ ಆ ರೀತಿ ತಾವು ಹೋಗುವುದರಲ್ಲಿ ವಿಫಲವಾಗಿದ್ದೀರಿ. ಸರ್ಕಾರಕ್ಕೆ ನಾಚಿಗೆ ಬರತಕ್ಕ ರೀತಿಯಲ್ಲಿ ತಾವು ಹೋಗಿದ್ದೀರಿ. ಬೆಂಗಳೂರು ನಗರದಲ್ಲಿ ದರೋಡೆ ಆಗುತ್ತಿರುವುದರ ಬಗ್ಗೆ ಸಾಕಷ್ಟು ಪ್ರಸ್ತಾಪಗಳು ಆಗುತ್ತಾ ಇವೆ. ಇವತ್ತು ನೀವು ಕೇವಲ ೧೯೮೪ರಲ್ಲಿ ಇಷ್ಟು, ೧೯೮೫ರಲ್ಲಿ ಇಷ್ಟು ಕೊಲೆಗಳು ಆಗಿವೆ ಎಂದು ಕೇವಲ ಅಂಕಿಸಂಖ್ಯೆಗಳನ್ನು ಕೊಡುವುದರಿಂದ ಏನೂ ಪ್ರಯೋಜನ ವಿಲ್ಲ. ಇಂತಹ ಅಂಕಿಅಂಶಗಳನ್ನು ತಾವು ಶಾಸನಸಭೆಗಳಲ್ಲಿ ಹೇಳಿದ್ದನ್ನು ಜನರು ಪತ್ರಿಕೆಗಳಲ್ಲಿ ಓದಿ ಅವನ್ನು ಒಪ್ಪುವುದಕ್ಕೆ ಹೋಗುವುದಿಲ್ಲ. ಇವತ್ತು ಹೊರಗಡೆ ಜನರ ಅಭಿಪ್ರಾಯ ವಿರುದ್ಧವಾಗಿದೆ. ಇವತ್ತು ತಾವು ಪತ್ರಿಕೆಗಳಲ್ಲಿ ಬಂದ ವಿಷಯವನ್ನು ನೋಡಿರಬಹುದು. ಕಳೆದ ೩-೪ ತಿಂಗಳ ಅವಧಿಯಲ್ಲಿ ಯಾವ ರೀತಿ ಸರ್ಕಾರ ತನ್ನ ಹೊಣೆಗಾರಿಕೆಯಲ್ಲಿ ವಿಫಲವಾಗಿದೆ ಎಂಬುದನ್ನು ಅವರು ತಿಳಿಯ ಹೇಳಿದ್ದಾರೆ.

೩-೦೦ ಪಿ. ಎಂ.

ಪ್ರಜಾಪ್ರಭುತ್ವದಲ್ಲಿ, ಶಾಸನ ಸಭೆಯಲ್ಲಿ ನಾವು ಹೇಳತಕ್ಕ ಮಾತನ್ನು ತಾವು ಗಂಭೀರವಾಗಿ ತೆಗೆದು ಕೊಳ್ಳುತ್ತಿಲ್ಲ. ಇದರ ಬಗ್ಗೆ ಯಾವರೀತಿ ಪರಿಹಾರವನ್ನು ಕಂಡುಹಿಡಿಯುತ್ತೀರಿ ಎಂಬುದನ್ನು ತಿಳಿಸ ಬೇಕು. ಈಗ ಕರ್ನಾಟಕ ರಾಜ್ಯದಲ್ಲಿ ಏನು ದರೋಡೆ, ಭಯದ ವಾತಾವರಣ ಇದೆ, ಇದರ ಬಗ್ಗೆ ತಾವು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ? ಕರ್ನಾಟಕ ರಾಜ್ಯದಲ್ಲಿ ದರೋಡೆಗಳಾಗಿರ ಬಹುದು, ಕೊಲೆಗಳೂ ಆಗಿರಬಹುದು. ಆದರೆ ಇವತ್ತು ಆಗಿರತಕ್ಕಂಥ ದರೋಡೆ ಭಯಂಕರವಾಗಿರು ವುದರ ಬಗ್ಗೆ ತಾವು ಸೂಕ್ತ ಕ್ರಮ ಕೈಗೊಂಡು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಏತಕ್ಕೆಂದರೆ, ಈಗ ರಾಜ್ಯದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಎಲ್ಲಾ ಕಡೆ ಪ್ರತಿಭಟನೆ ಆಗುತ್ತಿದೆ. ಸರ್ಕಾರ ಇದಕ್ಕೆ ನಾಚಿಕೆ ಪಡಬೇಕು. ಇಂತಹ ಒಂದು ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬಂದಿದೆ. ಇದರ ಬಗ್ಗೆ ತಾವು ರಿಪೋರ್ಟ್‌ನಲ್ಲಿ ಏನನ್ನೂ ಹೇಳಿಲ್ಲ. ಇವತ್ತು ನಿಮ್ಮ ಜವಾಬ್ದಾರಿಯನ್ನು ಬಹಳ ಹಗುರವಾಗಿ ತೆಗೆದುಕೊಳ್ಳುತ್ತಿದ್ದೀರಿ. ತಾವು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಪದೇ ಪದೇ ಮಾತನಾಡುತ್ತೀರಿ. ಒಂದು ವರ್ಷಕಾಲದ ಮೌಲ್ಯಾಧಾರಿತ ರಾಜಕಾರಣ ಈಗ ಏನಾಯಿತು. ಇದರ ಬಗ್ಗೆ ಜನತೆ ಯಾವರೀತಿ ತಿಳಿದುಕೊಂಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಾಗಿದೆ. ಇಷ್ಟು ದರೋಡೆ ಗಳು ಆದರೂ ಕೂಡ ನಾನು ತಮ್ಮ ರಾಜೀನಾಮೆ ಕೇಳುತ್ತಿಲ್ಲ. ತಾವು ಗೃಹಖಾತೆಯನ್ನು ಬಿಟ್ಟುಬಿಡಿ ಎಂದು ಕೇಳುತ್ತಿಲ್ಲ. ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ತಾವು ಮಂತ್ರಿ ಗಳಾಗಿದ್ದಿರಬಹುದು. ಮಾನ್ಯ ಮುಖ್ಯಮಂತ್ರಿ ಗಳೂ ಕೂಡ ಆ ಸಂಪುಟದ ಮಂತ್ರಿಗಳು ಆಗಿದ್ದರು. ಆ ಕಾಲದಲ್ಲಿ ಮಂಥಾಗಿರಿಯಲ್ಲಿ ಯಾವ ಒಂದು ಘಟನೆ ಆಯಿತು, ಯಾವ ಒಂದು ಗೋಲಿಬಾರ್ ಆಯಿತು ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳುತ್ತೇನೆ. ಅಲ್ಲಿ ಅವತ್ತು ಲಾ ಅಂಡ್ ಆರ್ಡರ್ ಪ್ರಶ್ನೆ ಇರಲಿಲ್ಲ. ಆದರೂ ಕೂಡ ಅಂದಿನ ಗೃಹ ಸಚಿವರಾಗಿದ್ದ ಶ್ರೀ ರಾಮರಾವ್ ರಾಜೀನಾಮೆಯನ್ನು ಕೊಟ್ಟರು. ಆದರೆ, ನಾವು ಇವತ್ತು ನೀವು ರಾಜೀನಾಮೆಯನ್ನು ಕೊಡಿ ಎಂದು ಹೇಳುತ್ತಿಲ್ಲ. ಈ ಸರ್ಕಾರ ಏನಿದೆ, ಇದು ಚಾಣಕ್ಯತನದ ಉತ್ತರವನ್ನು ಕೊಡುತ್ತಿದ್ದು, ಇದರಿಂದ ಜನರು ಬೇಸತ್ತಿದ್ದಾರೆ. ಇವತ್ತು ವಿರೋಧಪಕ್ಷದವರ ಮತ್ತು ಜನರ ಮನಸ್ಸಿನಲ್ಲಿರತಕ್ಕ ಭಾವನೆ, ವೇದನೆ ಏನಿದೆ ಎಂಬುದನ್ನು ಅರ್ಥ

ಮಾಡಿಕೊಳ್ಳಬೇಕು. ಇವತ್ತು ಜನರು ರಾತ್ರಿ-ಹಗಲು ಏನು ಯೋಚನೆ ಮಾಡುತ್ತಿದ್ದಾರೆ ಮತ್ತು ಯಾವುದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ತಾವು ತಿಳಿದುಕೊಳ್ಳಬೇಕು. ನಾವು ಏನಾದರೂ ತಮ್ಮ ರಾಜೀನಾಮೆಯನ್ನು ಕೇಳಿದರೆ ಅದರಿಂದ ಏನೂ ಪರಿಹಾರ ಆಗುವುದಿಲ್ಲ. ನೀವು ಇಷ್ಟು ಸಿಬ್ಬಂದಿ ಇಟ್ಟುಕೊಂಡು, ೯೩ ಕೋಟಿ ರೂಪಾಯಿ ಖರ್ಚು ಮಾಡತಕ್ಕಂತಹ ಇಂತಹ ದೊಡ್ಡ ಇಲಾಖೆಯ ಹೊಣೆಗಾರಿಕೆಯನ್ನು ಹೊತ್ತಿದ್ದೀರಿ. ಇವತ್ತಿನ ದಿವಸ, ದರೋಡೆಕಾರರನ್ನು ಹಿಡಿದು ಕೊಟ್ಟವರಿಗೆ ೧ ಲಕ್ಷ ರೂಪಾಯಿ ಬಹುಮಾನವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಮತ್ತೊಂದು, ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಇದರ ಬಗ್ಗೆ ಬಂದಿದೆ. ಗಂಡಹೆಂಡತಿ ಇಬ್ಬರು ಏನು ಮಾತನಾಡುತ್ತಿದ್ದರು ಎಂದರೆ......"ಬೆಂಗಳೂರಿನಲ್ಲಿ ಹಲವಾರು ದರೋಡೆಗಳು ಆಗುತ್ತಿವೆ. ಭಯದ ವಾತಾವರಣ ನಿರ್ಮಾಣವಾಗಿದೆ. ಇವತ್ತು ಸರ್ಕಾರ ಏನೂ ಮಾಡುತ್ತಿಲ್ಲ. ೧ ಲಕ್ಷ ರೂಪಾಯಿ ಬಹುಮಾನವನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ದರೋಡೆಕೋರರು ಏನಾದರೂ ನಮ್ಮ ಮನೆಗೆ ಬಂದರೆ, ನಾವು ಬಾಗಿಲು ತೆಗೆಯೋಣ, ಅವರಿಗೆ ನಮಸ್ಕಾರ ಮಾಡಿ, ಅವರಿಗೆ ಬೇಕಾದ ತಿಂಡಿಮಾಡಿ ಕೊಟ್ಟು, ಅವರು ಕೇಳಿದಂತಹ ಆಭರಣಗಳನ್ನೆಲ್ಲಾ ಬಿಚ್ಚಿಕೊಡೋಣ. ಆಗ ಅವರು ಉಪ್ಪುತಿಂದವರಿಗೆ ಎಂದೂ ದ್ರೋಹ ಮಾಡುವುದಿಲ್ಲ ಎಂದು ಅವರು ನಮಗೆ ಆಭರಣಗಳನ್ನು ಎಲ್ಲಾ ವಾಪಸ್ಸುಕೊಟ್ಟು, ನಮಸ್ಕಾರ ಎಂದು ಹೇಳಿ ವಾಪಸ್ಸು ಹೋಗುತ್ತಾರೆ"......ಈ ರೀತಿ ಅವರು ಮಾತನಾಡಿಕೊಳ್ಳುತ್ತಿದ್ದುದು ಪತ್ರಿಕೆಯಲ್ಲಿ ಪ್ರಸ್ತಾಪವಾಗಿದೆ. ಅಂದರೆ, ಜನರು ಯಾವರೀತಿ ರಕ್ಷಣೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ. ನಿಮ್ಮ ಪೋಲೀಸ್ ಇಲಾಖೆಯಲ್ಲಿ ೪೫ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಆದರೂ ಕೂಡ ಜನತೆಗೆ ಏನೂ ಪ್ರಯೋಜನವಾಗುತ್ತಿಲ್ಲ. ಇವತ್ತು ಪ್ಲೇನನ್ನು ಹೈಜಾಕ್ ಮಾಡತಕ್ಕಂತಹ ವಾತಾವರಣ ನಿರ್ಮಾಣವಾಗಿದೆ ಅನೇಕ ಆಧುನಿಕ ಸಲಕರಣೆಗಳನ್ನು ಕಳ್ಳರು ಮತ್ತು ದರೋಡೆಕೋರರು ಉಪಯೋಗಿಸುತ್ತಿದ್ದಾರೆ. ಆದರೆ, ಇವತ್ತು ಏನಾಗಿದೆಯೆಂದರೆ, ನಿಮ್ಮ ಪೋಲೀಸ್ ವಾಹನಗಳು ಸರಿಯಿಲ್ಲ. ಅವುಗಳಿಗೆ ವೈರ್‌ಲೆಸ್, ರೇಡಿಯೋ ಇರುವುದಿಲ್ಲ. ಆದ್ದರಿಂದ ತಾವು ತಮ್ಮ ಪೋಲೀಸ್ ಇಲಾಖೆಯನ್ನು ಮಾಡರ್ನೈಸ್ ಮಾಡಬೇಕಾಗುತ್ತದೆ. ಆ ರೀತಿ ಮಾಡಿದರೆ, ಕಳ್ಳರನ್ನು ಹಿಡಿಯಲು ಅನುಕೂಲವಾಗುತ್ತದೆ. ನಮ್ಮ ರಾಜ್ಯದಲ್ಲಿರತಕ್ಕಂತಹ ೪ ಕೋಟಿ ಜನಸಂಖ್ಯೆಗೆ ಅನುಗುಣವಾಗಿ ಈ ಪೋಲೀಸ್ ಫೋರ್ಸನ್ನು ಸಹ ನಾವು ಹೆಚ್ಚು ಮಾಡಬೇಕಾಗುತ್ತದೆ. ಇದರ ಬಗ್ಗೆ ತಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಕರ್ನಾಟಕ ರಾಜ್ಯದಲ್ಲಿ ಜನತೆಗೆ ಸರಿಯಾದಂತಹ ರಕ್ಷಣೆ ಕೊಡುವುದಕ್ಕೆ ಸಾಧ್ಯವಾಗದಿದ್ದರೆ, ನೀವು ಏತಕ್ಕೆ ಇಲ್ಲಿ ಕುಳಿತಿದ್ದೀರಿ ? ಈಗ ಜನರಲ್ಲಿ ಭಯದ ವಾತಾವರಣ ಮೂಡಿದೆ. ದಕ್ಷಿಣ ಕನ್ನಡದಲ್ಲೇ ಆಗಲಿ, ಮತ್ತಿತರ ಕಡೆಗಳಲ್ಲೇ ಆಗಲಿ, ಯಾವರೀತಿಯಾಗಿದೆ ಎಂಬುದರ ಬಗ್ಗೆ ಈಗಾಗಲೇ ನಾವು ಬೇರೆ ಬೇರೆ ನಿಲುವಳಿ ಸೂಚನೆ ಹಾಗೂ ಬೇರೆ ಬೇರೆ ವಿಧಿಗಳ ರೂಪಗಳಲ್ಲಿ ಈ ಮನೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ವೈಟ್ ಫೀಲ್ಡ್‌ನಲ್ಲಿ ದಿಲೀಪ್‌ಸಿಂಗ್ ಕೊಲೆಯಾಯಿತು. ಅಲ್ಲಿಗೆ ತಾವೂ ಸಹ ಹೋಗಿ ಕಣ್ಣೀರು ಸುರಿಸಿ ಬಂದಿರಿ. ನಾನೂ ಕೂಡ ಹೋಗಿದ್ದೆ. ಕರ್ನಾಟಕದ ಜನತೆ, ಜನತಾ ಸರ್ಕಾರವನ್ನು ಆರಿಸಿ ಕಳುಹಿಸಿದ್ದು, ಅವರಿಗೆ ರಕ್ಷಣೆ ಕೊಡುವುದಕ್ಕೋಸ್ಕರ ವಾಗಿ. ಆದರೆ, ಇವತ್ತು ರಾಜ್ಯದ ಎಲ್ಲಾ ಕಡೆ ಈ ರೀತಿ ಕಳ್ಳತನ, ದರೋಡೆಗಳು ನಡೆಯುತ್ತಿವೆ. ಇನ್ನು, ದಕ್ಷಿಣ ಕನ್ನಡದಲ್ಲಿ ದರೋಡೆ ಆಗಿದ್ದರ ಬಗ್ಗೆ ಮಾನ್ಯ ಗೃಹ ಸಚಿವರು ಸ್ಪಾಟಿಗೆ ಹೋದರು. ಅವರು ಹೊರಟುಹೋದ ಕೆಲವೇ ನಿಮಿಷಗಳಲ್ಲಿ ಒಬ್ಬ ಪೋಲೀಸರೂ ಆ ಸ್ಪಾಟ್‌ನಲ್ಲಿ ಇರಲಿಲ್ಲ. ಅವರು ಇರುವಾಗ ಎಲ್ಲಾ ಸಿಬ್ಬಂದಿ ವರ್ಗದವರೂ ಇರುತ್ತಾರೆ. ಅವರು ಹೋದಮೇಲೆ ಯಾರೂ ಇರುವುದಿಲ್ಲ ಶ್ರೀ ಮಾನ್ ರಾಚಯ್ಯನವರು ಕರ್ನಾಟಕ ರಾಜ್ಯದ ೪ ಕೋಟಿ ಜನತೆಯ ಗೃಹ ಸಚಿವರಾಗಿದ್ದಾರೆ. ಅವರು ತೆಗೆದುಕೊಳ್ಳತಕ್ಕಂತಹ ಕ್ರಮದಿಂದ ಸಿಬ್ಬಂದಿ ಎಲ್ಲಾ ಕಡೆ ತಲ್ಲಣವಾಗಬೇಕು, ಹಾಗೂ ಭಯದ ವಾತಾವರಣ ಉಂಟಾಗಬೇಕು. ಇಂತಹ ವಾತಾವರಣವನ್ನು ನಮ್ಮ ರಾಜ್ಯದಲ್ಲಿ ನೀವು ಸ್ಥಾಪನೆ ಮಾಡಬೇಕು. ಆದರೆ ಈ ದಿಸೆಯಲ್ಲಿ ನೀವು ಫೈಲ್ ಆಗಿದ್ದೀರಿ

ನಾನು ಪದೇ ಪದೇ ಹೇಳುತ್ತಿದ್ದೇನೆ, ನಿಮ್ಮ ಇಲಾಖೆ ಇವತ್ತು ನಾಚಿಕೆ ಬರತಕ್ಕ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವ ಮಾತನ್ನು ನಾನು ಒತ್ತಿ ಹೇಳಬೇಕಾಗಿದೆ.

ಶ್ರೀ ಎಂ. ರಾಮಪ್ಪ.— ಒಳ್ಳೆಯ ಚರ್ಚೆ ನಡೆಯುತ್ತಿರಬೇಕಾದರೆ ಆ ಕಡೆ ಜನತಾ ಪಕ್ಷದ ಸದಸ್ಯರು ಯಾರೂ ಕೂಡ ಸೀಟಿನಲ್ಲಿಲ್ಲ. ಅವರಿಗೆ ಇದರ ಬಗ್ಗೆ ಆಸಕ್ತಿ ಇಲ್ಲವೆಂದು ಕಾಣುತ್ತದೆ.

ಶ್ರೀ ಧರ್ಮಸಿಂಗ್,— ಅವರು ಊಟಕ್ಕೆ ಹೋಗಿದ್ದಾರೆಂದು ಕಾಣುತ್ತವೆ. ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳದ್ದೇನೆ. ಪರ್‌ಫಾರ್ಮೆನ್ಸ್ ಬಜೆಟ್ ಸೆಕ್ರೆಟರಿಯೇಟ್‌ಗೆ ಸಂಬಂಧಪಟ್ಟಂತೆ ಇರುವುದಿಲ್ಲ. ಹಿಂದೆ ನಾನು ಮಂತ್ರಿಯಾಗಿದ್ದಾಗಲೂ ಇದೇ ರೀತಿ ಆಗುತ್ತಿತ್ತು. ಈ ಇಲಾಖೆಯು ಬಗ್ಗೆ ಸರ್ಕಾರ ಏನು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ ಎಂಬುದನ್ನು ನಾವು ನೋಡಿದೆವು. ಆಡ್ಮಿನಿಸ್ಟ್ರೇಟಿವ್ ರಿಪೋರ್ಟ್‌ನಲ್ಲಿ ಅದನ್ನು ಕೊಡಬೇಕಾಗಿತ್ತು, ಆದರೆ ಕೊಟ್ಟಿಲ್ಲ. ನಿಮ್ಮ ಇಲಾಖೆಯು ವಾರ್ಷಿಕ ವರದಿಯಲ್ಲಿ ಕೊಟ್ಟಿರುವ ಪ್ರಕಾರವೇ ೧೯೮೪ನೇ ಸಾಲಿನಲ್ಲಿ ೭೮,೪೮೪ ಎಲ್ಲ ರೀತಿಯ ಅಪರಾಧಗಳೂ ಆಗಿವೆಯೆಂದು ಹೇಳಿದ್ದೀರಿ. ೧೯೮೫ನೇ ಇಸವಿಯಲ್ಲಿ ೮೨,೯೧ ಅಪರಾಧಗಳು ನಡೆದಿವೆ. ಅಂದರೆ ೧೯೮೪ನೇ ಸಾಲಿಗೂ, ೧೯೮೫ನೇ ಸಾಲಿಗೂ ಹೋಲಿಕೆಮಾಡಿ ನೋಡಿದರೆ ಸುಮಾರು ೫ ಸಾವಿರ ಕೇಸುಗಳು ಜಾಸ್ತಿಯಾಗಿವೆ. ಇದು ನಮ್ಮ ಕರ್ನಾಟಕ ರಾಜ್ಯದಲ್ಲಿ ಕೇವಲ ರಿಜಿಸ್ಟರ್ ಆಗಿರತಕ್ಕ ಕೇಸುಗಳು ಮಾತ್ರ. ಕೆಲವು ಸಂದರ್ಭಗಳಲ್ಲಿ ಎಷ್ಟೋ ಕೇಸುಗಳು ರಿಜಿಸ್ಟರೇ ಆಗುವುದಿಲ್ಲ, ಕಾರಣ ಬಡವರು ಪೋಲಿಸ್ ಸ್ಟೇಷನ್‌ಗೆ ದೂರು ಕೊಡಲು ಹೋದರೆ ಅವನನ್ನು ಯಾರೂ ಕೇಳುವುದಿಲ್ಲ. ಇದರಿಂದಾಗಿ ಅವರು ಹೆದರಿಕೊಂಡು ಕೇಸನ್ನು ಕೊಡುವುದಕ್ಕೆ ಹೋದಾಗ ಅದನ್ನು ರಿಜಿಸ್ಟರೇ ಮಾಡಿಕೊಳ್ಳುವುದಿಲ್ಲ. ನಿಮ್ಮ ಅಂಕಿಅಂಶದ ಪ್ರಕಾರ ೫ ಸಾವಿರ ಕೇಸುಗಳು ಏನು ಜಾಸ್ತಿ ನಡೆದಿವೆ ಇವುಗಳಲ್ಲಿ ಅಲ್ಪ ಸಂಖ್ಯಾತರು, ಹಿಂದುಳಿದ ವರ್ಗದವರು ಮತ್ತು ಹರಿಜನ ಗಿರಿಜನರ ಮೇಲೆ ಎಷ್ಟು ಅತ್ಯಾಚಾರಗಳಾಗಿವೆ ಎಂಬುದನ್ನು ಹೇಳಬೇಕಾಗಿತ್ತು. ಆದರೆ ತಾವು ಅದನ್ನು ಹೇಳಿಲ್ಲ. ನಾನು ಈಗಾಗಲೇ ಹೇಳಿದಂತೆ ಬಡವರು ಪೋಲಿಸ್ ಸ್ಟೇಷನ್‌ಗೆ ದೂರನ್ನು ತೆಗೆದುಕೊಂಡು ಹೋದಾಗ ಅದನ್ನು ರಿಜಿಸ್ಟರ್ ಮಾಡಿಕೊಳ್ಳಬಾರದೆಂದು ಮೇಲಿನಿಂದ ಒತ್ತಡ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಹೇಳಿಕೆಯ ಪ್ರಕಾರ ಹಿಂದಿನ ವರ್ಷಗಳಿಗೆ ಹೋಲಿಸಿದರೆ ೧೯೮೪ ರಿಂದ ೧೯೮೫ರ ಅವಧಿಯಲ್ಲಿ ಹೆದ್ದಾರಿ ದರೋಡೆಗಳು ಹೆಚ್ಚಾಗಿವೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಈ ಪ್ರಕರಣಗಳು ೧ ಲಕ್ಷಕ್ಕಿಂತಲೂ ಹೆಚ್ಚು ನಡೆದಿವೆ. ಇದನ್ನು ಕಡಿಮೆ ಮಾಡುವುದಕ್ಕೆ ಆಗಿಲ್ಲ. ಬರುವ ಶನಿವಾರ "ದಲಿತರ ದಿನಾಚರಣೆ" ಯನ್ನು ಮಾಡುತ್ತೀರೆಂದು ನನಗೆ ತಿಳಿದು ಬಂದಿದೆ. ಯಾವ ಯಾವ ದಲಿತರ ಮೇಲೆ ಅತ್ಯಾಚಾರ ನಡೆದಿದೆ ಅದನ್ನೆಲ್ಲಾ ರಿಜಿಸ್ಟರ್ ಮಾಡಬೇಕಾಗುತ್ತದೆ. ಆದರಲ್ಲೂ ಕೂಡ ನೀವು ಯಾವರೀತಿ ಅವರಿಗೆ ಪರಿಹಾರವನ್ನು ಕೊಡುತ್ತೀರೆಂಬುದೂ ನಮಗೆ ಗೊತ್ತಿಲ್ಲ. ಇವತ್ತು ಪೋಲಿಸ್ ಇಲಾಖೆಯಲ್ಲಿ ವಿವಿಧ ಹುದ್ದೆಗಳಲ್ಲಿರುವ ಎಲ್ಲ ಪೋಲಿಸ್ ಅಧಿಕಾರಿಗಳೂ ಮತ್ತು ಪೋಲಿಸ್ ಪೇದೆಗಳೂ ಎಲ್ಲಾ ಸೇರಿ ಒಟ್ಟು ೪೫,೪೨೮ ಜನ ಇದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕ ೪ ಕೋಟಿ ಪ್ರಜಾ ಸಂಖ್ಯೆಗೆ ಈ ಪೋಲಿಸ್ ಸಿಬ್ಬಂದಿ ಸಾಕೆ ? ಎಲ್ಲಿಯಾದರೂ, ಏನಾದರೂ ಗಲಭೆಗಳಾದರೆ ಅದನ್ನು ಹತೋಟಿಗೆ ತರಲು ಇಲ್ಲಿಂದ ಪೋಲಿಸರನ್ನು ಆ ಸ್ಥಳಕ್ಕೆ ಕಳುಹಿಸಿಕೊಡಲು ನಿಮಗೆ ಸಾಧ್ಯವೆ ? ಬೆಂಗಳೂರಿನಲ್ಲಿ ಪೋಲಿಸ್ ಇಲಾಖೆಗೆ ಒದಗಿಸಿರುವ ವ್ಯಾನುಗಳು ಏನೇನೂ ಸಾಲದಾಗಿದೆ. ಇದನ್ನು ಇನ್ನೂ ಹೆಚ್ಚು ಮಾಡಬೇಕು. ಪೋಲೀಸರಿಗಿಂತ ದರೋಡೆಕೋರರು, ಕಳ್ಳರು ಆಧುನಿಕ ಆಯುಧಗಳನ್ನು ಹೊಂದಿರುತ್ತಾರೆ. ಅವರನ್ನು ನಿಮ್ಮ ಪೋಲೀಸರು ಹೆದರಿಸುವುದು ಕಷ್ಟವಾಗಿದೆ, ಆದ್ದರಿಂದ ನಿಮ್ಮ ಪೋಲೀಸರಿಗೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಿ ಅವುಗಳನ್ನು ಉಪಯೋಗಿಸುವ ಬಗ್ಗೆ ತರಬೇತಿ ಕೊಡಬೇಕು. ಪೋಲೀಸ್ ಠಾಣೆಗಳನ್ನೂ ಹೆಚ್ಚು ಮಾಡಬೇಕು. ಇವತ್ತು ಈ ವ್ಯವಸ್ಥೆ ನಮ್ಮ ರಾಜ್ಯದಲ್ಲಿಲ್ಲವೆ ! ಇದನ್ನು ಮಾನ್ಯ ಗೃಹ ಸಚಿವರು ಯೋಜನೆ ಮಾಡಿದ್ದಾರೆಯೆ ? ನಿಮ್ಮ ವಾರ್ಷಿಕ ವರದಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಐ.ಜಿ., ಡಿ.ಐ.ಜಿ., ಎಸ್.ಪಿ., ಸರ್ಕಲ್‌ಇನ್‌ಸ್ಪೆಕ್ಟರ್, ಎಸ್.ಐ.ಗಳು ಪಿ.ಸಿ.ಗಳು ಎಷ್ಟೆಷ್ಟು ಜನರಿದ್ದಾರೆ ಎಷ್ಟು ಪೋಲೀಸ್ ಠಾಣೆಗಳಿವೆ ಎಂಬುದನ್ನು ಹೇಳಿದ್ದೀರೇ ಹೊರತು ಆಡಳಿತ ಕುಸಿದಿರುವ ಬಗ್ಗೆ ಒಂದೇ ಒಂದು ಮಾತನ್ನೂ ನೀವು ಹೇಳಿಲ್ಲ. ದರೋಡೆಗಳು ಆದಮೇಲೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನೂ. ಜನರ ಅಭಿಪ್ರಾಯವನ್ನೂ ನೀವು ಸಂಗ್ರಹಿಸಿ ನೋಡಿ, ನಿಮ್ಮ ಆಡಳಿತ ಕುಸಿದಿದೆಯೋ ? ಇಲ್ಲವೆ ? ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ನಿಮ್ಮ ಗೃಹ ಇಲಾಖೆಗೆ ೯೭ ಕೋಟಿ ರೂಪಾಯಿಗಳ ಬೇಡಿಕೆಯನ್ನು ಸದನದ ಮುಂದಿಟ್ಟು ನಮ್ಮ ಅನುಮೋದನೆಯನ್ನು ಕೇಳುತ್ತಿದ್ದೀರಿ. ೧೯೮೪–೮೫ ನೇ ಸಾಲಿಗೆ ೭೯.೧೫ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಸಿಕೊಂಡಿದ್ದು ಅದರಲ್ಲಿ ೭೦.೯೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ೧೯೮೫–೮೬ ನೇ ಸಾಲಿಗೆ ೯೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು ೧೯೮೬–೮೭ ನೇ ಸಾಲಿಗೆ ೯೮.೭೯ ಕೋಟಿ ರೂಪಾಯಿಗಳ ಅಂದಾಜು ವೆಚ್ಚವನ್ನು ಮಂಡಿಸಿದ್ದೀರಿ. ಅಂದರ ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಪೋಲೀಸ್ ಇಲಾಖೆಗೆ ಖರ್ಚು ಮಾಡುತ್ತಿದ್ದೀರಿ. ಆಡಳಿತ ದೃಷ್ಟಿಯಿಂದ ಈ ಇಲಾಖೆಗೆ

ಹೆಚ್ಚಿನ ಹಣ ಖರ್ಚಾದರೂ ಪರವಾಗಿಲ್ಲ. ಆದರೆ ಇವತ್ತು ರಾಜ್ಯದ ಜನತೆಗೆ, ಅವರ ಮಾನ, ಪ್ರಾಣಗಳ ರಕ್ಷಣೆಯ ಬಗ್ಗೆ ತಾವು ಹೆಚ್ಚಿನ ಆಸಕ್ತಿ ವಹಿಸಬೇಕು. ನಾನು ಪದೇ ಪದೇ ಈ ಮಾತನ್ನು ಹೇಳಬೇಕಾಗಿಲ್ಲ. ತಾವು ತಮ್ಮ ಆಡಳಿತವನ್ನು ಚೆನ್ನಾಗಿ ನಿರ್ವಹಿಸಿಕೊಂಡು ಹೋಗಬೇಕು. ಆದರೆ ಆರೀತಿ ಹೋಗುತ್ತಿಲ್ಲ. ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಈಗ ಸದನದಲ್ಲಿಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಮೇಲೆ, ಬುಡಕಟ್ಟು ಜನಾಂಗದ ಮೇಲೆ ಬಹಳಷ್ಟು ಅಟ್ರಾಸಿಟೀಸ್ ನಡೆಯುತ್ತಿವೆ ನಿಮ್ಮ ಲೆಕ್ಕದ ಪ್ರಕಾರ ರಿಜಿಸ್ಟರ್ ಆಗಿರತಕ್ಕ ಕೇಸುಗಳ ಸಂಖ್ಯೆ ೨೩೫೪. ಇದು ೧೯೮೪-೮೫ನೇ ಸಾಲಿನಲ್ಲಿ ಆಗಿರತಕ್ಕದ್ದು. ಇದು ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಮೇಲೆ ನಡೆದಿರತಕ್ಕದ್ದು, ತಾವು ಈ ಕೇಸುಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟು ೨೩೫೪ ಕೇಸುಗಳ ಪೈಕಿ ನೀವು ಛಾರ್ಜ್‌ಷೀಟ್ ಹಾಕಿರತಕ್ಕದ್ದು ೧೪೫೨, ಇವುಗಳಲ್ಲಿ ಕನ್ವಿಕ್ಟ್ ಆಗಿರತಕ್ಕದ್ದು ೧೦ ಕೇಸುಗಳಲ್ಲಿ ಮಾತ್ರ ೧೩೧೦ ಸೀರೀಸ್ ಆಫ್ ಮರ್ಡರ್, ರೇಪ್, ಇನ್ನೂ ಮುಂತಾದ ಬೇರೆ ಬೇರೆ ರೀತಿಯ ಕೇಸುಗಳಿವೆ. ಇದು ನಿಮ್ಮ ಸಾಧನೆಯೆ ? ಇದನ್ನೆಲ್ಲಾ ನೋಡಿದರೆ ನಿಮ್ಮ ಇಲಾಖೆ ನಿದ್ದೆ ಮಾಡುತ್ತಿದೆಯೇನೋ ಎಂಬ ಭಾವನೆ ಜನರ ಮನಸ್ಸಿನಲ್ಲಿ ಸ್ಪಷ್ಟವಾಗಿ ಮೂಡುತ್ತದೆ. ಇವತ್ತು ಜನರಿಗೆ ನ್ಯಾಯ ಬೇಕಾಗಿದೆ. ಆದರೆ ನೀವು ಅವರಿಗೆ ನ್ಯಾಯವನ್ನು ಕೊಡುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ.

ಈಗಾಗಲೇ ತಾವು ಬಡ್ಜೆಟ್ ೨೩ನೇ ಪೇಜಿನಲ್ಲಿ ಏನು ಹೇಳಿದ್ದೀರಿ ಎಂದರೆ ೧೯೭೮ರಲ್ಲಿ ೭೮,೪೭೪ ಕೇಸಸ್‌ಗಳು ಇದ್ದರೆ ೧೯೮೫ರಲ್ಲಿ ೮೨,೦೮೦ ಸಾವಿರ ಕೇಸಸ್ ತೋರಿಸಿದ್ದೀರಿ. ಅವು ಯಾವುವೆಂದರೆ ಮರ್ಡರ್, ಡಕಾಯಿಟ್ಸ್, ರಾಬರೀಸ್, ತೆಫ್ಟ್ಸ್, ರಯಟಿಂಗ್ಸ್, ಕಿಡ್ನಾಪಿಂಗ್, ಚೀಟಿಂಗ್ಸ್ ಇವೇ ಮುಂತಾದ ಕ್ರಿಮಿನಲ್ ಕೇಸಸ್ ಎಲ್ಲವನ್ನೂ ಹಾಕಿದ್ದೀರಿ. ಆದರೆ ಇವತ್ತಿನ ದಿವಸ ಹೆಣ್ಣು ಮಕ್ಕಳ ಕೊರಳಲ್ಲಿ ಹಾಕಿರತಕ್ಕಂಥ ಚೈನುಗಳನ್ನು ತೆಗೆದುಕೊಂಡು ಹೋಗಿರತಕ್ಕಂಥದ್ದರ ಬಗ್ಗೆ ಎಷ್ಟೋ ಪತ್ರಿಕೆಗಳಲ್ಲಿ ಬಂದಿರುತ್ತದೆ. ಅಂಥ ಪ್ರಕರಣಗಳು ಎಷ್ಟೆಂಬುದನ್ನು ತಾವು ಉಲ್ಲೇಖ ಮಾಡಿಲ್ಲ. ೨೩ನೇ ಪಟ್ಟಿಯಲ್ಲಿ ರೇಪ್ ಕೇಸಸ್ ಬಗ್ಗೆ ಉಲ್ಲೇಖವಿಲ್ಲ. ರಾಜ್ಯದಲ್ಲಿ ಎಷ್ಟೋ ಡೌರಿ ಡೆತ್ಸ್ ಆಗಿರತಕ್ಕಂಥದ್ದು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಎಷ್ಟು ಕೇಸ್‌ಗಳನ್ನು ಪತ್ತೆ ಮಾಡಿದ್ದೀರಿ ಎಂಬ ಅಂಕಿಅಂಶಗಳನ್ನು ತಾವು ಕೊಟ್ಟಿಲ್ಲ. ಅದಕ್ಕೆ ನಾನು ಕೇಳುತ್ತಿದ್ದೇನೆ. ಸರ್ಕಾರದವರು ಜನತೆಗೆ ಯಾವರೀತಿ ರಕ್ಷಣೆಯನ್ನು ಕೊಡುತ್ತೀರಿ ಎಂದು ಕೇಳಬೇಕಾಗಿದೆ. ಇದು ಆ ಕಡೆ ಮತ್ತು ಈ ಕಡೆ ಕುಳಿತಿರತಕ್ಕಂಥವರು ಪ್ರಶ್ನೆಯನ್ನು ಕೇಳತಕ್ಕಂಥದ್ದು ಅಲ್ಲ ಈವತ್ತಿನ ದಿವಸ ರಾಜ್ಯದ ಜನತೆಗೆ ರಕ್ಷಣೆಯನ್ನು ಕೊಡತಕ್ಕಂಥ ಜವಾಬ್ದಾರಿ ಸರ್ಕಾರದ ಮೇಲೆ ಇದೆ, ಸೈಕಲ್‌ಗಳ ಮೇಲೆ ಬಂದು ರಸ್ತೆಯಲ್ಲಿ ಓಡಾಡುತ್ತಿರತಕ್ಕಂಥ ಹೆಣ್ಣುಮಕ್ಕಳ ಕೊರಳಿನಲ್ಲಿ ಹಾಗಿರತಕ್ಕಂಥ ಮಾಂಗಲ್ಯದ ಸರಗಳನ್ನು ಕಿತ್ತುಕೊಂಡು ಹೋಗುತ್ತಿರುವ ಬಗ್ಗೆಯಾಗಲಿ, ಡೌರಿ ಡೆತ್ಸ್ ಬಗ್ಗೆಯಾಗಲಿ ನಿಮ್ಮ ಪೋಲೀಸ್ ರಿಪೋರ್ಟ್‌ನಲ್ಲಿ ಯಾವುದನ್ನೂ ಕೊಟ್ಟಿಲ್ಲ. ಸರ್ಕಾರದ ವತಿಯಿಂದ ರಿಪೋರ್ಟ್ ಕೊಡತಕ್ಕಂಥ ವೇಳೆಯಲ್ಲಿ ದರೋಡೆ, ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಈ ಒಂದು ಹಿನ್ನೆಲೆಯಲ್ಲಿ ಒಳ್ಳೆಯ ರಿಪೋರ್ಟ್ ಕೊಡುತ್ತೀರೆಂದು ನಾವು ನಿರೀಕ್ಷಣೆ ಮಾಡಿದ್ದೆವು. ಆದರೆ ಅಂಥ ಒಂದು ರಿಪೋರ್ಟ್‌ನ್ನು ತಾವು ಕೊಟ್ಟಿಲ್ಲ ಈಗಾಗಲೇ ಕೋಲಾರದಲ್ಲಿ ನಡೆದಂಥ ಒಂದು ಪ್ರಕರಣದ ಬಗ್ಗೆ ಬಹಳ ಹಗುರವಾಗಿ ಹೇಳತಕ್ಕಂಥ ಮಾತನ್ನು ಹೇಳಿದ್ದೀರಿ. ಇದೇ ರೀತಿಯಲ್ಲಿ ನೀವು ಆಡಳಿತವನ್ನು ಮುಂದುವರಿಸಿಕೊಂಡು ಹೋದರೆ, ಇದೇ ರೀತಿಯಲ್ಲಿ ಆಡಳಿತದ ದಿಟ್ಟ ವೈಖರಿಯನ್ನು ಮುಂದುವರೆಸಿಕೊಂಡು ಹೋದರೆ ಕರ್ನಾಟಕದ ಜನತೆ ಎಂದಿಗೂ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ೧೯೮೩ನೇ ಇಸವಿಯಲ್ಲಿ ಹೊಸ ಸರ್ಕಾರದ ರಚನೆಯನ್ನು ಮಾಡಿದಮೇಲೆ ಕರ್ನಾಟಕದ ಜನತೆ ನಮ್ಮನ್ನು ಆರಿಸಿ ಆಶೀರ್ವದಿಸಿ ಕಳುಹಿಸಿಕೊಟ್ಟಿದ್ದಾರೆಂದು ಅವರೆಲ್ಲರ ಆಶೋತ್ತರಗಳನ್ನು ಈಡೇರಿಸತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಇದೆ ಎಂದು ಹೇಳಿ ಯಾವ ರೀತಿ ಸ್ಲೋಗನ್ಸ್ ಕೊಟ್ಟಿರುತ್ತಿರೋ ಅದೇ ರೀತಿಯಲ್ಲಿ ಅದೆಲ್ಲವನ್ನು ಕರ್ನಾಟಕದ ಜನತೆಗೆ ಕೊಟ್ಟಿರುತ್ತೀರಾ ಎಂದು ಕೇಳಬೇಕಾಗಿದೆ. ಮಾನ್ಯ ಎನ್. ಟಿ. ರಾಮ್‌ರಾವ್‌ರವರ ರಾಜೀನಾಮೆಯನ್ನು ಉಲ್ಲೇಖಮಾಡಿ ಹೇಳಿರುತ್ತೀರಿ. ಎಷ್ಟೋ ಜನರು ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟಮೇಲೆ ಕಳವಳಗೊಂಡರು ಎಂದು ಹೇಳಿದರು, ಯಾರೂ ಕಳವಳ ಪಟ್ಟಿದ್ದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರಾಜಿನಾಮೆಯನ್ನು ಕೊಟ್ಟರೆ ನಮ್ಮ ಗತಿ ಏನಾಗುತ್ತದೆ ಎಂದು ಕಾಂತಿರಂಗದಿಂದ ಜನತಾಕ್ಕೆ ಹೋದರಲ್ಲ ಅವರು ನಮ್ಮ ಗತಿ ಏನಾಗುತ್ತದೋ

ಎಂದು ಚಿಂತೆಗೆ ಒಳಗಾಗಿರಬಹುದು. ಈವತ್ತು ರಾಜೀನಾಮೆಯಿಂದ ದೇಶಕ್ಕೆ ಎಲ್ಲ ಸಂದರ್ಭದಲ್ಲಿಯೂ ಪಾಠವನ್ನು ಕಲಿಸುತ್ತೇವೆಂದು ಅರ್ಥೈಸಿಕೊಂಡು ಅದರ ನೆರಳಲ್ಲಿ ಈ ರೀತಿಯಾದ ಆಡಳಿತವನ್ನು ನಡೆಸಿಕೊಂಡು ಹಗುರವಾಗಿ ಉತ್ತರವನ್ನು ಕೊಡತಕ್ಕಂಥದ್ದು ಅಲ್ಲ. ನಿರ್ದಿಷ್ಟವಾಗಿ ಉತ್ತರವನ್ನು ದೇಶಕ್ಕೆ ಕೊಡಬೇಕು. ರಾಜ್ಯಕ್ಕೆ ಕೊಡಬೇಕು. ಹೆದ್ದಾರಿಗಳಲ್ಲಿ ದರೋಡೆ, ಕೊಲೆಗಳು ಇದೆಲ್ಲ ಕರ್ನಾಟಕದಲ್ಲಿ ನಡೆಯುತ್ತಿರಬೇಕಾದರೆ ತಾವು ಸರಿಯಾಗಿ ಅರ್ಥೈಸಿಕೊಂಡು ಮುಂದೆ ಹೋಗಬೇಕು. ಈಗ ಒಂದು ಉದಾಹರಣೆಯನ್ನು ಕೊಡುವುದಾದರೆ, ವೈಟ್ ಫೀಲ್ಡ್‌ನಲ್ಲಿ ನಡೆದಂಥ ಒಂದು ನಿದರ್ಶನವನ್ನು ಕೊಡುವುದಾದರೆ ಲಾಯರು ಒಬ್ಬರು ಅಕ್ರಮವಾಗಿ ಅತ್ಯಾಚಾರ ನಡೆದಂಥ ಪ್ರಕರಣದಲ್ಲಿ ಅದನ್ನು ಹಿಡಿಸಲಿಕ್ಕೆ ಹೋದುದಕ್ಕೆ ತಮ್ಮ ಪೋಲೀಸ್ ಇನ್‌ಸ್ಪೆಕ್ಟರ್‌ರವರು ಅವರನ್ನೇ ಹೊಡೆದಿರತಕ್ಕಂಥ ನಿದರ್ಶನವಿರುತ್ತದೆ. ತಮಗೆ ಹೇಳಬೇಕಾದರೆ ಎಷ್ಟೋ ಇಂಥ ಪ್ರಕರಣಗಳು ನಡೆದಿರುತ್ತವೆ. ಅದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಬೇಕು. ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ ಮಾಡುತ್ತೇವೆಂದು ಹೇಳಿದರೆ ಅದರಿಂದ ಏನೂ ಪರಿಹಾರ ದೊರೆಯುವುದಿಲ್ಲ. ಪೋಲೀಸ್ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ಜನರು ಹೇಳಿದಾಗ ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಬೇಕು. ಅದನ್ನು ಬಿಟ್ಟು ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ ಮಾಡುತ್ತೇವೆಂದು ಹೇಳಿದರೆ ಅದರಿಂದ ಏನೂ ಪರಿಹಾರ ದೊರೆಯುವುದಿಲ್ಲ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈವತ್ತಿನ ದಿವಸ ಎಲ್ಲಿ ನೋಡಿದರೂ ಲ್ಯಾಕ್ ಆಫ್ ಕೋಆರ್ಡಿನೇಷನ್ ಸಿಬ್ಬಂದಿ ವರ್ಗದಲ್ಲಿ ಅಧಿಕಾರಿಗಳಲ್ಲಿ ಉಂಟಾಗಿರುತ್ತದೆ ಎಲ್ಲೂ ಕೂಡ ಕೋಆರ್ಡಿನೇಷನ್ ಕಾಣುತ್ತಿಲ್ಲ. ಎಲ್ಲ ಒಂದು ದೃಷ್ಟಿಯಿಂದ ಫಿಗ್ಯೂರ್‌ಸ್ ಆಗಿದೆ. ಜನರಿಗೆ ರಕ್ಷಣೆಯನ್ನು ಕೊಡತಕ್ಕಂಥ ಕೆಲಸ ಕಾರ್ಯತ, ಆಗುತ್ತಿಲ್ಲ. ಈವತ್ತು ತಮ್ಮ ಗಮನಕ್ಕೆ ಬಂದಿರಬಹುದು. ೬ನೇ ಜನವರಿ ೧೯೮೬ರಲ್ಲಿ Police reforms for the Public ಎಂದು ಮದ್ರಾಸಿನ ಶ್ರೀ ಸಿ. ವಿ. ನರಸಿಂಹನ್‌ರವರು ಒಂದು ಜರ್ನಲ್‌ನ್ನು ಪಬ್ಲಿಷ್ ಮಾಡಿರುತ್ತಾರೆ. ಇದು ಕೇವಲ ಕರ್ನಾಟಕ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಬೇಕೆಂದು ಹೇಳುತ್ತಿಲ್ಲ, ಎಲ್ಲ ಕಡೆಯಲ್ಲೂ ಬರಬೇಕು. ಬೇರೆ ಕಡೆ ಕಾಂಗ್ರೆಸ್-ಐ ಸರ್ಕಾರ ಇದೆ ಎಂದು ತಾವು ಹೇಳಬಹುದು, ೧೯೮೩ರಲ್ಲಿಯೇ ಉಲ್ಲೇಖ ಮಾಡಿ ಬಹಳ ಒಳ್ಳೆಯ ಸಜೆಷನ್ ಕೊಟ್ಟಿದ್ದಾರೆ. ಆ ರೀತಿ ಮಾಡಿದರೆ ಪೋಲೀಸ್ ಖಾತೆಯಲ್ಲಿರುವ ನ್ಯೂನತೆಯನ್ನು ತೊಡೆದು ಇನ್ನೂ ಹೆಚ್ಚಿನ ರೀತಿಯಲ್ಲಿ ಸಂಪೂರ್ಣವಾದ ರಕ್ಷಣೆಯನ್ನು ಮಾಡತಕ್ಕಂಥ ಕೆಲಸವನ್ನು ಮಾಡಬಹುದೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಧಿಕಾರಗಳ ಲೆವಲ್‌ನಲ್ಲಿ, ಸ್ಟೇಟ್ ಲೆವಲ್‌ನಲ್ಲಿ ಮಾಡ್ರನೈಸ್ ಮಾಡಿ ಸ್ಟ್ರೀಮ್‌ಲೈನ್ ಮಾಡಿದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಹೋಗಬಹುದು. ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ನಾನು ಮೊದಲೇ ಪ್ರಸ್ತಾಪ ಮಾಡಿದಹಾಗೆ ಈ ಇಲಾಖೆ ಬಹಳ ಮಹತ್ವವಾದಂಥ ಇಲಾಖೆ ಈ ಇಲಾಖೆಯನ್ನು ನಿರ್ವಹಣೆ ಮಾಡತಕ್ಕಂಥ ರೀತಿಯಲ್ಲಿ ಪಕ್ಷಾತೀತವಾಗಿ ಇರಬೇಕು. ೧೯೭೭ನೇ ಇಸವಿಯಿಂದ ೧೯೮೦ನೇ ಇಸವಿಯವರೆಗೆ ಸಾಂಗ್ಲಿಯಾನ ಎನ್ನತಕ್ಕಂಥ ಪೋಲೀಸ್ ಅಧಿಕಾರಿಯೊಬ್ಬರು. ಅವರು ನನಗೆ ಗೊತ್ತಿಲ್ಲ, ನಾನು ಸಚಿವನಾಗಿದ್ದಾಗ ಫುಡ್ ಅಂಡ್ ಸಿವಿಲ್ ಸಪ್ಲೈಸ್‌ನಲ್ಲಿ ಒಂದೆರಡು ವರ್ಷ ಕೆಲಸ ಮಾಡಿದರು ಎಂದು ಕಾಣುತ್ತದೆ. ಅವರು ಅಲ್ಲಿ ಕೆಲಸ ಮಾಡುತ್ತಿದ್ದಂಥ ಸಂದರ್ಭದಲ್ಲಿ ಎಲ್ಲ ಕಡೆ ಒಂದು ರೀತಿಯಾದ ಭಯದ ವಾತಾವರಣ ಇತ್ತು. ನಮ್ಮ ಕಡೆ ಈಗಲೂ ಹೇಳುತ್ತಾರೆ. ಹೆಂಡತಿಗೆ ಗಂಡ ಏನಾದರೂ ಕಿರುಕುಳ ಕೊಟ್ಟರೆ ಸಾಂಗ್ಲಿಯಾನರವರಿಗೆ ತಿಳಿಸುತ್ತೇನೆಂದರೆ ಹೆದರುತ್ತಿದ್ದರು. ಆ ರೀತಿಯಾಗಿ ಎಫೆಕ್ಟೀವ್ ಆಗಿ ಲಾ ಅಂಡ್ ಆರ್ಡರ್ ಕಂಟ್ರೋಲ್ ಮಾಡತಕ್ಕಂಥ ಆಫೀಸರನ್ನು ಬೆಂಗಳೂರಂಥ ಪಟ್ಟಣದಲ್ಲಿ ಕೂಡಿಸಿಕೊಳ್ಳತಕ್ಕಂಥದ್ದಲ್ಲ. ಅಂಥ ಆಫೀಸರುಗಳನ್ನು ಫೀಲ್ಡ್‌ನಲ್ಲಿ ಬಿಡಬೇಕು. ಕಾಗದದ ಅಭಿಪ್ರಾಯವನ್ನು ತೆಗೆದುಕೊಂಡು ರಿಪೋರ್ಟ್ ಬರೆಯುತಕ್ಕಂಥ ಆಫೀಸರುಗಳನ್ನು ಹಾಕತಕ್ಕಂಥದ್ದು ಸರಿಯಲ್ಲ. ಕಳ್ಳತನ, ದಾಬರಿಗಳನ್ನು ೨೪ ಗಂಟೆಗಳಲ್ಲಿ ಕಂಡುಹಿಡಿಯತಕ್ಕಂಥದ್ದು ಸಾಮರ್ಥ್ಯವಿರಬೇಕು. ಅಂಥ ಆಫೀಸರುಗಳು ಇದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಈವೊತ್ತಿನ ದಿವಸ ಅಂಥವರ ಕೊರತೆಯಿಂದಾಗಿ ನಿಮ್ಮ ದಿಯಿಂದ ಕೆಲಸಗಳಾಗುತ್ತಿಲ್ಲ ಎನ್ನುವ ಭಾವನೆ ಸಾರ್ವಜನಿಕರ ಮನಸ್ಸಿನಲ್ಲಿ ಉಂಟಾಗಿದೆ. ಇದನ್ನು ನಿವಾರಣೆ ಮಾಡತಕ್ಕಂಥ ಪ್ರಯತ್ನ ಮಾಡಬೇಕು. ಮತ್ತು ಈ ಒಂದು ಇಲಾಖೆಯ ಬಗ್ಗೆ ಉತ್ತರವನ್ನು ಕೊಡತಕ್ಕಂಥ ಕಾಲದಲ್ಲಿ ಲಘುವಾಗಿ ಉತ್ತರವನ್ನು ಕೊಡುತ್ತಾ ಹೋದರೆ ನಾಲ್ಕು ಕೋಟಿ ಜನರಿಗೆ ಸಂರಕ್ಷಣೆಯನ್ನು ಕೊಡತಕ್ಕಂಥ ಅಧಿಕಾರವನ್ನು ಹೊತ್ತು ಸರಿಯಾದ ಉತ್ತರವನ್ನು ಕೊಡದೆ ಹೋದರೆ ವಿಧಾನ ಸಭೆಯಲ್ಲೇ ಅಲ್ಲ ಎಲ್ಲ ಕಡೆಯಲ್ಲೂ ನೀವು ಹೆದರುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ.

೩-೩೦ ಪಿ. ಎಂ.

ಈಗ ಶ್ರೀ ವೀರಣ್ಣನವರ ಇಲಾಖೆ ಇದೆ. ಶ್ರೀ ವೀರಣ್ಣನವರು ಪ್ರಾಮಾಣಿಕ ವ್ಯಕ್ತಿ. ಇದು ಏನಾಗುತ್ತದೆ ಎಂದರೆ, ಶ್ರೀರಾಮಕೃಷ್ಣ ಹೆಗ್ಗಡೆಯವರು ಬಹಳ ಚಾಣಾಕ್ಷರು. ನೆಪಮಾತ್ರಕ್ಕೆ ಬೇರೆಯವರಿಗೆ ಖಾತೆಯನ್ನು ಕೊಡುತ್ತಾರೆ. ಇಲ್ಲಿ ಏನು ಮಾಡಿದ್ದಾರೆ ಎಂದರೆ ಸಣ್ಣ ಉಳಿತಾಯ ಖಾತೆಯನ್ನು ಇವರಿಗೆ ಕೊಟ್ಟಿದ್ದಾರೆ. ಶ್ರೀವೀರಣ್ಣ ಅಂಥ ಪ್ರಾಮಾಣಿಕ ವ್ಯಕ್ತಿಗೆ ಕಲೆಕ್ಷನ್ ಮಾಡುವುದಕ್ಕೆ ಹಚ್ಚಿದ್ದಾರೆ, ಯಾರಿಗೆ ನಿಜವಾಗಿ ಜನರ ಬಗ್ಗೆ ಅನುಕಂಪ ಇರುತ್ತದೆ. ಅವರಿಗೆ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಅವರೇನೋ ತಮ್ಮ ತಮ್ಮ ಕೆಲಸ ಮಾಡಿಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗಿದೆ ಅಂದರೆ ಎಲ್ಲವನ್ನೂ ಸೇರಿಸಿಬಿಟ್ಟಿದ್ದಾರೆ. ಹಿಂದೆ ಎಲ್ಲಾ ಒಂದೊಂದು ಇಲಾಖೆಯ ಬೇಡಿಕೆ ಬಗ್ಗೆಯೂ ಮೂರು ದಿವಸ ಚರ್ಚೆ ಆಗುತ್ತಿತ್ತು. ಅರ್ಬನ್ ಡೆವಲಪ್‌ಮೆಂಟ್‌ಗೆ ಸಂಬಂಧಿಸಿದ ಬೇಡಿಕೆಗಳ ಬಗ್ಗೆ ಮೂರು ದಿವಸ ಚರ್ಚೆ ಮಾಡಿದ್ದು ನನಗೆ ನೆನಪಿದೆ. ಇಲ್ಲಿ ಪಾಪ ಅಬ್ಕಾರಿ ಮಂತ್ರಿಗಳು ಇಲ್ಲಿ ಇದ್ದಾರೆ. ಪಾಪ, ಇವರ ಕೈಗೆ ಈ ಖಾತೆಯನ್ನು ಕೊಟ್ಟುಬಿಟ್ಟಿದ್ದಾರೆ. ೧೯೮೫ನೇ ಇಸವಿಯಲ್ಲಿ ಮತ್ತೊಮ್ಮೆ ಅಧಿಕಾರದಲ್ಲಿ ಬರುತ್ತೇವೆ ಎಂದು ೧೯೮೪ರಲ್ಲಿ ಇವರಿಗೆ ಗೊತ್ತಿರಲಿಲ್ಲ. ಮತ್ತೊಮ್ಮೆ ಬರುತ್ತೇವೆ ಎಂದು ಗೊತ್ತಿದ್ದರೆ ಇವರು ಇಂಥ ಕೆಲಸವನ್ನು ಮಾಡುತ್ತಲೇ ಇರಲಿಲ್ಲ. ಈ ಬಾಟಲಿಂಗ್ ವಿಷಯ ಈಗ ಮಾತನಾಡಿದರೆ ಅದು ಸಬ್‌ಜ್ಯೂಡಿಸ್ ಆಗುತ್ತದೆ. ಆದರೆ ಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟ ವಿಷಯ ಇದೆ. ಯಾವ ಸನ್ನಿವೇಶದಲ್ಲಿ ಅದನ್ನು ಕೊಟ್ಟರು ಎಂಬುದನ್ನು ನೋಡಿದರೆ, ಹೈಕೋರ್ಟಿನ ಜಡ್ಜ್‌ಮೆಂಟ್ ಬಂತು. ಕರ್ನಾಟಕ ರಾಜ್ಯದಲ್ಲಿ ಹಸ್ತಕ್ಷೇಪ ಮಾಡಿ ಯಾವ ರೀತಿ ಮುಖ್ಯಮಂತ್ರಿ ತಮಗೆ ಬೇಕಾದವರಿಗೆ ಕಾಂಟ್ರಾಕ್ಟ್ ಕೊಟ್ಟಿರತಕ್ಕಂಥಾದ್ದು ಇದರ ಬಗ್ಗೆ ಇಂತಹ ತೀರ್ಪು ಬಂದಿರುವುದು ಕರ್ನಾಟಕದ ಇತಿಹಾಸದಲ್ಲೇ ಇನ್ನೊಂದು ಇಲ್ಲ. ಹಿಂದೆ ಭೂಮಾರೆಡ್ಡಿ ಕೇಸ್ ಆಯಿತು. ಆಗ ಹೇಗೋ ಉಳಿದುಕೊಂಡು ಬಂದರು. ಆದರೆ ಈ ಕೇಸ್‌ನಲ್ಲಿ ಉಳಿಯಲಿಕ್ಕೆ ಆಗಲಿಲ್ಲ. ಈ ತುತ್ತನ್ನು ನುಂಗಲಿಕ್ಕೆ ಬರಲಿಲ್ಲ. ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್ ಅವರು ಈ ರಾಜೀನಾಮೆಯನ್ನು ಯಾವ ಸಂದರ್ಭದಲ್ಲಿ ಕೊಟ್ಟರು, ಕಡೆಗೆ ಏನು ಆಯಿತೆಂಬುದನ್ನು ಹೇಳಿದ್ದಾರೆ. ಶ್ರೀ ಜಿಗಜಿಣಗಿಯವರು ಪಾಪ ಅವರಿಗೇನು ಗೊತ್ತು ? ೧೯೮೫ರಲ್ಲಿ ಮತ್ತೆ ಬರುತ್ತೇವೆ ಎಂದು ಗೊತ್ತಿದ್ದರೆ ಇದು ನಡೆಯುತ್ತಲೇ ಇರಲಿಲ್ಲ. ಏನೋ ಮಾಡಿಬಿಟ್ಟರು. ೧೯೮೫ರಲ್ಲಿ ಕೂಡ ದೊಡ್ಡದಾಗಿ ಘೋಷಣೆ ಮಾಡಿದರು. ಚುನಾವಣಾ ಪ್ರಣಾಳಿಕೆಯಲ್ಲಿ ಸಹ ದೊಡ್ಡದಾಗಿ ಉದ್ದವಾದ ಭಾಷಣ ಮಾಡಿದರು. ಈಗ ಮಾತ್ರ ತಾತ್ವಿಕ ವಿಚಾರಗಳನ್ನು ತಲೆಮೇಲೆ ಹೊತ್ತುಕೊಂಡು ಮಾತನಾಡುತ್ತಿದ್ದಾರೆ. ನಾನು ಹೇಳುತ್ತೇನೆ, ಇದು ಅಕಸ್ಮಾತ್ತಾಗಿ ಬಂದಂಥ ಸರ್ಕಾರ.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು.—ಬಹಿರಂಗ ಸಭೆಯಲ್ಲಿ ಬಂದು ಮಾತನಾಡಿ.

ಶ್ರೀ ಧರ್ಮಸಿಂಗ್.—ಓಹೋ, ಬಹಿರಂಗ ಸಭೆಯಲ್ಲೂ ಬಂದು ಮಾತನಾಡೋಣ. ನಮ್ಮದು ರಾಷ್ಟ್ರೀಯ ಪಕ್ಷ ಇದೆ. ಇದು ಕರ್ನಾಟಕ ರಾಜ್ಯದ ಪಕ್ಷ ಅಲ್ಲ, ರಾಷ್ಟ್ರದಲ್ಲೇ ಪ್ರಮುಖವಾದ ಪಕ್ಷ ನಮ್ಮದು.

ಅಧ್ಯಕ್ಷರು.—ವಿಷಯದ ಮೇಲೆ ಮಾತನಾಡಿ.

ಶ್ರೀ ಧರ್ಮಸಿಂಗ್.—ಆಮೇಲೆ ಅಧ್ಯಕ್ಷರೇ, ಸಾರಾಯಿ ಅಂಗಡಿಗಳಿಗೆ ಅನುಮತಿ ಕೊಟ್ಟಿದ್ದಾರೆ. ಹೀಗೆ ಅಂಗಡಿಗಳನ್ನು ಕೊಡಬೇಕಾದರೆ ಕೆಲವು ನಾರ್ಮ್ಸ್ ಇರುತ್ತವೆ. ಆದರೆ ಇವುಗಳನ್ನೆಲ್ಲಾ ಉಲ್ಲಂಘನೆ ಮಾಡಿ ಈ ಅಂಗಡಿಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ, ಕಾಲೇಜುಗಳ ಎದುರುಗಡೆಗೇ ಈ ಅಂಗಡಿಗಳು ಇವೆ. ಹೀಗೆ ಮಾಡಿದರೆ ಇದರ ಪರಿಣಾಮ ಏನಾಗಬಹುದು ಎಂದು ಯೋಚನೆ ಮಾಡಿದ್ದೀರಾ ? ಆದಾಯ ಬರತಕ್ಕದ್ದೇ ಮುಖ್ಯವಾದುದಲ್ಲ. ಜನರ ಸಮಸ್ಯೆಗಳು ಇಷ್ಟು ಇವೆ. ಅವುಗಳನ್ನೂ ಕೂಡ ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಇವತ್ತು ಸಾರಾಯಿ ಅಂಗಡಿಗಳನ್ನು ಇಡಲು ತಮಗೆ ಇಷ್ಟಬಂದಹಾಗೆ ಅನುಮತಿ ಕೊಡುತ್ತಿದ್ದರೆ ಮತ್ತೊಂದೆಡೆ

ಸಾರಾಯಿ ತಯಾರು ಮಾಡತಕ್ಕವರೇ ಬೇರೆ, ಅದನ್ನು ತುಂಬಲು ಬಾಟಲುಗಳನ್ನು ತಯಾರು ಮಾಡತಕ್ಕವರೇ ಬೇರೆ, ಅದಕ್ಕೆ ಬೇಕಾದ ಮುಚ್ಚಳಗಳನ್ನು ತಯಾರು ಮಾಡತಕ್ಕವರೇ ಬೇರೆ.

ಒಬ್ಬರು ಮಾನ್ಯ ಸದಸ್ಯರು.—ಮಾರುವವರೂ ಬೇರೆ.

ಶ್ರೀ ಧರ್ಮಸಿಂಗ್.— ಹೌದು ಇಷ್ಟಾದಮೇಲೆ ಸಾರಾಯಿಯನ್ನು ಮಾರಾಟ ಮಾಡುವವರೇ ಬೇರೆ. ಸಾರಾಯಿ ಬೇರೆಯವರು ತಯಾರು ಮಾಡಿ, ಬಾಟಲು ಬೇರೆಯವರು ತಯಾರು ಮಾಡಿ, ಮುಚ್ಚಳವನ್ನು ಬೇರೆಯವರು ತಯಾರು ಮಾಡಿ ಹೀಗೆ ಬೇರೆಬೇರೆಯವರು ಇದನ್ನು ಮಾಡುತ್ತಿರುವುದರ ಬಗ್ಗೆ ಸರ್ಕಾರ ಇಲ್ಲಿ ಯಾವ ಉಲ್ಲೇಖವನ್ನೂ ಮಾಡಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀ ಜಿಗಜಿಣಗಿಯವರು ಹೇಳಬೇಕು. ಈ ಒಂದು ವ್ಯವಸ್ಥೆಮೇಲೆ ಸರ್ಕಾರದ ಏನು ನಿಯಂತ್ರಣ ಇದೆ ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಇದರಲ್ಲಿ ಸಾಕಷ್ಟು ಅಕ್ರಮಗಳು ಕೂಡ ನಡೆಯುತ್ತಿವೆ. ಬೇರೆ ಬೇರೆ ಅವ್ಯವಹಾರಗಳೂ ಆಗುತ್ತಿವೆ. ಇಲಾಖೆಯವರಿಗೆ ಇದರಮೇಲೆ ಯಾವ ಹತೋಟಿಯೂ ಇಲ್ಲವೆಂದು ನಾನು ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ದಿವಸ ಬೆಳಿಗ್ಗೆ ಪತ್ರಿಕೆಯಲ್ಲಿ ನೋಡಿದ್ದೇನೆ ಔಷಧಿ ಸೇವನೆ ದುಷ್ಪರಿಣಾಮದಿಂದ ಎಂತಹ ದುರಂತ ಸಂಭವಿಸಿದೆ ಎಂಬುದು, ಜಮ್ಮು-ಕಾಶ್ಮೀರದಲ್ಲಿ ಕ್ರಮ ತೆಗೆದುಕೊಂಡಿದ್ದಾರೆ. ಇವತ್ತು ಏನಾಗಿದೆ ಎಂದರೆ ಮೆಡಿಕಲ್ ಶಾಪ್‌ಗಳಲ್ಲಿ ಗಾಂಜಾ ಅಫೀಮು ಮುಂತಾದುವುಗಳನ್ನು ಮಾತ್ರೆ ರೂಪದಲ್ಲಿ ಮಾರಾಟ ಮಾಡತಕ್ಕಂಥ ಪ್ರವೃತ್ತಿ ಬೆಳೆದುಕೊಂಡು ಬಂದಿದೆ. ಇದು ಎಲ್ಲಾ ಕಡೆಗೂ ಮಾರಾಟ ಆಗುತ್ತಿದೆ. ಇದರ ಬಗ್ಗೆ ನಿಮ್ಮ ಡಿಪಾರ್ಟ್‌ಮೆಂಟಿನವರು ಎಷ್ಟು ಕೇಸುಗಳನ್ನು ಹಿಡಿದಿದ್ದಾರೆ? ಮತ್ತು ತಪ್ಪಿತಸ್ಥರ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದನ್ನೂ ಕೂಡ ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕು. ಈ ಸದನ ಪ್ರಾರಂಭವಾದಾಗಿನಿಂದಲೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಸ್ತಾಪ ಆಗಿರುವುದು, ಮಾನ್ಯ ಗೃಹ ಮಂತ್ರಿಗಳಿಗೆ ಸಂಬಂಧಿಸಿದ ಇಲಾಖೆಯ ಲಾ ಅಂಡ್ ಆರ್ಡರ್ ಸಮಸ್ಯೆ ಬಗ್ಗೆ, ದರೋಡೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಕೊಲೆಗಳ ಬಗ್ಗೆ, ರೇಪ್‌ಗಳ ಬಗ್ಗೆ ಚರ್ಚೆಯಾಗಿದೆ. ಎಲ್ಲಾ ಕಡೆಯಲ್ಲೂ ಕಾನೂನು ವ್ಯವಸ್ಥೆ ಮುರಿದುಹೋಗಿದೆ. ಇನ್ನು, ಎರಡನೇ ಸ್ಥಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚರ್ಚೆಯಾಗಿರತಕ್ಕಂಥ ವಿಷಯವೆಂದರೆ, ಶ್ರೀ ಜಿಗಜಿಣಗಿಯವರಿಗೆ ಸಂಬಂಧಿಸಿದ ಖಾತೆ ಅಂದರೆ ಅಬ್ಕಾರಿ ವಿಷಯದ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ಕರ್ನಾಟಕ ರಾಜ್ಯದ ವಿಧಾನಸಭೆ ಮಾತ್ರವಲ್ಲ, ರಾಷ್ಟ್ರಮಟ್ಟದಲ್ಲಿ, ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡ ಈ ಒಂದು ವ್ಯವಹಾರದ ಬಗ್ಗೆ ಚರ್ಚೆಯಾಗಿದೆ. ಯಾವ ಕಾರಣಕ್ಕಾಗಿ ಶ್ರೀ ಹೆಗಡೆಯವರು ರಾಜೀನಾಮೆಯನ್ನು ಕೊಡಬೇಕಾಗಿ ಬಂತು ಎಂಬುದರ ಬಗ್ಗೆ ಚರ್ಚೆ ಕೂಡ ಇಲ್ಲಿ ಆಯಿತು. ನನಗೆ ಇನ್ನೂ ಹೆಚ್ಚು ವಿಷಯಗಳನ್ನು ಕುರಿತು ಮಾತನಾಡಬೇಕೆಂಬ ಇಚ್ಛೆ ಇದ್ದರೂ, ಕಾಲಾವಕಾಶ ಕಡಿಮೆ ಇರುವುದರಿಂದ, ಇವತ್ತು ಏನು ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅವುಗಳ ಬಗ್ಗೆ ನಾನು ತೀವ್ರವಾಗಿ ವಿರೋಧವನ್ನು ವ್ಯಕ್ತಪಡಿಸುತ್ತಿದ್ದೇನೆ. ಇನ್ನೂ ನಾಲ್ಕೈದು ಮಂದಿ ಗೆಳೆಯರು ಮಾತನಾಡುವವರಿದ್ದಾರೆ. ಶ್ರೀ ರಾಚಯ್ಯನವರಿಗೆ ಮತ್ತು ಶ್ರೀ ಜಿಗಜಿಣಗಿಯವರಿಗೆ ಕೆಲವು ವಿಷಯಗಳನ್ನು ನನಗ ತಿಳಿದಮಟ್ಟಿಗೆ ಪ್ರಸ್ತಾಪ ಮಾಡಿದ್ದೇನೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ)—ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹಸಚಿವರು ಏನು ವಿಷಯವನ್ನು ಸಭೆಯ ಮುಂದಿಟ್ಟಿದ್ದಾರೆ, ಅದನ್ನು ನಾನು ಪೂರ್ಣವಾಗಿ ಸಮರ್ಥನೆ ಮಾಡುತ್ತಾ ಈ ವಿಷಯದಲ್ಲಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೮೬೧ರಲ್ಲಿ ಈ ಇಲಾಖೆ ನಮ್ಮ ದೇಶದಲ್ಲಿ ಅಸ್ತಿತ್ವಕ್ಕೆ ಬಂತು. ಸುಮಾರು ೧೨೫ ವರ್ಷ ಆಗಿದೆ ಈ ಪೋಲೀಸ್ ಇಲಾಖೆ ನಮ್ಮ ದೇಶದಲ್ಲಿ ಅಸ್ತಿತ್ವಕ್ಕೆ ಬಂದು. ೧೯೪೭ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂತು ೧೯೪೭ರಿಂದ ಸುಮಾರು ೩೮ ವರ್ಷಗಳ ಕಾಲ ಯಾವುದೇ ಕಾಂಗ್ರೆಸ್ ರಾಜ್ಯದವರು ಈ ಇಲಾಖೆಯನ್ನು ಮಾರ್ಪಾಡು ಮಾಡಬೇಕೆಂದು ಪ್ರಯತ್ನ ಮಾಡಿದ್ದಾರಾ? ಅವರ ಬಗ್ಗೆ ನಾವು ಸ್ವಲ್ಪ ವಿಚಾರ ಮಾಡೋಣ ಸ್ವಾತಂತ್ರ್ಯ ಬಂದನಂತರ ಯಾವ ಪೋಲೀಸ್ ಇಲಾಖೆ ಇತ್ತೋ ಅದೇ ಪೋಲೀಸ್ ಇಲಾಖೆ ೩೦ ವರ್ಷಗಳ ಕಾಲ ಇದುವರೆವಿಗೂ ನಡೆದುಕೊಂಡು ಬಂದಿದೆ. ಅದನ್ನು ಯಾವ ರೀತಿ ಮಾರ್ಪಾಡು ಮಾಡುವುದಕ್ಕೂ

ಪ್ರಯತ್ನ ಮಾಡಿಲ್ಲ. ಸಮಾಜ ಯಾವ ರೀತಿ ಪರಿವರ್ತನೆ ಆಗುತ್ತಾ ಹೋಗುತ್ತದೊ ಮಾರ್ಪಾಡು ಆಗುತ್ತಾ ಹೋಗುತ್ತಾದೋ ಅದಕ್ಕೆ ಹೊಂದಿಕೊಳ್ಳತಕ್ಕ ರೀತಿಯಲ್ಲಿ ಪೋಲೀಸರನ್ನು ಪರಿವರ್ತನೆ ಮಾಡುವುದಕ್ಕೆ ಈ ಕಾಂಗ್ರೆಸ್ ಜನ ಪ್ರಯತ್ನ ಮಾಡಿದರೇ? ಅದಕ್ಕೆ ಸೊನ್ನೆ ಕೊಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಕಾಂಗ್ರೆಸ್ ಪಕ್ಷ ಆಡಳಿತ ನಡೆಸುತ್ತಾ ಇದೆಯೇ? ಶ್ರೀ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ತಾವುಗಳು ಪ್ರಮೋಟ್ ಆಗಿ ಅಲ್ಲಿದ್ದು ನಮಗೆ ಹೇಳುತ್ತಾ ಇದ್ದೀರಲ್ಲಾ.

ಶ್ರೀ ವೇದಾಂತ ಹೆಮ್ಮಿಗೆ.- ನೀವು ಪೋಲೀಸ್ ಇಲಾಖೆಯಂತ ಏನು ಬೆಳೆಸಿದಿರಿ ಅದನ್ನು ಪರಿವರ್ತನೆ ಮಾಡುತ್ತಾ ಇದ್ದೇವೆ. ನಾವು ಅದನ್ನು ಪುನರ್‌ರಚನೆ ಮಾಡುತ್ತಾ ಇದ್ದೇವೆ. ನಿಮ್ಮ ಆಡಳಿತದಲ್ಲಿ ಧರ್ಮಸಿಂಗ್ ಏನು ವರದಿ ಕೊಟ್ಟಿದ್ದಾರೆ ಅದರ ಬಗ್ಗೆಯೂ ಕೂಡ ಹೇಳುತ್ತೇನೆ. This is the first report of National Police Commission of Mr. Dharmaveer. ಈ ಸದನದ ಗಮನಕ್ಕೆ ಒಂದೆರಡು ಮಾತುಗಳನ್ನು ತರವುದಕ್ಕೆ ಪ್ರಯತ್ನ ಮಾಡುತ್ತೇನೆ. ಕಾಂಗ್ರೆಸ್ ರಾಜ್ಯದಲ್ಲಿ ಡಾ. ಲೋಹಿಯಾ ಒಂದು ಮಾತನ್ನು ಹೇಳುತ್ತಾ ಇದ್ದರು ಈ ಕಾಂಗ್ರೆಸ್ ರಾಜ್ಯದಲ್ಲಿ ಪೋಲೀಸ್ ಎಂದರೆ ಪೋಲೀಸ್ ಕಾ ಹಾತೋ ಲಾಟಿ ಔರೊಮೋಲಿ ಸ್ವಾಮಿ, ಧರ್ಮಸಿಂಗ್‌ರವರು ಮಾತನಾಡುವಾಗ ನಾವು ಎರಡು ಕಿವಿಗಳನ್ನು ದೊಡ್ಡದು ಮಾಡಿಕೊಂಡಿದ್ದೆವು ನಿಮಗೂ ಕೂಡ ನಮ್ಮ ಮಾತನ್ನು ಕೇಳತಕ್ಕ ಸಹನೆ ಸಂಯಮ ಇರಲಿ ಖರ್ಗೆಯವರು ಬಹಳ ದೊಡ್ಡವರು. ಅನುಭವಿಗಳು. ತಾವು ಮಧ್ಯೆ ಪ್ರವೇಶ ಮಾಡಿ ಮಾತನಾಡುವುದಾದರೆ ನಿಮ್ಮಿಂದ ನಾವು ಪಾರ್ಲಿಮೆಂಟರಿ ಸಂಪ್ರದಾಯವನ್ನು ಕಲಿತುಕೊಳ್ಳಬೇಕೆಂದು ಪ್ರಯತ್ನ ಮಾಡಿದರೆ ಹೇಗೆ ದಯವಿಟ್ಟು ಅದನ್ನು ಮಾಡಬೇಡಿ. ಅಧ್ಯಕ್ಷರೇ ೧೯೮೧ ರಿಂದ ೮೩ ರವರೆವಿಗೂ ಕಾಂಗ್ರೆಸ್ ಈ ರಾಜ್ಯದಲ್ಲಿತ್ತು. ಆಗ ೫೨ ಫೈರಿಂಗ್‌ನಲ್ಲಿ ೫೬ ಜನ ಸತ್ತರು ೧೯೭೭-೭೮ರಲ್ಲಿ ೪೨ ಫೈರಿಂಗ್ ಆಯಿತು, ಆಗ ೨೧ ಜನಸತ್ತರು ಈ ಪೋಲೀಸರನ್ನು ದುರುಪಯೋಗ ಪಡಿಸಿಕೊಂಡವರು ಕಾಂಗ್ರೆಸ್‌ನವರು ಜನತಾ ಸರ್ಕಾರದವರೋ ಎನ್ನುವುದಕ್ಕೆ ಇದೇ ಸಾಕ್ಷಿ ಪೋಲೀಸರನ್ನು ದುರುಪಯೋಗ ಪಡಿಸಿಕೊಂಡಿರುವವರು. ಹೆಚ್ಚಾಗಿ ಗೂಂಡಾಗಿರಿ ಮಾಡಿರುವವರು ಜಾಸ್ತಿ ಗುಂಡನ್ನು ಹೊಡದಿರುವವರು ಎಂಬುವುದಕ್ಕೆ ಈ ಒಂದು ನಿದರ್ಶನವನ್ನು ಪ್ರತಿಯೊಬ್ಬರು ಅರ್ಥಮಾಡಿಕೊಳ್ಳಬೇಕು ಸಮಾಜವಾದವನ್ನು ಒಪ್ಪಿಕೊಂಡಿರತಕ್ಕವರು ನಮ್ಮ ಜನತಾ ಸರ್ಕಾರದವರು ಮತ್ತು ನಮ್ಮ ಪಕ್ಷದವರು ಒಂದು ಉದಾಹರಣೆಯನ್ನು ಹೇಳಬೇಕಾದರೆ ಕೇರಳದಲ್ಲಿ ಪಟ್ಟನ್ ತಾನ್‌ಪಿಳ್ಳೈ ಸರ್ಕಾರದಲ್ಲಿ ಗೋಲಿಬಾರ್ ಆಯಿತು. ಸಮಾಜವಾದವನ್ನು ಒಪ್ಪಿಕೊಂಡಿರತಕ್ಕ ಸರ್ಕಾರ ಗೋಲಿಬಾರ್ ಮಾಡಬಾರದು, ಗೋಲಿಬಾರ್ ಮಾಡಿದಂತಹ ಸರ್ಕಾರ ರಾಜೀನಾಮೆಯನ್ನು ಕೊಡಬೇಕೆಂದು ಡಾ ಲೋಹಿಯಾ ಹೇಳಿದರು ಏಕೆ ಈ ಮಾತನ್ನು ಹೇಳುತ್ತಾ ಇದ್ದೇನೆಂದರೆ, ಅನಾವಶ್ಯಕವಾಗಿ ಪೋಲೀಸರು ಜನರ ಮೇಲೆ ಗುಂಡು ಹಾರಿಸುವುದು ಸರಿಯಲ್ಲ ಸಮಾಜವಾದವನ್ನು ಒಪ್ಪಿಕೊಂಡಿರತಕ್ಕ ಜನತಾ ಪಕ್ಷ ಮತ್ತು ನಮ್ಮ ಸರ್ಕಾರ ಈ ಕೆಲಸವನ್ನು ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಸಮಾಜವನ್ನು ಪರಿವರ್ತನೆ ಮಾಡತಕ್ಕ ಇಲಾಖೆ ಈ ಈ ಪೋಲೀಸ್ ಇಲಾಖೆಯೆಂದು ನನ್ನ ಭಾವನೆ. ಈ ಮಾತನ್ನು ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಪೋಲೀಸರು ಕಳ್ಳರನ್ನು ಹಿಡಿಯುವುದು ಮಾತ್ರವಲ್ಲ, ಹಿಡಿದಂತಹ ಕಳ್ಳರನ್ನು ಪರಿವರ್ತನೆ ಮಾಡುವುದು ಮತ್ತು ಸಮಾಜದಲ್ಲಿ ಅವರನ್ನು ಒಳ್ಳೆಯ ವ್ಯಕ್ತಿಗಳನ್ನಾಗಿ ಮಾಡತಕ್ಕ ಕೆಲಸವನ್ನು ಪೋಲೀಸ್ ಇಲಾಖೆ ಮಾಡಬೇಕು. ಈ ಕೆಲಸವನ್ನು ಮಾಡುತ್ತಾರೆ, ಮುಂದೆಯೂ ಕೂಡ ಈ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಮಹಿಳಾ ಪೋಲೀಸ್ ಪುಟ (೯) ಈಗ ಮಹಿಳಾ ಪೋಲೀಸ್ ಇದ್ದಾರೆ. ನಾವು ಮಹಿಳಾ ಪೋಲೀಸ್‌ರಿಗೆ ಪ್ರಾಧಾನ್ಯತೆ ಕೊಡಬೇಕೆಂದು ಹೇಳುತ್ತೇನೆ. ಈ ಇಲಾಖೆಯಲ್ಲಿ ಎಷ್ಟರ ಮಟ್ಟಿಗೆ ನೀವು ಮಹಿಳಾ ಪೋಲೀಸ್ ಅಧಿಕಾರಿಗಳನ್ನು ಮೇಲ್ಪಟ್ಟಕ್ಕೆ ಏರಿಸಿದ್ದೀರಿ ? ಕಾನ್‌ಸ್ಟೇಬಲ್ ನೋಡುತ್ತೇವೆ. ಇನ್ಸ್‌ಪೆಕ್ಟರ್ ನೋಡುತ್ತೇವೆ, ಸಬ್‌ಇನ್ಸ್‌ಪೆಕ್ಟರ್ ನೋಡುತ್ತೇವೆ. ಆದರೆ ಉನ್ನತ ಮಟ್ಟದಲ್ಲಿ ಮಹಿಳಾ ಪೋಲೀಸ್ ಅಧಿಕಾರಿಗಳನ್ನು ನಾವು ಕಾಣುತ್ತಿಲ್ಲ.

ಶ್ರೀ ಎಮ್. ಎಸ್. ಪಾಟೀಲ್.—ಅವರಿಗೆ ಗೊತ್ತಿಲ್ಲ, ಅವರೆಲ್ಲರೂ ಇರುವುದು ಬೆಂಗಳೂರಿನಲ್ಲೇ, ಬೇರೆ ಕಡೆ ಇಲ್ಲ,

ಶ್ರೀ ವೇದಾಂತ ಹೆಮ್ಮಿಗೆ.—ನಾನು ಈ ಇಲಾಖೆಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ ಮಹಿಳಾ ಅಧಿಕಾರಿಗಳಿಂದು ಪೋಲೀಸ್ ಇಲಾಖೆಯಲ್ಲಿ ಉನ್ನತ ಮಟ್ಟದಲ್ಲಿ ನೇಮಕಮಾಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪುಟ (೩೫) ವಸತಿ ಬಗ್ಗೆ ೪೫,೪೨೮ ಜನ ಪೋಲೀಸಿನವರು ಇದ್ದಾರೆ ಈಗ ವಸತಿಗಾಗಿ ಶೇಕಡ ೫೦ ರಷ್ಟನ್ನು ಕೂಡ ನಾವು ಅವರಿಗೆ ಒದಗಿಸಲಿಕ್ಕೆ ಸಾಧ್ಯವಾಗಿಲ್ಲ ಯಾರೂ ನಮ್ಮನ್ನು ಹಗಲು ರಾತ್ರಿ ಕಾಯುತ್ತಾರೋ ಮತ್ತು ಯೋಗಕ್ಷೇಮ ನೋಡಿಕೊಳ್ಳುತ್ತಾರೋ ಸಮಾಜದ ಶಾಂತಿಯನ್ನು ಕಾಪಾಡುತ್ತಾರೋ ಅಂಥವರಿಗೆ ವಸತಿ ಸೌಕರ್ಯವನ್ನು ಆದಷ್ಟು ಬೇಗ ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅದರಲ್ಲೂ ಮುಖ್ಯವಾಗಿ ರಿಸರ್ವ್ ಪೋಲೀಸ್‌ನವರಿಗೆ ಶೇಕಡ ೧೮ ರಷ್ಟು ವಸತಿಯನ್ನು ಕಲ್ಪಿಸಿಕೊಟ್ಟಿಲ್ಲವೆಂದು ತಮ್ಮ ರಿಪೋರ್ಟ್‌ನಲ್ಲಿ ಹೇಳಿದ್ದೀರಿ. ಈ ಪೋಲೀಸ್ ಇಲಾಖೆಯಲ್ಲಿ ಜನ ಯಾರಿದ್ದಾರೆ ಅವರು ಹಗಲು ರಾತ್ರಿ ಕೆಲಸ ಮಾಡತಕ್ಕ ಜನ ಯಾರಿಗೂ ದುಡಿಯುವುದಕ್ಕೆ ಕಾಲಮಿತಿ ಇಲ್ಲವೋ ಅಂಥಹವರಿಗೆ ವಸತಿ ಸೌಕರ್ಯವನ್ನು ದೊರಕಿಸಿ ಕೊಡತಕ್ಕ ಕೆಲಸವನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮೊನ್ನೆ ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ನೋಡಿದೆ, ಅದರಲ್ಲಿ ಯಾವುದೋ ಒಂದು ಹೆಸರು ಬಂದಿದೆ, ನಾವು ಪೋಲೀಸಿನವರಿಗೆ ವಶವಾಗುತ್ತೇವೆ. ತಪ್ಪು ಮಾಡುವುದಿಲ್ಲವೆಂದು ಬರೆದುಕೊಡುತ್ತೇವೆ. ಪರಿವರ್ತನೆಯಾಗುವುದಕ್ಕೆ ನಾವು ಬಯಸುತ್ತೇವೆ. ಎಂದು ಹೇಳಿರುತ್ತಾರೆ. ಆ ಜನ ಪರಿವರ್ತನೆ ಆಗತಕ್ಕ ಸಂದರ್ಭ ಬಂದರೆ ಅವರನ್ನು ಪರಿವರ್ತನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಒಂದು ಮಾತನ್ನು ಹೇಳುತ್ತೇನೆ. ಒಬ್ಬ ಒಂದು ಸಲ ಕದಿಯುತ್ತಾನೆ. ಕದ್ದು ಅವನು ಜೈಲಿನಿಂದ ಹೊರಗೆಬರುತ್ತಾನೆ. ಕದ್ದು ಹೊರಗೆ ಬಂದು ಮಾರನೇಯ ದಿನವೇ ಏನಾದರೂ ಕಳ್ಳತನ ಆದರೆ ಅವನನ್ನು ಹಿಡಿದುಕೊಳ್ಳುತ್ತಾರೆ ಅವನು ಕದಿಯದಿದ್ದರೂ ಅವನನ್ನು ಮತ್ತೆ ಜೈಲಿಗೆ ಹಾಕುತ್ತಾರೆ. ಆದ್ದರಿಂದ ಈಗಿರತಕ್ಕ ವ್ಯವಸ್ಥೆ ಬದಲಾಗಬೇಕು ಕಳ್ಳನನ್ನು ಪರಿವರ್ತನೆ ಮಾಡತಕ್ಕ ಕೆಲಸವನ್ನು ಪೋಲೀಸ್ ಇಲಾಖೆ ಮಾಡಬೇಕು. ಈ ಕೆಲಸವನ್ನು ಮಾಡುತ್ತಾರೆಂದು ನಮಗೆ ನಂಬಿಕೆ ಇದೆ. ಕೊನೆಯದಾಗಿ ಇಷ್ಟು ಮಾತ್ರ ಹೇಳುತ್ತೇನೆ ದರೋಡೆ ಬಗ್ಗೆ ಶ್ರೀ ಧರ್ಮಸಿಂಗ್‌ರವರು ಹೇಳಿದ್ದಾರೆ. ಆದರೆ ದರೋಡೆ ಮಾಡಿಯೆಂದು ಜನತಾಸರ್ಕಾರ ಹೇಳಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ದರೋಡೆಯಾಗಿದೆ. ಈ ದರೋಡೆಆಗಿರುವುದನ್ನು ಪತ್ತೆ ಮಾಡಲು ಪೋಲೀಸ್ ಇಲಾಖೆ ಪೂರ್ಣವಾಗಿ ಪ್ರಯತ್ನ ಮಾಡುತ್ತಾ ಇದೆ. ಮಾನ್ಯ ಸಚಿವರು ಮಾತನಾಡುತ್ತಾ ಹೇಳಿದರು ಮಂಗಳೂರಿನಲ್ಲಿರತಕ್ಕ ದರೋಡೆಕೋರರನ್ನು ಹಿಡಿಯದಿದ್ದರೆ ನಾನು ಯಾವ ಶಿಕ್ಷೆಗೆ ಬೇಕಾದರೂ ಒಳಗಾಗುತ್ತೇನೆ. ಎಂದರು. ಘಾತುಕರನ್ನು ಈಗಾಗಲೇ ಹಿಡಿದಿದ್ದಾರೆಂದು ನಾವು ಪತ್ರಿಕೆಯಲ್ಲಿ ಓದಿದ್ದೇವೆ. ಇದರಿಂದ ಗೊತ್ತಾಗುತ್ತದೆ, ಪೋಲೀಸ್ ಇಲಾಖೆ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂಬುದು ಅಷ್ಟೇ ಅಲ್ಲದೆ, ಎಷ್ಟೊಂದು ತೀವ್ರವಾಗಿ ಕೆಲಸ ಮಾಡುತ್ತಿದೆ ಎಂಬುದು ಗೊತ್ತಾಗುತ್ತದೆ. ಇದರ ಜೊತೆಗೆ ಒಂದು ಮಾತನ್ನು ಹೇಳುತ್ತೇನೆ, ಮಾನ್ಯ ಗೃಹಸಚಿವರು ಇಲ್ಲಿದ್ದಾರೆ, ಅವರ ಕೈಯಲ್ಲಿ ಈ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದೆ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ.

ಯಾವ ಒಂದು ದಾಕ್ಷಿಣ್ಯಕ್ಕೂ ಒಳಗಾಗದೆ ಈ ಇಲಾಖೆಗೆ ಒಳ್ಳೆಯ ಹೆಸರನ್ನು ತರಬೇಕೆಂದು ಕೊಂಡು ಮಾನ್ಯ ಮಂತ್ರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಈ ಇಲಾಖೆಯನ್ನು ಜನತೆಗೆ ಅನುಕೂಲವಾಗುವ ರೀತಿಯಲ್ಲಿ ಪರಿವರ್ತನೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಈ ಕಾರಣದಿಂದ ಮಾನ್ಯ ಗೃಹ ಸಚಿವರು ಈ ಸಭೆಯ ಅನುಮತಿಗಾಗಿ ಮಂಡಿಸಿರುವಂತಹ ಬೇಡಿಕೆಗಳನ್ನು ನಾನು ಪೂರ್ಣವಾಗಿ ಸಮರ್ಥಿಸುತ್ತೇನೆ.

ಅಧ್ಯಕ್ಷರು— ತಾವು ಮುಗಿಸಿಬಿಡಿ.

ಶ್ರೀ ವೇದಾಂತ ಹೆಮ್ಮಿಗೆ— ಈ ಪೋಲೀಸ್ ಕಮಿಷನ್ ವರದಿಯಲ್ಲಿ ಏನು ಹೇಳಿದೆ ಎಂಬುದನ್ನು ಓದಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಹಿಂದೆ ಕೇಂದ್ರ ಸರ್ಕಾರದವರು ಶ್ರೀ ಧರ್ಮವೀರ

ಅವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ಈ ಇಲಾಖೆಯ ರಿಫಾರಮ್ಸ್ ಬಗ್ಗೆ ಸಲಹೆ ಮಾಡಲು ನೇಮಕ ಮಾಡಿದ್ದರು. ಈ ಆಯೋಗದವರು ಈ ಪೋಲೀಸ್ ಇಲಾಖೆ ಬಗ್ಗೆ ಏನು ಹೇಳಿದ್ದಾರೆಂದರೆ—

"In the preception of the people the extraneous features of the police are politically oriented partial performance of duties, brutality, corruption, inefficiency degrees of which varies from place to place and person to person.

ಮುಂದೆ ನಮ್ಮ ಕೆಲಸವನ್ನು ಈ ಸಮಾಜದಲ್ಲಿ ನಾವು ಸರಿಯಾಗಿ ಮಾಡದಿದ್ದರೆ ಈ ಸಮಾಜದಲ್ಲಿ ಯಾವ ರೀತಿ ಅಶಾಂತಿ ಉಂಟಾಗಿ ಸಮಾಜ ಯಾವ ರೀತಿ ಕೆಡುತ್ತದೆ ಎಂಬ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ.—

"The Freedom movement held out certain promises and raised the aspirations of the poor. One of the major cases of tensions that we see in our society today appears to be our failure to redeem promises that were given prior to independence and were incorporated in the Constituion in the form of Directive Principles and Preamble. The Preamble, Directive principles and the Fundamental Rights between them promises the egalitarian, secular, democratic society. The realities that we experience around does not wholly correspond to this.

ಈ ನಮ್ಮ ಸಮಾಜದಲ್ಲಿ ನಾವು ಏನು ಕೆಲಸ ಮಾಡುತ್ತೇವೆಂದು ಈ ದೇಶದ ಜನರಿಗೆ ಮಾತು ಕೊಟ್ಟಿದ್ದೇವೋ ಅದನ್ನು ಪ್ರಾಮಾಣಿಕವಾಗಿ ಮಾಡದ ಕಾರಣದಿಂದ ಈ ನಮ್ಮ ಸಮಾಜದಲ್ಲಿ ಅಶಾಂತಿ ಉಂಟಾಗುವುದಕ್ಕೆ ಕಾರಣವಾಯಿತು. ಈ ದೇಶದಲ್ಲಿರುವಂತಹ ಬಡ ಜನರಿಗಾಗಲೀ ವಿದ್ಯಾರ್ಥಿಗಳಿಗಾಗಲೀ, ಕಾರ್ಮಿಕರಿಗಾಗಲೀ ನಾವು ಒಳ್ಳೆಯದನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ? ಇದಕ್ಕೆ ಯಾರು ಕಾರಣ ಕರ್ತರು? ಈ ದೇಶವನ್ನು ಕಳೆದ ೩೦ ವರ್ಷಗಳಿಂದ ಯಾರು ಆಳಿದರೊ, ಅವರೇ ಇದಕ್ಕೆಲ್ಲಾ ಕಾರಣರಾಗಿದ್ದಾರೆ. ಇವೊತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಆದಷ್ಟೂ ಮಟ್ಟಿಗೆ ಕೈಗಾರಿಕಾ ಶಾಂತಿ, ಕಾರ್ಮಿಕ ಶಾಂತಿ ಹಾಗೂ ವಿದ್ಯಾ ಕ್ಷೇತ್ರದಲ್ಲಿ ಶಾಂತಿ ನೆಲೆಸಿರುವುದಕ್ಕೆ ನಮ್ಮ ಜನತಾ ಸರ್ಕಾರವೇ ಕಾರಣವಾಗಿದೆ. ಈ ಕಾರಣದಿಂದ ಮಾನ್ಯ ಸಚಿವರನ್ನು ಅಭಿನಂದಿಸಿ, ಅವರು ಈ ಸಭೆಯ ಮುಂದೆ ಮಂಡಿಸಿರುವಂಥ ಬೇಡಿಕೆಗಳನ್ನು ಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) ಮಾನ್ಯ ಅಧ್ಯಕ್ಷರೇ. ಮಾನ್ಯ ಮಂತ್ರಿಗಳು ಪೋಲಿಸ್ ಇಲಾಖೆಗೆ ಸಂಬಂಧಪಟ್ಟ ಈ ವಾರ್ಷಿಕ ವರದಿಯನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಸಾರ್ವಜನಿಕರ ಪ್ರಾಣ ಮತ್ತು ಆಸ್ತಿಪಾಸ್ತಿಗಳ ರಕ್ಷಣೆ ಮಾಡುವಂತಹ ಆದ್ಯಕರ್ತವ್ಯ ಈ ಪೋಲಿಸ್ ಇಲಾಖೆಯ ಮೇಲಿದೆ. ಇದರ ಜೊತೆಗೆ ಕಾನೂನು ಮತ್ತು ಶಾಂತಿಯನ್ನು ಪಾಲನೆ ಮಾಡುವುದು, ಅಪರಾಧಗಳನ್ನು ತಡೆಗಟ್ಟುವುದು ಹಾಗೂ ಅವುಗಳು ನಡೆದರೆ ಪತ್ತೆ ಮಾಡುವುದರ ಮೂಲಕ ಈ ನಮ್ಮ ಸಮಾಜದಲ್ಲಿ ಶಾಂತಿ ಮತ್ತು ಭದ್ರತೆ ನೆಲೆಸುವಂತೆ ನೋಡಿಕೊಳ್ಳುವ ಒಂದು ಜವಾಬ್ದಾರಿ ಈ ಇಲಾಖೆಯ ಮೇಲಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಆದ್ದರಿಂದ ಈ ಇಲಾಖೆ ಈ ಎಲ್ಲ ಕೆಲಸಗಳನ್ನು ಯಾವ ರೀತಿ ಮಾಡುತ್ತಿದೆ ಎನ್ನುವಂತಹ ಪ್ರಶ್ನೆ ನಮ್ಮ ಮುಂದೆ ಉದ್ಭವವಾಗುತ್ತದೆ. ಈ ಮೊದಲು ಪೋಲಿಸರ ಮೇಲೆ ಮತ್ತು ಪೋಲೀಸ್ ಇಲಾಖೆಯ ಮೇಲೆ ಜನರಲ್ಲಿ ಏನು ಒಂದು ನಂಬಿಕೆ ಗೌರವ ಮತ್ತು ವಿಶ್ವಾಸವಿತ್ತು, ಅದೆಲ್ಲಾ ಈಗ ಕಡಿಮೆಯಾಗುತ್ತಾ ಇದೆಯೇನೋ ಎಂಬ ಪ್ರಶ್ನೆ ನಮ್ಮ ಮುಂದೆ ಉದ್ಭವವಾಗುತ್ತಿದೆ. ಇದಕ್ಕೆ ಕಾರಣವೇನು ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಇದಕ್ಕೆ ಕಾರಣಗಳನ್ನು ಹುಡುಕಲು ಹೊರಟರೆ, ಹಲವಾರು ಕಾರಣಗಳನ್ನು ಕೊಡಬಹುದಾಗಿದೆ. ಈ ಪೋಲೀಸ್ ಇಲಾಖೆ ಪ್ರಭಾವಯುತವಾದಂಥ ಇಲಾಖೆಯಾಗಿದೆ. ಈ ಇಲಾಖೆ ಸರಿಯಾಗಿ ಮತ್ತು

ಒಳ್ಳೆಯ ರೀತಿಯಿಂದ ನಡೆದರೆ ಮಾತ್ರ ಜನರು ನೆಮ್ಮದಿಯಿಂದ ಮತ್ತು ಸುವ್ಯವಸ್ಥೆಯಿಂದ ಬಾಳುವುದಕ್ಕೆ ಸಾಧ್ಯವಾಗುತ್ತದೆ, ಆದರೆ ಈ ಇಲಾಖೆಯಿಂದ ಜನರು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಹಲವಾರು ವಿಚಾರಗಳು ಪತ್ರಿಕೆಗಳಲ್ಲಿ ಬರುತ್ತಿರುವುದನ್ನು ನಾವು ದಿನವೂ ನೋಡುತ್ತಿದ್ದೇವೆ. ಕೊಲೆ, ದರೋಡೆ, ಕಳವು, ಮಟ್ಕಾ ಕ್ಲಬ್‌ಗಳು ಹೆಚ್ಚುತ್ತಿರುವುದಕ್ಕೆ ಮತ್ತು ಹಾಗೂ ಭ್ರಷ್ಟಾಚಾರಕ್ಕೆ ಆಸ್ಪದ ಕೊಡುವಂತಹ ಅನೇಕ ಪ್ರಕರಣಗಳು ನಡೆಯುತ್ತಿರುವುದಕ್ಕೆ ಈ ಇಲಾಖೆಯೇ ಕಾರಣ ಎಂದು ಈ ಇಲಾಖೆಯ ಮೇಲೆ ಜನರು ಆಪಾದನೆ ಹೊರಿಸುತ್ತಿದ್ದಾರೆ. ಇದರಲ್ಲಿ ನಿಜಾಂಶ ಇದೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೆ ಉದ್ಭವವಾದಾಗ, ಇದನ್ನು ಸೂಕ್ಷ್ಮವಾಗಿ ನೋಡಿ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತಹ ಜವಾಬ್ದಾರಿ ಮಾನ್ಯ ಗೃಹ ಮಂತ್ರಿಗಳ ಮೇಲಿದೆ. ಇತ್ತೀಚೆಗೆ ಉಡುಪಿಯಲ್ಲಿ ಹಾಡುಹಗಲೇ ನಡೆದಂಥ ಒಂದು ಕೊಲೆಯನ್ನು ಇದಕ್ಕೆ ಉದಾಹರಣೆ ಕೊಡಬಹುದು, ಅಲ್ಲಿನ ಪೋಲೀಸ್ ಸ್ಟೇಷನ್ ಪಕ್ಕದಲ್ಲಿಯೇ ಕಲ್ಲಿನಿಂದ ಜಜ್ಜಿ ಒಬ್ಬರನ್ನು ಹಾಡುಹಗಲೇ ಕೊಲೆ ಮಾಡಲಾಯಿತು. ಆದರೆ ಪೋಲೀಸರು ಕೂಡಲೇ ಅಲ್ಲಿಗೆ ಹೋಗಿ ತನಿಖೆ ಮಾಡದೆ ಒಂದೂವರೆ ಗಂಟೆಗಳಷ್ಟು ತಡವಾಗಿ ಹೋಗಿದ್ದಾರೆ. ಅಂದರೆ ಇವರು ಕೊಲೆ ಪ್ರಕರಣಗಳನ್ನು ಯಾವ ರೀತಿ ಸಹಿಸುತ್ತಾರೆ ಹಾಗೂ ಈ ಬಗ್ಗೆ ಇವರಿಗೆ ಅಷ್ಟೊಂದು ಕಾಳಜಿ ಇಲ್ಲ ಎಂಬತಕ್ಕಂಥ ಅರ್ಥ ಬರುತ್ತದೆ. ರಾಜ್ಯದಲ್ಲಿ ಹಲವಾರು ಕೊಲೆಗಳು ಸತತವಾಗಿ ನಡೆಯುತ್ತಿರುವಾಗ ನಾವು ಈ ಪೋಲೀಸರ ಕಾರ್ಯಾಚರಣೆಯನ್ನು ಪ್ರಶ್ನೆ ಮಾಡಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಬೆಂಗಳೂರು ನಗರದ ಸುತ್ತಮುತ್ತ ನಡೆಯುತ್ತಿರುವ ದರೋಡೆ ಪ್ರಕರಣಗಳ ಬಗ್ಗೆ ಪೋಲೀಸರ ಕಾರ್ಯಾಚರಣೆ ಸರಿಯಾಗಿ ನಡೆದಿದೆಯೋ ಎಂದು ನಾವು ಪ್ರಶ್ನೆ ಮಾಡಬೇಕಾಗುತ್ತದೆ ಒಂದು ಕೊಲೆ ಇಲ್ಲವೇ ದರೋಡೆ ನಡೆದಾಗ ಅದರ ಹಿಂದಿರುವ ಉದ್ದೇಶವೇನೆಂಬುದನ್ನು ಸಹ ನಾವು ನೋಡಬೇಕಾಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವಂತಹ ಕೊಲೆ ಮತ್ತು ದರೋಡೆಗಳು ಜನ ಸಾಮಾನ್ಯರಿಗೆ ಸಂಬಂಧಪಟ್ಟವೆ. ಯಾವುದೇ ವೈಶಮ್ಯದಿಂದ ಆಗಲೀ ಯಾವುದೇ ವೈರತ್ವದಿಂದಲಾಗಲೀ ಕೊಲೆ ನಡೆದಿಲ್ಲ. ಒಂದು ಚಿಕ್ಕ ಮಗುವಿನ ತಲೆ ಮೇಲೆ ಹೊಡೆಯಬೇಕಾದರೆ, ಅವರ ಉದ್ದೇಶ ಏನಿತ್ತು ಎಂಬುದನ್ನು ನಾವು ನೋಡಬೇಕಾಗುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಜನರು ಮನೆಯ ಹೊರಗಡೆ ಮಲಗಿದ್ದಾಗ ಅವರನ್ನು ಕೊಲೆ ಮಾಡಿದ್ದಾರೆ, ಇಂತಹ ಕೊಲೆ ಮತ್ತು ದರೋಡೆಗಳಿಗೆ ಕಾರಣವೇನೆಂಬುದನ್ನು ನಾವು ತಿಳಿಯಬೇಕಾಗಿದೆ ಈ ಕೊಲೆ ಮತ್ತು ದರೋಡೆಗಳು ಎಲ್ಲರನ್ನೂ ಸದೆಬಡಿಯುವ ರೀತಿಯಲ್ಲಿ ಸತತವಾಗಿ ನಡೆಯುತ್ತಿರುವಾಗ ಪೋಲೀಸರು ತಮ್ಮಲ್ಲಿರುವ ಶ್ವಾನದಳದ ಮೂಲಕ ಎಷ್ಟು ಜನ ಅಪರಾಧಿಗಳನ್ನು ಹಿಡಿದಿದ್ದಾರೆಂಬ ಪ್ರಶ್ನೆ ನಮ್ಮ ಮುಂದೆ ಉದ್ಭವವಾಗುತ್ತದೆ. ಅದೇ ರೀತಿ ಬೆಂಗಳೂರು ನಗರದ ಹೊರ ವಲಯದಲ್ಲಿ ನಡೆದಂಥ ದರೋಡೆ ಮತ್ತು ಕೊಲೆಗಳನ್ನು ನೋಡಿದಾಗ ಜನರು ಮನೆ ಬಿಟ್ಟು ಹೊರಗಡೆ ಬರುವುದೇ ಕಷ್ಟವಾಗಿದೆ, ಇಂತಹ ಒಂದು ಕಷ್ಟದಲ್ಲಿ ಅವರು ಯಾವ ರೀತಿ ಜೀವನ ನಡೆಸುತ್ತಿದ್ದಾರೆಂಬುದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಇದನ್ನೆಲ್ಲಾ ಒಂದೇ ದಿನ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಸಹ ನಾವು ಒಪ್ಪಬೇಕಾಗುತ್ತದೆ ಆದರೆ ಪೋಲೀಸರ ಕಾರ್ಯಾಚರಣೆ ಮಂದಗತಿಯಲ್ಲಿ ನಡೆಯುತ್ತಿದೆ. ಅವರು ಕ್ಷಿಪ್ರಗತಿಯಿಂದ ಕಾರ್ಯಾಚರಣೆ ನಡೆಸಿದರೆ ಇಂಥಾದ್ದನ್ನು ತಡೆಗಟ್ಟಬಹುದೆಂದು ನಾನು ಹೇಳುತ್ತೇನೆ. ಸೂಕ್ತ ಬಂದೋಬಸ್ತು ಇರಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಕೊಲೆ ಇಲ್ಲವೆ ಹಲ್ಲೆ ನಡೆದರೆ ಕೂಡಲೇ ಅಲ್ಲಿಗೆ ಹೋಗಿ ಸೂಕ್ತ ಬಂದೋಬಸ್ತು ಏರ್ಪಡಿಸಿ. ಆ ಸಂದರ್ಭದಲ್ಲಿ ಅಲ್ಲಿ ಓಡಾಡಿದಂಥ ವಾಹನಗಳ ನಂಬರ್‌ಗಳನ್ನು ಗುರುತು ಮಾಡಿಕೊಂಡು ತನಿಖೆ ಮಾಡಿದ್ದೇ ಆದರೆ ಅಪರಾಧಿಗಳನ್ನು ಕೂಡಲೇ ಪತ್ತೆ ಮಾಡಬಹುದಾಗಿದೆ. ಆದರೆ ಈ ಬಗ್ಗೆ ಪೋಲೀಸರು ಹೆಚ್ಚಿನ ಸಾಧನೆ ಮಾಡಿಲ್ಲ ಎಂದು ಹೇಳುತ್ತೇನೆ, ಈ ಇಲಾಖೆಯಲ್ಲಿ ಯಾವ ರೀತಿ ಕಾರ್ಯಾಚರಣೆ ನಡೆಯುತ್ತಿದೆ ಎಂದರೆ, ಮನೆಗಳಲ್ಲಿ ಕಳವಾದರೆ ಆ ಬಗ್ಗೆ ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟರೂ ಸಹ ಕಳವಾದ ಮಾಲುಗಳು ವಾಪಸ್ ಸಿಗುವುದಿಲ್ಲ ಆದ್ದರಿಂದ ಕಂಪ್ಲೈಂಟ್ ಕೊಡುವ ಆಗತ್ಯವಿಲ್ಲವೆಂದುಕೊಂಡು ಸುಮ್ಮನಿರುವ ಸನ್ನಿವೇಶ ಉಂಟಾಗಿದೆ. ಈ ಇಲಾಖೆಯ ವಾರ್ಷಿಕ ವರದಿಯಲ್ಲಿ ಇವರು ಮಾಡಿರುವಂತಹ ಸಾಧನೆಗಳ ಬಗ್ಗೆ ಕೆಲವೊಂದು ವಿವರಗಳನ್ನು ಕೊಟ್ಟಿದ್ದಾರೆ.

೪-೦೦ ಪಿ.ಎಂ.

ತಾವು ಇದರಲ್ಲಿ ವಿಫಲರಾಗಿದ್ದೇವೆಂದು ಈ ವರದಿಯಲ್ಲಿ ಕಾಣಿಸಲಿಲ್ಲ ಎಂಬುದನ್ನು ಹೇಳಲಿಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ. ಮತ್ತೊಂದು ವಿಚಾರ ಮಾನ್ಯ ಅಧ್ಯಕ್ಷರೇ, ಈ ಒಂದು ಇಲಾಖೆಯಲ್ಲಿ ನಡೆಯುವಂಥ ಭ್ರಷ್ಟಾಚಾರದ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಭ್ರಷ್ಟಾಚಾರ, ಲಂಚದ ಎಲ್ಲಾ ಅವತಾರಗಳನ್ನು ಹೊಂದಿರುವ ಈ ಇಲಾಖೆಯನ್ನು ಸರಿಪಡಿಸುವ ಜವಾಬ್ದಾರಿ ಮಾನ್ಯ ರಾಚಯ್ಯನವರಿಗೆ ಸೇರಿದ್ದು. ಆದರೆ ಯಾವ ಹಂತದಲ್ಲಿ ಇದನ್ನು ನಿಯಂತ್ರಣ ಮಾಡುತ್ತಾರೆ ಎನ್ನುವ ಪ್ರಶ್ನೆ ಬಂದಾಗ, ಇವರೇನೋ ಆ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಆದರೆ, ಅದರಲ್ಲಿ ಇವರು ವಿಫಲತೆಯನ್ನು ಹೊಂದಿದ್ದಾರೆಂದು ಅನಿವಾರ್ಯವಾಗಿ ನಾನು ಹೇಳಬೇಕಾಗುತ್ತದೆ. ಇನ್ನೂ ಒಂದು ವಿಚಾರ ಏನೆಂದರೆ, ಮಟಕಾ, ಮತ್ತು ಕ್ಲಬ್‌ಗಳು, ನಮ್ಮ ರಾಜ್ಯದಲ್ಲಿ ಸತತವಾಗಿ ನಿರ್ಭೀತಿಯಿಂದ ಕೆಲಸ ನಿರ್ವಹಿಸುತ್ತಿವೆ ಇದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಅದನ್ನು ಹತೋಟಿಯಲ್ಲಿ ಇಡುವುದಕ್ಕೆ ಯಾವುದಾದರು ಕ್ರಮ ಕೈಗೊಂಡಿದ್ದರೆ ಅದು ನೆಪ ಮಾತ್ರಕ್ಕೆ, ತಾವು ಇದ್ದೇವೆ ಎಂದು ತೋರ್ಪಡಿಸಲಿಕ್ಕೆ ಈ ಕಾರ್ಯಾಚರಣೆಯನ್ನು ಮಾಡಿದ್ದೀರೇ ವಿನಃ ನಿಜವಾಗಿ ಈ ಮಟಕಾವನ್ನಾಗಲೀ, ಕ್ಲಬ್‌ಗಳನ್ನಾಗಲೀ ನಿಯಂತ್ರಿಸಬೇಕು ಎನ್ನುವ ಉದ್ದೇಶ ತಾವು ಇಟ್ಟುಕೊಳ್ಳಲಿಲ್ಲ ಎನ್ನುವ ವಾದವನ್ನು ನಾನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಇನ್ನು ಈ ಪೋಲೀಸ್ ಇಲಾಖೆಗೆ ಮತ್ತೊಂದು ವಿಶೇಷ ಅಧಿಕಾರ ಇದೆ ಆ ಅಧಿಕಾರದ ಮೂಲಕ ನಿರಪರಾಧಿಗಳನ್ನು ಶಿಕ್ಷಿಸುವಂಥ ಕ್ರಮ ಇವರು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಈಗಾಗಲೇ ಗೊತ್ತಿದೆ. ಸೂಳ್ಯ ವಿಧಾನ ಸಭೆಯ ಸದಸ್ಯರನ್ನು ಈ ಪೋಲೀಸ್ ಇಲಾಖೆಯವರು ಬಂಧಿಸಿದ್ದಾರೆ. ಬಂಧಿಸಿದ ಕಾರಣ ಏನು ಎಂದು ತಾವೂ ಸಹ ಕೇಳಿರಬಹುದು. ಯಾವುದೋ ಒಂದು ಕೊಲೆ ಪ್ರಕರಣದಲ್ಲಿ ಹೋದ ಸಲ ಈ ಸದನದಲ್ಲಿ ಅವರು ವಿಷಯವನ್ನು ಪ್ರಸ್ತಾಪ ಮಾಡಿರುವುದೇ ಒಂದು ಉದ್ದೇಶ. ಒಬ್ಬ ಶಾಸಕರನ್ನು ಕಾರಣ ಇಲ್ಲದೆ ಬಂಧಿಸುವುದಾದರೆ, ಈ ನಮ್ಮ ರಾಜ್ಯದಲ್ಲಿ ಎಷ್ಟು ಜನ ನಿರಪರಾಧಿಗಳನ್ನು ಹೇಗೆ ಹಿಂಸಿಸುತ್ತಿದ್ದಾರೋ ಗೊತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಅದೂ ಅಲ್ಲದೇ ಈ ಒಂದು ಇಲಾಖೆಯಲ್ಲಿ ಅವರಿಗೆ ಶಿಸ್ತು ಇರಬೇಕು. ಆದರೆ ಇದೇ ವಿಧಾನಸಭೆಯಲ್ಲಿ ನಡೆದಂತಹ ಒಂದು ಪ್ರಸಂಗದಲ್ಲಿ ಒಬ್ಬ ಪೋಲೀಸ್ ಅಧಿಕಾರಿಯನ್ನು ಅನಾಮತ್ತಿನಲ್ಲಿ ಇಟ್ಟರು ಎನ್ನುವ ಉದ್ದೇಶದಿಂದ ಇಡೀ ಪೋಲೀಸ್ ಇಲಾಖೆಯು ಒಬ್ಬ ಅಧಿಕಾರಿಗೋಸ್ಕರ ತಮ್ಮ ಶಿಸ್ತನ್ನು ಮರೆತು ಧರಣಿ ಮಾಡುವುದಕ್ಕೆ ಹೋಗಿದ್ದರು. ರಾಜ್ಯದಲ್ಲಿರುವ ಪೋಲೀಸ್ ಅಧಿಕಾರಿಗಳೇ ಹೀಗೆ ಮಾಡಿದರೆ ಇನ್ನುಳಿದ ಪೋಲೀಸರು ಎಲ್ಲಿವರೆಗೆ ಬಂದಿದ್ದಾರೋ ಎಂದು ಕೇಳಲಿಕ್ಕೆ ಇಚ್ಛಿಸುತ್ತೇನೆ. ಇನ್ನು ಜನ ಸಾಮಾನ್ಯರ ಬಗ್ಗೆ ಮಾತನಾಡುವುದಾದರೆ, ಜನಸಾಮಾನ್ಯರು ಏನಾದರೂ ದೂರು ಕೊಡಲು ಪೋಲೀಸ್ ಇಲಾಖೆಗೆ ಬಂದಾಗ ಯಾವ ರೀತಿ ನಡೆಸಿಕೊಳ್ಳುತ್ತಾರೋ ಎಂಬ ಬಗ್ಗೆ ಕೇಳಲಿಕ್ಕೆ ಬಯಸುತ್ತೇನೆ. ಯಾರೇ ಒಬ್ಬ ಬಡವ ಅಥವಾ ಮಾಜಿ ಗೇಣಿದಾರ ತನಗೆ ಆಗಿರುವ ತೊಂದರೆಗಳ ಬಗ್ಗೆ ದೂರನ್ನು ಕೊಡಲು ಪೋಲೀಸ್ ಸ್ಟೇಷನ್‌ಗೆ ಹೋದರೆ, ಅದಕ್ಕೆ ಸಮರ್ಪಕವಾದ ಮತ್ತು ನಿಷ್ಪಕ್ಷಪಾತವಾದ ತನಿಖೆಯನ್ನು ನಡೆಸದೆ ಅವರ ಬದುಕು ಗೊಂದಲಮಯವಾಗುವಂತೆ ಇವರು ಮಾಡುತ್ತಾರೆ. ಇನ್ನು ಈ ಪೋಲೀಸ್ ಇಲಾಖೆಯಲ್ಲಿರತಕ್ಕ ವಿವಿಧ ದಳ ಮತ್ತು ಸಂಸ್ಥೆಗಳ ಬಗ್ಗೆ ಈ ಒಂದು ವರದಿಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದರಲ್ಲಿ ಸಿ.ಒ.ಡಿ. ಇಲಾಖೆ ಒಂದು. ಈ ಸಿ.ಒ.ಡಿ. ಇಲಾಖೆಯಲ್ಲಿ ಎಷ್ಟು ಪ್ರಕರಣಗಳನ್ನು ಇದುವರೆಗೆ ತನಿಖೆ ಮಾಡಿದ್ದಾರೆ, ಹಾಗೂ ಎಷ್ಟು ಪ್ರಕರಣಗಳನ್ನು ಈ ಇಲಾಖೆಗೆ ವಹಿಸಿಕೊಡಲಾಗಿದೆ, ಇದರ ಸಾಧನೆ ಏನು, ಪ್ರಗತಿ ಏನು ಎನ್ನುವ ಬಗ್ಗೆ ಒಂದು ವಿಚಾರವನ್ನೂ ಈ ವರದಿಯಲ್ಲಿ ತಿಳಿಸಲಿಲ್ಲ. ಪದೇ ಪದೇ ಮೊಕದ್ದಮೆಗಳನ್ನು ಗುಪ್ತಚಾರ ದಳಕ್ಕೆ ವಹಿಸಿಕೊಡುವುದರಿಂದ ಪೋಲೀಸ್ ಇಲಾಖೆ ಮೇಲೆ ಸಾರ್ವಜನಿಕರಿಗೆ ನಂಬಿಕೆ ಹೊರಟು ಹೋಗಿದೆ. ಬಹುತೇಕ ಪ್ರಕರಣಗಳನ್ನು ಸಿ.ಒ.ಡಿ. ಗೆ ವಹಿಸಿಕೊಟ್ಟರೆ ಪೋಲೀಸ್ ಇಲಾಖೆ ಮೇಲೆ ಯಾವ ಅರ್ಥ ಬರುತ್ತದೆ ಮಾನ್ಯ ಅಧ್ಯಕ್ಷರೇ ? ಈ ಪೋಲೀಸ್ ಇಲಾಖೆ ಮೇಲೆ ಜನರಿಗೆ ನಂಬಿಕೆ ಇಲ್ಲ. ಸಿ.ಒ.ಡಿ. ಇಲಾಖೆ ಮೇಲೆ ನಂಬಿಕೆ ಇದೆ. ಮತ್ತೊಂದು ವಿಚಾರ ಏನೆಂದರೆ ?

ಅಧ್ಯಕ್ಷರು.—ಬೇಗ ಮುಗಿಸಬೇಕು.

ಶ್ರೀ ಯು. ಭೂಪತಿ.—ಅವರು ಇನ್ನೂ ಪೋಲೀಸ್ ಸ್ಟೇಷನ್‌ನಲ್ಲೇ ಇದ್ದಾರೆ, ಬಾಟ್ಲಿಂಗ್ ಮುಗಿಸಿಲ್ಲ, ಜೈಲಿಗೇ ಹೋಗಿಲ್ಲ ಆಗಲೇ ಮುಗಿಸಿ ಎಂದು ಹೇಳುತ್ತಿದ್ದೀರಿ.

ಶ್ರೀ ಪ್ರತಾಪಚಂದ್ರಶೆಟ್ಟಿ.—ಇನ್ನೂ ಒಂದು ವಿಚಾರ. ಈ ಸಿ.ಒ.ಡಿ. ಯಲ್ಲಿರತಕ್ಕಂತಹ ಅಧಿಕಾರಿಗಳ ಬಗ್ಗೆ ಹೇಳುವುದಾದರೆ, ಯಾವ ಪೋಲೀಸ್ ಸ್ಟೇಷನ್‌ನಲ್ಲೂ ಇರುವುದಕ್ಕೆ ನಾಲಾಯಕ್ ಆದವನನ್ನು ಈ ಇಲಾಖೆಗೆ ಕಳುಹಿಸುತ್ತಾರೆ. ಇಂತಹ ಅಧಿಕಾರಿಗಳು ಯಾವ ರೀತಿ ತಮ್ಮ ಕೆಲಸಗಳನ್ನು ನಿರ್ವಹಿಸುತ್ತಾರೆ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಪೋಲೀಸ್ ಇಲಾಖೆ ಮೇಲೆ ಆಪಾದನೆ ಇರತಕ್ಕಂಥ ಸಂದರ್ಭದಲ್ಲಿ ಜನಸಾಮಾನ್ಯರಿಗಾಗಲೀ ಸಾರ್ವಜನಿಕರಿಗಾಗಲೀ ನ್ಯಾಯ ಸಿಕ್ಕುವುದಿಲ್ಲ. ಆದ್ದರಿಂದ ಇನ್ನು ಮುಂದೆ ಪ್ರಕರಣಗಳನ್ನು ಸಿ ಬಿ ಐ.ಗೆ ವರ್ಗಾವಣೆ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಶೆಟ್ಟಿಯವರೇ ಮುಕ್ತಾಯ ಮಾಡಿ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಈ ಒಂದು ಇಲಾಖೆ ಬಗ್ಗೆ ಮಾತನಾಡಿರುವಂಥ ಸಂದರ್ಭದಲ್ಲಿ, ನಾವು ಅವರನ್ನು ಯಾವ ರೀತಿಯಲ್ಲಿ ಟೀಕಿಸುತ್ತೇವೆಯೋ, ಅದೇ ರೀತಿ ಅವರುಗಳಿಗೆ ಸವಲತ್ತುಗಳನ್ನು ಕೊಡುವ ಬಗ್ಗೆಯೂ ಸಹ ಚಿಂತಿಸಬೇಕಾಗುತ್ತದೆ. ಪೋಲೀಸರ ಮೇಲೆ ಕೆಲಸದ ಒತ್ತಡ ಬಹಳವಾಗಿದೆ. ಅವರಿಗೆ ಕೆಲಸದ ನಿರ್ದಿಷ್ಟ ಸಮಯ ಇಲ್ಲ. ಸಾಮಾನ್ಯವಾಗಿ ದಿನದ 24 ಗಂಟೆಗಳ ಕಾಲವೂ ಅವನು ಕೆಲಸ ಮಾಡಿದರೆ ಅವನ ಮನಸ್ಸಿನ ಮೇಲೆ ಹೆಚ್ಚಿನ ಒತ್ತಡ ಬಂದು, ಅವನು ಒಳ್ಳೆಯ ರೀತಿಯಲ್ಲಿ ಕೆಲಸವನ್ನು ನಿರ್ವಹಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಹೆಚ್ಚು ಹೆಚ್ಚು ಪೋಲೀಸರನ್ನು ನೇಮಿಸಿ ಹೆಚ್ಚು ಪೋಲೀಸ್ ಅಧಿಕಾರಿಗಳನ್ನು ನೇಮಿಸಿ ಅವರಿಂದ ಕೆಲಸವನ್ನು ತೆಗೆದುಕೊಳ್ಳಬೇಕು. ಅವರೂ ನಮ್ಮ ಸಮಾಜದ ಒಂದು ಅಂಗ ಎಂದು ತಿಳಿದುಕೊಳ್ಳಬೇಕು. ಅವರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಟ್ಟು ಕೆಲಸವನ್ನು ನಿರೀಕ್ಷೆ ಮಾಡಬೇಕು. ಒಬ್ಬ ಇನ್ಸ್‌ಪೆಕ್ಟರ್ ಇರುವ ಜಾಗಕ್ಕೆ ಇಬ್ಬರು ಇನ್ಸ್‌ಪೆಕ್ಟರುಗಳನ್ನು ಹಾಕಬೇಕು. ಇದರಿಂದ ಅವರು ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಅಬಕಾರಿ ಇಲಾಖೆ ಬಗ್ಗೆ ನಾನು ಹೆಚ್ಚಿಗೆ ಮಾತನಾಡವುದಕ್ಕೆ ಹೋಗುವುದಿಲ್ಲ, ಮಾತನಾಡುವ ಅವಶ್ಯಕತೆ ಇಲ್ಲ. ಈಗಾಗಲೇ ರಾಷ್ಟ್ರದ ಎಲ್ಲಾ ಪತ್ರಿಕೆಗಳಲ್ಲಿ ಆ ವಿಷಯ ಬಂದು ಎಲ್ಲಾ ಜನರ ಮನವನ್ನು ಸೆಳೆದಿರುತ್ತದೆ. ಅದೂ ಅಲ್ಲದೆ ಇದರ ಬಗ್ಗೆ ಹೈಕೋರ್ಟ್ ತೀರ್ಮಾನ ಕೊಟ್ಟಿರುವಾಗ ನಾನು ಈ ವರದಿ ಬಗ್ಗೆ ಮಾತನಾಡುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸಿಗದೇ ಇದ್ದರೂ ಬೀರು, ಬ್ರಾಂದಿ ಸಿಗುವಂತಹ ರೀತಿಯಲ್ಲಿ ಇವರು ಅಂಗಡಿಗಳನ್ನು ತೆರೆಯುವ ವ್ಯವಸ್ಥೆ ಮಾಡಿದ್ದಾರೆಂದು ಹೇಳಿ, ಇಷ್ಟು ಹೊತ್ತು ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಕೆ. ಕುಮಾರ್‌ಸ್ವಾಮಿ (ಬೇಲೂರು).—ಮಾನ್ಯ ಸಭಾಧ್ಯಕ್ಷರೇ, ನಾನು ಪೋಲೀಸ್ ಇಲಾಖೆ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಪೋಲೀಸ್ ಇಲಾಖೆಯು ಕಾರ್ಯ ವೈಖರಿ ಯಾವುದೇ ಸರ್ಕಾರದ ಬಳುವಳಿ ಏನಲ್ಲ. ಕಾಂಗ್ರೆಸ್ 'ಐ' ಸರ್ಕಾರ ಇರಬಹುದು, ಜನತಾ ಸರ್ಕಾರ ಇರಬಹುದು, ಯಾವುದೇ ಸರ್ಕಾರ ಇದ್ದರೂ ಸಹ ಈ ಇಲಾಖೆ ತನ್ನ ಕಾರ್ಯವನ್ನು ತಾನು ನಿರ್ವಹಿಸುತ್ತದೆ. ಆದರೆ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ಪೋಲೀಸ್ ಇಲಾಖೆ ಕಾರ್ಯ ದಕ್ಷತೆ ಕಾಂಗ್ರೆಸ್ ಸರ್ಕಾರದ ಅಧಿಕಾರದಲ್ಲಿ ಇದ್ದಂತಹ ಕಾಲಕ್ಕಿಂತ ಜನತಾ ಸರ್ಕಾರದ ಕಾಲದಲ್ಲಿ ಹೆಚ್ಚಾಗಿದೆ ಎಂದು ಹೇಳುವುದಕ್ಕೆ ಸಂತೋಷವಾಗುತ್ತದೆ.

ಯಾವುದೇ ಪ್ರಕರಣಗಳ ಸಂಖ್ಯೆಯನ್ನು ತೆಗೆದುಕೊಳ್ಳಿ, ಅದರ ಬಗ್ಗೆ ವಿಚಾರಣೆಯಲ್ಲಾಗಲಿ, ತೀರ್ಮಾನ ಮಾಡುವ ವಿಷಯದಲ್ಲಾಗಲಿ, ಜನರ ಜೊತೆಗೆ ಸಂಪರ್ಕ ಹೊಂದಿಕೊಂಡಿರುವುದರಲ್ಲಾಗಲಿ, ಈ ಜನತಾ ಸರ್ಕಾರ ಬಂದ ಮೇಲೆ ಪೋಲೀಸ್ ಇಲಾಖೆಯಲ್ಲಿ ಬಹಳಷ್ಟು ಸುಧಾರಣೆಯನ್ನು ನಾವು ಪುನಃ ಕಾಣುತಾ ಇದ್ದೇವೆ. ಪೋಲೀಸ್ ಇಲಾಖೆಯಲ್ಲಿ ಪ್ರಮುಖವಾದಂತಹ ಮಾರ್ಪಾಡುಗಳು ಒಮ್ಮೆಗೆ ತ್ವರಿತವಾಗಿ ಆಗಬೇಕೆಂದು ಹೇಳಿದರೂ ಕಷ್ಟವಾಗುತ್ತದೆ ಕೆಲವು ಸಾರಿ ಪೋಲೀಸ್ ಇಲಾಖೆಯು ಯಾವುದೇ ತನ್ನ ಕಾರ್ಯವನ್ನು ಮಾಡಬೇಕು ಅಂದರೆ ಅದರ ಬಗ್ಗೆ ವಿಮರ್ಶೆಯನ್ನು ನಾವು ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ ಉದಾಹರಣೆಗೆ ಇಲಾಖೆಯಲ್ಲಿ ಸಿ.ಇ.ಇ. ಸೆಲ್ ಎಂದು ಒಂದು ವಿಭಾಗ ಇದೆ. ಅದು ಹೆಚ್ಚು ಪ್ರಾಮಾಣಿಕ

ವಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ನನಗನಿಸುತ್ತದೆ. ಆ ವಿಭಾಗವು ಪರಿಶಿಷ್ಟ ಜಾತಿ ಜನಾಂಗಗಳ ಮೇಲೆ ದೌರ್ಜನ್ಯಗಳು ಎಲ್ಲಿಯಾದರೂ ಆದರೆ, ಅವರ ಆಸ್ತಿಪಾಸ್ತಿಗಳ ಮೇಲೆ ದೌರ್ಜನ್ಯಗಳು ಆದರೆ ಅದರ ತನಿಖೆ ನಡೆಸಿ ಅದರ ವಿವರವನ್ನು ಜಿಲ್ಲಾಧಿಕಾರಿಗಳವರಿಗೆ ತಿಳಿಸಬೇಕು. ನೊಂದವರಿಗೆ ಜಿಲ್ಲಾಧಿಕಾರಿಗಳವರು ಪರಿಹಾರವನ್ನು ನೀಡಬೇಕೆಂದು ಇದೆ ಕೆಲವು ಸಾರಿ ಇಲಾಖೆಯು ಈ ವಿಭಾಗದವರು ಕೆಲವಾರು ವಿಚಾರಣೆಗಳನ್ನು ಸರಿಯಾಗಿ ಮಾಡದೆ, ವರದಿಯನ್ನು ಕೊಡದೆ ವಾಸ್ತವವಾಗಿ ನಡೆದಿರತಕ್ಕಂತಹ ಘಟನೆಗಳ ಬಗ್ಗೆ, ಸರಿಯಾದ ವಿವರಣೆಯನ್ನು ಕೊಡದೆ ಸಂಬಂಧಪಟ್ಟ ಜನರಿಗೆ ಪರಿಹಾರ, ರಕ್ಷಣೆ ದೊರಕುವಲ್ಲಿ ಅಡಚಣೆಯಾದ ಸಂದರ್ಭಗಳೂ ಇವೆ. ವಿಚಾರಣೆಯನ್ನು ಈ ವಿಭಾಗದವರು ಇಟ್ಟುಕೊಂಡು ಹಣವನ್ನು ಬಿಡುಗಡೆ ಮಾಡುವುದನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದಾರೆ. ಇದರಿಂದ ವಿಳಂಬವಾಗಿದೆ. ನನ್ನ ಸಲಹೆ ಏನೆಂದರೆ, ವಿಚಾರಣೆಯನ್ನು ಸ್ಥಳೀಯ ಪೋಲೀಸ್‌ರಿಗೆ ಕೊಟ್ಟು ಮಂಜೂರಾತಿಯನ್ನು ಜಿಲ್ಲಾಧಿಕಾರಿಯವರು ಮಾಡುವ ಹಾಗೆ ಇರಬೇಕು. ಒಂದು ಘಟನೆ ನಡೆಯಿತು ಎಂದರೆ ಸಬ್ ಇನ್‌ಸ್ಪೆಕ್ಟರ್‌ರಿಂದ ಹಿಡಿದು ಸರ್ಕಲ್ ಇನ್‌ಸ್ಪೆಕ್ಟರ್, ಡಿ.ವೈ.ಎಸ್.ಪಿ. ಎಸ್.ಪಿ.ಡಿ.ಐ.ಜಿ ತನಕವೂ ಹೋಗಿ ಬರುವಲ್ಲಿ ತನಿಖೆಯ ವರದಿಯು ವಿಳಂಬವಾಗುತ್ತಿದೆ. ಇದರಿಂದಾಗಿ ಕೆಲಸವು ತೀವ್ರವಾಗಿ ಆಗುವುದಿಲ್ಲ. ಇದು ತಪ್ಪಬೇಕಾಗಿದೆ. ಆದುದರಿಂದ ಈ ಕಾರ್ಯವನ್ನು ಸರ್ಕಾರದವರು ನೇರವಾಗಿ ಸ್ಥಳೀಯಪೋಲೀಸರಿಗೆ ಮತ್ತು ಜಿಲ್ಲಾಧಿಕಾರಿಯವರಿಗೆ ವಹಿಸಬೇಕು, ಜೊತೆಗೆ ಈ ತನಿಖೆಯನ್ನು ಮಾಡುವುದಕ್ಕಾಗಿಯೇ ಒಂದು ಪೋಲೀಸ್ ವ್ಯವಸ್ಥೆ ಇದ್ದರೆ ಒಳ್ಳೆಯದು. ಪರಿಶಿಷ್ಟ ಜಾತಿ ಮತ್ತು ಜನಾಂಗದವರ ಹಿತವನ್ನು ಕಾಪಾಡುವಲ್ಲಿ ನನ್ನ ಒಂದು ಸಲಹೆ ಏನೆಂದರೆ, ಜಿಲ್ಲಾ ಮಟ್ಟದಲ್ಲಿ ಅವರ ಹಿತವನ್ನು ನೋಡಿಕೊಳ್ಳುವುದಕ್ಕೆ ಒಂದು ವಿಶೇಷ ಜಿಲ್ಲಾ ಪೋಲೀಸ್ ವ್ಯವಸ್ಥೆಯನ್ನು ಮಾಡಬೇಕು. ಈಗ ಇರುವ ವ್ಯವಸ್ಥೆಯನ್ನು ಮಾರ್ಪಾಡು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ. ಈಗ ನಗರ ಸಂರಕ್ಷಣಾ ವಿಭಾಗ ಇದೆ. ಅದು ಅಷ್ಟು ಚೆನ್ನಾಗಿ ಅತ್ಯುತ್ತಮವಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ನನಗನಿಸುತ್ತದೆ. ಜೊತೆಗೆ ಪೋಲೀಸ್ ಇಲಾಖೆ ನಡೆದಿರತಕ್ಕಂತಹ ಪ್ರಕರಣಗಳನ್ನು ಪತ್ತೆಹಚ್ಚುವುದರಲ್ಲಿ ಬಹಳಷ್ಟು ವಿಳಂಬವಾಗುತ್ತಿರುವುದನ್ನು ಕಾಣುತ್ತೇವೆ. ಈ ದರೋಡೆ ಪ್ರಕರಣಗಳಿಗೆ ಯಾರೇ ಜವಾಬ್ದಾರರು ಇದ್ದರೂ ಕೂಡಾ, ಒಂದು ವಿಷಯವನ್ನು ನಾವು ಗಮನಿಸಬೇಕಾಗುತ್ತದೆ. ಏನೆಂದರೆ ನಮ್ಮ ಪೋಲೀಸ್‌ರಿಗಿಂತ ದರೋಡೆಕೋರರು ಬುದ್ಧಿವಂತರಾಗಿರುತ್ತಾರೆ ಮತ್ತು ವೈಜ್ಞಾನಿಕವಾಗಿ ಸುಸಜ್ಜಿತರಾಗಿರುತ್ತಾರೆ. ಆದುದರಿಂದ ಈಗಿನ ಪರಿಸ್ಥಿತಿಗೆ ಅನುಗುಣವಾಗಿ ನಮ್ಮ ಪಡೆಯನ್ನು ಕೂಡಾ ಬೆಳೆಸಿಕೊಂಡು ಸುಸಜ್ಜಿತವಾಗಿ ಇರಿಸಬೇಕು. ಅಧಿಕಾರಿಗಳೂ ಕೂಡಾ ಚಾಣಾಕ್ಷತನವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಇಂತಹ ಪ್ರಕರಣಗಳನ್ನು ತಡೆಯಲು ಸಾಧ್ಯವಾಗುತ್ತದೆ. ಹಾಗೆಯೇ ಪೋಲೀಸರ ಬಗ್ಗೆ ಜನಸಾಮಾನ್ಯರಲ್ಲಿ ಒಂದು ತಪ್ಪು ಅಭಿಪ್ರಾಯ ಬೆಳೆದಿದೆ. ಅದನ್ನು ನಿವಾರಣೆ ಮಾಡಿಕೊಳ್ಳಬೇಕು. ಪೋಲೀಸರು ಜನರ ಕಷ್ಟಗಳ ಬಗ್ಗೆ ಕಿವಿ ಕೊಡುವುದಿಲ್ಲ, ಜನರ ಕಷ್ಟಗಳೊಂದಿಗೆ ಅವರು ಸ್ಪಂದಿಸುವುದಿಲ್ಲ ಎಂಬ ಭಾವನೆ ಇದೆ. ಅದನ್ನು ನಿವಾರಿಸಿಕೊಳ್ಳಬೇಕು. ಜನರು ತಮ್ಮ ಕಷ್ಟನಿವಾರಣೆಗಾಗಿ ಜಿಲ್ಲಾ ಮಟ್ಟದಲ್ಲಿನ ರಾಜ್ಯಮಟ್ಟದಲ್ಲಿನ ಅಧಿಕಾರಿಗಳನ್ನು ಕಾಣುವುದು ತಪ್ಪಬೇಕು. ಕಾರಣ ಅವರಿಗೆ ಕೆಳಮಟ್ಟದಲ್ಲಿರುವ ಅಧಿಕಾರಿಗಳ ಮೇಲೆ ವಿಶ್ವಾಸ ಕಡಿಮೆಯಾಗಿರುವುದು ಎಂದು ಕಾಣುತ್ತದೆ. ಕೆಳಮಟ್ಟದಲ್ಲಿ ಸರಿಯಾಗಿ ಕಾರ್ಯನಿರ್ವಹಣೆ ಆದರೆ, ಜನರು ಮೇಲ್ಮಟ್ಟಕ್ಕೆ ಬರುವುದನ್ನು ತಪ್ಪಿಸಬಹುದಾಗಿದೆ, ಈ ದಿಸೆಯಲ್ಲಿ ನಿಗಾವಹಿಸಬೇಕಾದ್ದು ಅಗತ್ಯ. ಒಟ್ಟಿನಲ್ಲಿ ಜನರ ಹಿತ ಹಾಗೂ ಹಕ್ಕು ರಕ್ಷಣೆಗಾಗಿ ಇರುವ ಈ ಇಲಾಖೆಯು ತನ್ನ ಕಾರ್ಯವನ್ನು ಇನ್ನೂ ಉತ್ತಮವಾಗಿ ನಿರ್ವಹಿಸುವಲ್ಲಿ ಹೆಚ್ಚು ಗಮನ ಕೊಡಲಿ, ಮತ್ತು ಪರಿಶಿಷ್ಟ ಜಾತಿ, ಜನಾಂಗದವರ ಹಿತರಕ್ಷಣೆಗಾಗಿ ವಿಶೇಷವಾಗಿ ಗಮನ ಕೊಡಲಿ ಎಂದು ಪ್ರಾರ್ಥಿಸಿಕೊಂಡು, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಅಧ್ಯಕ್ಷರು.— ವೆಂಕಟರಾಮಯ್ಯನವರು ಮಾತನಾಡಿ, ತಮ್ಮ ಅವಧಿಯೊಳಗೆ ತಮ್ಮ ಭಾಷಣವನ್ನು ಮಾಡಿ ಮುಗಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೆ, ನಾನು ಈ ಮೂರು ಇಲಾಖೆಗಳ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ. ಆದರೂ ಸ್ವಲ್ಪ ಸಮಯದ ಅವಕಾಶ ಬೇಕಾಗುತ್ತದೆ. ಏಕೆಂದರೆ ಮೊದಲು ರಮೇಶ್ ಜಿಗಜಿಣಗಿಯವರ ಡಿಪಾರ್ಟ್‌ಮೆಂಟ್‌ನ ಸಾರಾಯಿ ಕುಡಿದು, ನಂತರ ಮಾನ್ಯ ರಾಚಯ್ಯನವರ ಇಲಾಖೆಯ ಪೋಲೀಸ್‌ಸ್ಟೇಷನ್‌ಗೆ ಹೋಗಿ, ಅಲ್ಲಿ ಏಟು ತಿಂದು, ನಂತರ ಮಾನ

ವೀರಣ್ಣನವರ ಇಲಾಖೆಯ ಜೈಲಿಗೆ ಹೋಗಿ, ಅಲ್ಲಿ ದಂಡಿಮಗೆ ಕೊಟ್ಟು ಅಂದರೆ ಅಲ್ಲಿ ಸಂಪಾದನೆ ಮಾಡುವ ಎರಡು ರೂಪಾಯಿಗಳಿಂದ ಕಾಫಿತಿಂಡಿ ತಿನ್ನಬೇಕು. ಇಷ್ಟೆಲ್ಲಾ ಕೆಲಸಕಾರ್ಯಗಳು ಇರುವಾಗ ಹೇಗೆ ಬೇಗನೆ ಮುಗಿಸುವುದು ಸಾಧ್ಯ?

ಅಧ್ಯಕ್ಷರು.— ವೆಂಕಟರಾಮಯ್ಯನವರೇ, ತಾವೂ ಕೂಡಾ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದ್ದೀರಿ. ತಾವು ಹಿರಿಯ ಸದಸ್ಯರು, ತಮಗೆ ಎಲ್ಲಾ ವಿಚಾರಗಳೂ ಗೊತ್ತಿವೆ. ತಮಗೆ ಕೊಟ್ಟ ಸಮಯದಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.— ಅಧ್ಯಕ್ಷರೇ, ಪೋಲೀಸ್ ಇಲಾಖೆಯ ಬಗ್ಗೆ ಸ್ವಲ್ಪ ಮಾತ್ರ ಹೇಳುತ್ತೇನೆ. ಆ ಇಲಾಖೆಯ ಬಗ್ಗೆ ನನಗೆ ತುಂಬಾ ಕಾಳಜಿ ಇದೆ. ಅಲ್ಲಿರುವ ಪೋಲೀಸ್ ಕಾನ್ಸ್‌ಟೇಬಲ್‌ಗಳನ್ನು. ಹೆಡ್‌ಕಾನ್ಸ್‌ಟೇಬಲ್‌ಗಳನ್ನು ಇಲಾಖೆಯವರು ಸರಿಯಾಗಿ ಟ್ರೀಟ್ ಮಾಡುತ್ತಾ ಇಲ್ಲ. ಅವರನ್ನು ಮೇಲಿನವರು ಮೃಗಗಳಂತೆ ಕಾಣುತ್ತಿದ್ದಾರೆ. ಇವರ ಬಗ್ಗೆ ಸ್ವಲ್ಪ ಮಾನವೀಯತೆಯನ್ನು ತೋರಿಸಿ, ಕೆಳಗಿನ ಸಿಬ್ಬಂದಿಯವರಾದ ಇವರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಬ್ರಿಟೀಷರ ಕಾಲದಲ್ಲಿ ಯಾವ ಸ್ಥಿತಿಗತಿಗಳು, ಪದ್ಧತಿ ಇತ್ತೋ ಅದೇ ಇವತ್ತು ಕೂಡಾ ನಡೆದುಕೊಂಡು ಬಂದಿದೆ. ಶ್ರೀಸಾಮಾನ್ಯನ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಹಾಗೆಯೇ ದಕ್ಷತೆಯ ಕಡೆಗೂ ಗಮನ ಕೊಡಬೇಕು. ಈ ಪದ್ಧತಿಯನ್ನು ಬದಲಾಯಿಸಿಕೊಳ್ಳಬೇಕು. ಇವರ ವಿಷಯದಲ್ಲಿ ಜಸ್ಟೀಸ್ ಮುಲ್ಲಾರವರ ಒಂದು ರೂಲಿಂಗ್ ಇತ್ತು. "If there is organised gang of dacoits in India, it is Indian Police. I say this with all sence of responsibility for having come across 32,000 criminal cases." ಎಂಬ ಒಂದು ಮಾತನ್ನು ಹೇಳಿದ್ದರು. ಅಂತಹ ಒಂದು ಅಲಿಗೇಶನ್ ಇದೆ. ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಮಾನ್ಯ ರಾಚಯ್ಯನವರ ಕಾಲದಲ್ಲಿಯೂ ಪೋಲೀಸ್ ಇಲಾಖೆಯಲ್ಲಿ ಅಪರಾಧಗಳು ಇಲಾಖೆಯ ಮೇಲಿನ ಆರೋಪಗಳು ಹೆಚ್ಚು ಕಡಿಮೆ ಆಗಲಿಲ್ಲ. ಗುಂಡೂರಾವ್‌ರವರ ಕಾಲದಲ್ಲಿಯೂ ಹೆಚ್ಚು ಕಡಿಮೆ ಆಗಲಿಲ್ಲ ನಿರಪರಾಧಿಗಳನ್ನು ಥಳಿಸುವುದು ಕಡಿಮೆಯಾಗಲಿಲ್ಲ. ಇವುಗಳು ತಪ್ಪಬೇಕು. ಮೊನ್ನೆ ೨೬ನೇ ತಾರೀಖು, ನಮ್ಮ ವಿಧಾನ ಮಂಡಲ ಕಾರ್ಯಾಲಯದ ಒಂದು ಅಸೋಸಿಯೇಶನ್ ಇದೆ, ಅದರಲ್ಲಿ ಸುಮಾರು ೬೫೦ ಜನ ಸದಸ್ಯರಿದ್ದಾರೆ. ೨೬ರಂದು ೩೧೧ನೇ ವಿಧಿಯನ್ನು ತೆಗೆದುಹಾಕಬೇಕೆಂಬ ಭಾರತ್ ಬಂದ್‌ನಲ್ಲಿ ಅವರು ಕೂಡಾ ಪಾಲ್ಗೊಂಡಿದ್ದರು. ಅಂತಹ ಸಮಯದಲ್ಲಿ ಅವರು ತಮ್ಮ ಕಛೇರಿಗೆ ಏನೋ ಕೆಲಸ ನಿಮಿತ್ತವಾಗಿ ಬಂದಿರಬಹುದು. ಆಗ ಅವರನ್ನು ಸರ್ಕಲ್ ಇನ್ಸ್‌ಪೆಕ್ಟರ್‌ರವರು ಬಂಧಿಸಿ ಥಳಿಸಿದ್ದಾರೆ. ಅದಕ್ಕಾಗಿ, ಅದನ್ನು ವಿರೋಧಿಸಿ ನಿನ್ನೆ ಇಲ್ಲಿ ಕಾರ್ಯಾಲಯದ ನೌಕರರೆಲ್ಲರೂ ಸ್ಟ್ರೈಕ್ ಮಾಡಿದರು. ಸಬಾಸ್ಟೀಯನ್ ಮತ್ತು ಧ್ರುವಕುಮಾರ್ ಎಂಬುವವರನ್ನು ಬಂಧಿಸಿ, ಹೊಡೆದುದರ ಬಗ್ಗೆ ಈ ಸ್ಟ್ರೈಕ್ ನಡೆಯಿತು. ಸಬಾಸ್ಟೀಯನ್ ಎನ್ನುವವರು ನೌಕರರ ಸಂಘದ ಉಪಾಧ್ಯಕ್ಷರೂ ಆಗಿದ್ದಾರೆ. ಹೀಗೆ ಮಾಡುವುದು ಸರಿಯೇ? ಇದು ಇಲಾಖೆಗೆ ಒಳ್ಳೆಯ ಹೆಸರನ್ನು ತರುತ್ತದೆಯೇ ಹಾಗೆಯೇ ಯೂನಿಯನ್ ಬ್ರೀವರಿಸ್‌ನ ನೌಕರರಾದ ಶ್ರೀ ಕೃಷ್ಣ ಎನ್ನುವವರನ್ನು ಬಂಧಿಸಿ ಅವರ ಬಟ್ಟೆಗಳನ್ನು ಸಂಪೂರ್ಣವಾಗಿ ಕಳಚಿ ಬಿಟ್ಟು. ಹೊಡೆದಿದ್ದಾರೆ. ಪೋಲೀಸರು ತಮಗೆ ಏನೇನು ನೋಡಬೇಕೆಂದು ಆಸೆ ಇಟ್ಟುಕೊಂಡು ಅವರ ಚಡ್ಡಿ ಅಂಗಿ ಬಿಚ್ಚಿ ನೋಡಿದರೋ, ಹೊಡೆದರೋ, ಆ ವ್ಯಕ್ತಿ ಇವತ್ತು ಆಸ್ಪತ್ರೆಯಲ್ಲಿ ಶುಶ್ರೂಷೆ ಪಡೆಯುತ್ತಿದ್ದಾರೆ. ದ್ರೌಪದಿಯ ವಸ್ತ್ರಾಪಹರಣ ಮಾಡಿದ ರೀತಿಯಲ್ಲಿ ಇವೊತ್ತು ಕೂಡಾ ಇವರು ನಿರಪರಾಧಿಗಳ ವಸ್ತ್ರಾಪಹರಣ ಮಾಡುತ್ತಾ ಇರುತ್ತಾರೆ ಎಂದು ಹೇಳಿದರೆ ಇದಕ್ಕಿಂತ ಹೆಚ್ಚು ನಾಚಿಕೆಗೇಡಿನ ವಿಷಯ ಇದೆಯೇ? ಈ ಕಾಲದಲ್ಲಿಯೂ ಇದು ಮುಂದುವರಿಯಬೇಕೇ? ೩೧೧ನೇ ವಿಧಿಯನ್ನು ಸರಿಪಡಿಸಬೇಕೆಂದು ಮುಷ್ಕರ ಮಾಡಿದ್ದಾರೆ. ಅದರಿಂದ ಅವರ ಹಕ್ಕುಚ್ಯುತಿ ಆಗುತ್ತದೆ ಎಂದು ಅವರು ಭಾವಿಸಿದ್ದರೆ. ಹಾಗೆ ವ್ಯಕ್ತಪಡಿಸುವ ಹಕ್ಕನ್ನು ಕೂಡಾ ಅವರು ಹೊಂದಿದ್ದಾರೆ. ನಾನು ಇಲಾಖೆಯ ಬಗ್ಗೆ ಇನ್ನೂ ಹೇಳುವುದಾದರೆ, ಇದೊಂದು ಮಾನವೀಯತೆಯ ಸಮಸ್ಯೆ. ಇಲಾಖೆಯವರು ಸ್ವಲ್ಪ ಮಾನವೀಯತೆಯನ್ನು ಕಲಿತರೆ ತುಂಬಾ ಒಳ್ಳೆಯದು. ಜನರೊಡನೆ. ಅಪರಾಧಿಗಳೊಡನೆ ವರ್ತಿಸುವಲ್ಲಿ ಒಂದು ಇತಿಮಿತಿ ಇದೆ, ಅದನ್ನು ಅನುಸರಿಸಬೇಕೇ ಹೊರತಾಗಿ ಸಿಕ್ಕಾಪಟ್ಟೆ ವರ್ತನೆ ತೋರಿಸುವುದು ಸರಿಯಲ್ಲ. ಇಂತಹ ಕೃತಿಗಳನ್ನು ಜನರ ಮೇಲೆ ಮಾಡುವುದನ್ನು ಬಿಡಬೇಕು. ಯಾರನ್ನೇ

ಆಗಲಿ ನ್ಯಾಯವಾಗಿ ನೋಡಿಕೊಳ್ಳಬೇಕು. ನಾನು ತಿಳಿದ ಮಟ್ಟಿಗೆ ಜನತಾ ಸರ್ಕಾರ ಬಂದಮೇಲೆ ಬೆಂಗಳೂರಿನಲ್ಲಿ ಗೂಂಡಾಗಿರಿ ಸ್ವಲ್ಪ ಕಡಿಮೆಯಾಗಿದೆ. ಆದರೆ ಕೆಲವು ಸಮಯದ ಹಿಂದೆ ಗ್ಯಾಂಗ್‌ವಾರ್ ನಡೆದಿತ್ತು. ಅದರಲ್ಲಿ ಹುಡುಗರಲ್ಲಿಯೇ ಗ್ಯಾಂಗ್‌ಗಳ ನಡುವೆ ಬಡಿದಾಟ ಆಗಿ ಒಬ್ಬನನ್ನು ಚೂರು ಚೂರು ಮಾಡಿದ್ದಾರೆ. ಇವೆಲ್ಲ ನಡೆದೇ ಇದೆ. ಇವುಗಳ ಬಗ್ಗೆ ನಿಗಾ ವಹಿಸಿ ಜಾಗ್ರತರಾಗಿರಬೇಕು. ಈಗಲೂ ಕೂಡ ಗ್ಯಾಂಗ್‌ವಾರ್ ಇದ್ದೇ ಇದೆ. ಹಾಗೆಯೇ ದರೋಡೆ ಪ್ರಕರಣಗಳೂ ಕೂಡ ನಡೆದುವು ಇವುಗಳೆಲ್ಲ ವರ ಬಗ್ಗೆ ಒಂದು ಸುವ್ಯವಸ್ಥಿತವಾದ ರೀತಿಯಲ್ಲಿ ಹತ್ತಿಕ್ಕುವುದನ್ನು ತ್ವರಿತವಾಗಿ ಯೋಚಿಸಬೇಕು. ಪೋಲೀಸ್ ವ್ಯವಸ್ಥೆ ಇದರಲ್ಲಿ ಇನ್ನೂ ಕುಂದುರಿಲ್ಲ.

ಈ ಸಾರಿ ನಮ್ಮ ಮಾನ್ಯ ರಾಚಯ್ಯನವರು ಸುಮಾರು ೩೦ ಕೋಟಿ ರೂಪಾಯಿಗಳನ್ನು ಮಾತ್ರ ಜಾಸ್ತಿ ಕೇಳಿದ್ದಾರೆ. ಇದರಿಂದ ಅವರ ಎಫಿಷಿಯನ್ಸಿ ಏನಾದರೂ ಜಾಸ್ತಿಯಾಗಿದೆಯೇ ಎಂದು ನೋಡಿದಾಗ ೧೯೮೫ನೇ ಇಸವಿಯಲ್ಲಿ ಸ್ವಲ್ಪ ಮಟ್ಟಿಗೆ ಇಂಪ್ರೂವ್ ಆಗಿದೆ ಎಂದು ಅವರು ಕೊಟ್ಟಿರತಕ್ಕಂಥ ಅಂಕಿ ಅಂಶಗಳಿಂದ ನಮಗೆ ಗೊತ್ತಾಗುತ್ತದೆ. ಅದೇ ೧೯೮೬ನೇ ಇಸವಿಯ ಅಂಕಿಅಂಶಗಳನ್ನು ತೆಗೆದುಕೊಂಡರೆ ನಿಜವಾಗಿಯೂ ನಾಚಿಕೆಯಾಗುತ್ತದೆ. ಕಾರಣವೇನೆಂದರೆ, ನಮ್ಮ ಬೆಂಗಳೂರು ನಗರದಲ್ಲಿ ಮತ್ತು ರಾಜ್ಯದ ಇತರ ಕಡೆಗಳಲ್ಲಿ ಬೇಕಾದಷ್ಟು ಡಕಾಯಿತಿಗಳು ನಡೆದಿವೆ. ಮತ್ತು ಮಂಗಳೂರು ನಗರದಲ್ಲಿ ಹಾಗೂ ಸುತ್ತಮುತ್ತಲಿನ ವಿಚಾರವನ್ನು ಕೇಳಿದರೆ ನಿಜವಾಗಿಯೂ ಸಹ ನನಗೆ ಬಹಳ ಬೇಜಾರು ಆಗುತ್ತದೆ. ಅಲ್ಲಿರತಕ್ಕಂಥ ಬೀಡಿ ವರ್ಕರ್ಸ್ ಮನೆಗಳಿಗೆ ಈ ಡಕಾಯಿತರು ನುಗ್ಗಿ ಅವರ ಮನೆಗಳಲ್ಲಿರತಕ್ಕಂಥ ನೂರು ಅಥವಾ ಇನ್ನೂರು ರೂಪಾಯಿಗಳನ್ನು ದೋಚಿಕೊಂಡು, ಅವರನ್ನು ಕೊಂದು ಹಾಕಿರುವಂತಹ ಘಟನೆಗಳು ಸಹ ನಡೆದಿವೆ. ಇದರ ಜೊತೆಗೆ ಅವರ ಮನೆಗಳಲ್ಲಿರತಕ್ಕಂಥ ಹೆಣ್ಣು ಮಕ್ಕಳ ಮಾನಭಂಗ ಸಹ ಮಾಡಿ ಹೋಗಿದ್ದಾರೆ. ಈ ಬಗ್ಗೆ ಈಗಾಗಲೇ ಸಣ್ಣಪುಟ್ಟ ಪತ್ರಿಕೆಗಳಲ್ಲಿ ಎಲ್ಲಾ ಬಂದಿದೆ. ಆದರೆ ಮಾನ್ಯ ಮಂತ್ರಿಗಳು ಹಿಂದೆ ಈ ಬಗ್ಗೆ ಮಾತನಾಡುತ್ತಾ ಯಾರೂ ಆ ಕಡೆ ಯಿಂದ ದೂರುಗಳು ಕೊಟ್ಟಿಲ್ಲವೆಂದು ಹೇಳಿದರು. ಆದರೆ ನನ್ನ ಕ್ಷೇತ್ರದಲ್ಲಿ ಮೊನ್ನೆಯ ದಿವಸ ಒಂದು ದಾರಿ ದರೋಡೆ ನಡೆದಿದೆ ಸ್ವಾಮಿ, ಅದು ಯಾವ ರೀತಿ ಅಂದರೆ ಒಬ್ಬ ವ್ಯಕ್ತಿ ಒಂಟಿಯಾಗಿ ಹೋಗುತ್ತಿದ್ದಾಗ ಆತನನ್ನು ಇಬ್ಬರು ಬಂದು ಅವನನ್ನು ಹೆದರಿಸಿ ಆತನ ಬಳಿಯಲ್ಲಿ ಇದ್ದ ಅಲ್ಪ ಸ ಲ್ಪ ಹಣವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಆತ ನನಗೆ ಇವತ್ತು ಪತ್ರ ಬರೆದಿದ್ದಾನೆ. ಆತನಿಗೆ ದೂರು ಕೊಡು ಎಂದು ಹೇಳಿದರೆ ಸ್ವಾಮಿ ನಾನೇನಾದರೂ ದೂರು ಕೊಟ್ಟರೆ ನಾನು ಈ ಹಳ್ಳಿಯಲ್ಲಿ ಜೀವನ ಮಾಡುವುದಕ್ಕೆ ಅವರು ಬಿಡುವುದಿಲ್ಲ ಎನ್ನುವ ಮಾತನ್ನು ಹೇಳಿದ. ಆ ರೀತಿಯ ಭಯ ಜನತೆಯಲ್ಲಿ ಬಂದಿದೆ. ಇದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಮೊನ್ನೆಯ ದಿವಸ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಯಡಿಯೂರಪ್ಪನವರು ಮಾತನಾಡುತ್ತಾ, ಈ ದರೋಡೆ ಕೋರರನ್ನು ಯಾರು ಪತ್ತೆ ಮಾಡುತ್ತಾರೋ ಅವರಿಗೆ ಸರ್ಕಾರ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆಂದು ಹೇಳಿರುವುದು ನಿಮ್ಮ ಇನ್‌ಎಫಿಷಿಯನ್ಸಿ ತೋರಿಸುತ್ತದೆಂದು ಹೇಳಿದರು. ಆದ್ದರಿಂದ ತಾವು ಇನ್ನು ಮುಂದಾದರೂ ಇಂತಹ ಕೇಸ್‌ಗಳ ಬಗ್ಗೆ ಸ್ವಲ್ಪ ಗಮನ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಈ ಪೋಲೀಸ್ ಇಲಾಖೆಯಲ್ಲಿ ಸಿ.ಓ.ಡಿ. ಇಲಾಖೆ ಎನ್ನುವ ಒಂದು ಗ್ರೂಪ್ ಬೇರೆ ಇದೆ. ಈ ಒಂದು ಗ್ರೂಪ್‌ನಲ್ಲಿ ಪೋಲೀಸ್ ಇಲಾಖೆಯ ಅರ್ಧದಷ್ಟು ಜನ ಅಲ್ಲಿಯೇ ಇದ್ದಾರೆ. ನನಗೆ ತಿಳಿದ ಮಟ್ಟಿಗೆ ಅವರ ಮೇಲೆ ಸಾರ್ವಜನಿಕವಾಗಿ ಇರುವ ಒಂದು ಆಪಾದನೆ ಏನೆಂದರೆ ಏನೂ ಕೆಲಸಕ್ಕೆ ಬಾರದೆ ಇರುವಂತಹ ಕಂಡಂ ಆಫೀಸರ್ಸ್ ಅನ್ನು ಅಲ್ಲಿ ಹಾಕಿರುತ್ತಾರೆ ಎನ್ನುವ ಒಂದು ಅಭಿಪ್ರಾಯ ಜನತೆಯಲ್ಲಿ ಇದೆ ಅವರು ಕಚೇರಿಯಲ್ಲಿ ಕೆಲಸವಿಲ್ಲದೆ ಸುಮ್ಮನೆ ಕುಳಿತುಕೊಂಡಿರುತ್ತಾರೆ. ಅಲ್ಲಿಡಿ.ಐ.ಜಿ.ಐ ಜಿ.ಪಿ. ಇತರೆ ಅಧಿಕಾರಿ ವರ್ಗದವರು ಸಹ ಇರುತ್ತಾರೆ. ಅವರಿಗೆ ಯಾವುದೇ ರೀತಿಯಾದಂಥ ಕೆಲಸಕಾರ್ಯಗಳು ಇರುವುದಿಲ್ಲ. ಇನ್ನು ಈ ಪೋಲೀಸ್ ಇಲಾಖೆಯಲ್ಲಿ ನಾಯಿದಳ ಇದೆ. ಈ ನಾಯಿದಳವನ್ನು ಏತಕ್ಕೆ ಇವರು ಇಟ್ಟುಕೊಂಡಿದ್ದಾರೆ ? ಆ ನಾಯಿಗಳು ಯಾರೋ ಒಬ್ಬ ನಿರಪರಾಧಿಯನ್ನು ಮೂಸಿ ನೋಡಿದರೆ ಸಾಕು, ಆತನಿಗೆ ಏನೋ ಗ್ರಹಚಾರ ಬಂತು. ಆತನನ್ನು ಪೋಲೀಸಿನವರು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದು ಚೆನ್ನಾಗಿ ಥಳಿಸಿ ಅವನ ಚರ್ಮವನ್ನು ಸುಲಿದು ಹಾಕುತ್ತಾರೆ. ಈ ಬಗ್ಗೆ ನಾನು ಕೋಲಾರದಲ್ಲಿ ಒಂದು ಕೇಸ್ ನಡೆಸಿ ಆ ಕೇಸ್ ಕೊನೆಗೆ ಅಕ್ವಿಟ್ ಆಯಿತು. ಅದು ಯಾವ ರೀತಿ ಅಂದರೆ ಯಾವುದೋ ಒಂದು ಮರ್ಡರ್ ಕೇಸ್‌ನಲ್ಲಿ ಈ ನಾಯಿದಳವನು ಪೋಲಿಸಿನವರು ಉಪಯೋಗಿಸಿದರು

ಆ ನಾಯಿ ಸತ್ತಂತಹ ವ್ಯಕ್ತಿಯ ಚಿಕ್ಕಪ್ಪನ ಮನೆಗೆ ಹೋಗಿ ಅವರ ಚಿಕ್ಕಪ್ಪನನ್ನು ಮೂಸಿ ನೋಡಿತು. ಆಗ ಪೋಲೀಸಿನವರು ಆತನನ್ನು ಕರೆದುಕೊಂಡು ಬಂದು ಚೆನ್ನಾಗಿ ಚರ್ಮ ಸುಲಿದು ಹಾಕಿದರು. ಈ ರೀತಿಯ ಪ್ರಸಂಗಗಳು ಇನ್ನೂ ನಡೆದಿವೆ. ಈ ನಾಯಿದಳದ ಜೊತೆಯಲ್ಲಿ ಪೋಲೀಸಿನವರು ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಸಹ ಹೋಗುತ್ತಿರುತ್ತಾರೆ. ಪಾಪ ಅವರು ಓಡುವುದನ್ನು ನೋಡಿದರೆ ಮನುಷ್ಯರು ಈ ನಾಯಿಗಳಿಗಿಂತ ಕಡೆಯಾದರೆ ಎಂದು ಅನ್ನಿಸುತ್ತದೆ. ಅಲ್ಲ ಸ್ವಾಮಿ ಮನುಷ್ಯರು ಇನ್‌ವೆಸ್ಟಿಗೇಷನ್ ಮಾಡದೇ ಇರುವುದನ್ನು ನಾಯಿಗಳು ಮಾಡುವುದಕ್ಕೆ ಸಾಧ್ಯವೇ ? ನಿಜವಾಗಿ ಇದು ಒಂದು ರೀತಿಯ ಅಪಮಾನ. ಇದರ ಲಾಯಲಿಟಿ ಏನು ಇದೆ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಈ ಒಂದು ವ್ಯವಸ್ಥೆ ನಮ್ಮಲ್ಲಿ ಯಾವ ರೀತಿ ಇದೆ ಎಂದರೆ ಬ್ರಿಟೀಷ್‌ನವರ ಸಾಮ್ರಾಜ್ಯಶಾಹಿಯಂತೆ ಮತ್ತು ಬಂಡವಾಳಶಾಹಿಗಳಂತೆ ಇದೆ. ಯಾರಾದರೂ ಬಡ ಬಡವ ತಪ್ಪು ಮಾಡಿದರೆ ಆತನನ್ನು ಸದೆಬಡಿಯುತ್ತಾರೆ. ಅದೇ ಈ ಬಂಡವಾಳಶಾಹಿಗಳು ತಪ್ಪು ಮಾಡಿದರೂ ಸಹ ಅವರನ್ನು ಕೇಳುವವರೇ ಇರುವುದಿಲ್ಲ. ಮಾನ್ಯ ಮಂತ್ರಿಗಳು ಸಹ ಬಡ ಕುಟುಂಬದಿಂದ ಬಂದವರು, ಅವರಿಗೆ ಈ ಎಲ್ಲಾ ವಿಚಾರಗಳು ಚೆನ್ನಾಗಿ ಗೊತ್ತಿರುತ್ತವೆ. ಅವರೇನು ಶ್ರೀಮಂತ ಮನೆತನದಿಂದ ಬಂದವರಲ್ಲ. ಯಾರೋ ಒಬ್ಬ ದೊಡ್ಡ ಶ್ರೀಮಂತ ಒಂದು ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದರೂ ಸಹ ಆತ ಕೋರ್ಟಿಗೆ ಹೋಗಿ ಒಂದು ಆಂಟಿಸಿಪೇಷನ್ ಬೆಯಿಲ್ ತಂದು ಮನೆಯಲ್ಲಿ ಇರುತ್ತಾನೆ. ಆದ್ದರಿಂದ ಪೋಲೀಸಿನವರು ತಮ್ಮ ಕಾರ್ಯದಕ್ಷತೆಯ ಬಗ್ಗೆ ಹೆಚ್ಚು ಗಮನ ಕೊಡುವಂತೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಇನ್ನು ನಾನು ಅಬಕಾರಿ ಇಲಾಖೆಗೆ ಬರುತ್ತೇನೆ. ಸ್ವಾಮಿ, ಈ ಬಾಟ್ಲಿಂಗ್‌ನಲ್ಲಿರ ತಕ್ಕಂಥ ಸಾರಾಯಿ ಮೊನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೂ ಕಿಕ್ ಕೊಟ್ಟು ಬಿಟ್ಟಿತು. ಆಗ ಸುಮಾರು ೮ ದಿವಸಗಳ ಕಾಲ ಈ ರಾಜ್ಯದಲ್ಲಿ ಸರ್ಕಾರವೇ ಇರಲಿಲ್ಲ.

ಶ್ರೀ ರಮೇಶ್ ಸಿ, ಜಿಗಜಿಣಗಿ.—ನಿಮಗೂ ಇದು ಕಿಕ್ ಕೊಡುತ್ತದೆಯೋ ?

ಶ್ರೀ ಆರ್. ವೆಂಕಟರಾಮಯ್ಯ.—ನನಗೂ ಕೂಡ ಕಿಕ್ ಕೊಟ್ಟಿತು. ಅದು ಯಾವ ರೀತಿ ಎಂದರೆ ಇಲ್ಲಿ ಶಾಸಕನಾಗಿ ಕೆಲಸ ಮಾಡುವುದಕ್ಕೆ ಬಿಡಲಿಲ್ಲ. ಅಲ್ಲಿ ಲಾಯರ್ ಆಗಿ ಕೆಲಸ ಮಾಡುವುದಕ್ಕೆ ಬಿಡಲಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಬ್ಬ ನಾಗರೀಕನೂ ಸರಾಸರಿ ತಲಾವಾರು ಎಷ್ಟು ಹಣವನ್ನು ಸರ್ಕಾರಕ್ಕೆ ಕೊಡುತ್ತಾನೆಂದು ನಾನು ಆಗ ಲೆಕ್ಕಾಚಾರ ಮಾಡಿದೆ. ನನ್ನ ಒಂದು ಲೆಕ್ಕಾಚಾರದ ಪ್ರಕಾರ ಸುಮಾರು ೨೫ ರೂಪಾಯಿಗಳನ್ನು ಕೊಡುತ್ತಾನೆ. ಇದರಲ್ಲಿ ಹೆಂಡಕ್ಕೆ ಸುಮಾರು ೧೦ ರೂಪಾಯಿಗಳನ್ನು ಕೊಡುತ್ತಾನೆ. ಒಟ್ಟು ಅಂದರೆ ಸರಾಸರಿ ೩೫ ರೂಪಾಯಿಗಳನ್ನು ಒಂದು ವರ್ಷಕ್ಕೆ ಕೊಡಬೇಕಾಗುತ್ತದೆ. ಇದು ಒಂದು ರೀತಿಯಲ್ಲಿ ಕಂದಾಯ ಕೊಟ್ಟ ಹಾಗೆ ಇದರಲ್ಲಿ ನನಗೆ ತಿಳಿದ ಮಟ್ಟಿಗೆ ಎರಡು ರೀತಿಯ ಸಾರಾಯಿ ಇದೆ ಸ್ವಾಮಿ. ಅದರಲ್ಲಿ ಒಂದು ಸರ್ಕಾರದವರು ಮಾರಾಟ ಮಾಡುವಂತಹ ಸಾರಾಯಿ ಮತ್ತೊಂದು ಕಳ್ಳಭಟ್ಟಿ ಸಾರಾಯಿ. ಈ ಕಳ್ಳಭಟ್ಟಿ ಸಾರಾಯಿಯನ್ನೇ ಸಾಮಾನ್ಯವಾಗಿ ಜನ ಜಾಸ್ತಿ ಉಪಯೋಗ ಮಾಡುತ್ತಾರೆ. ಸ್ವಾಮಿ ನನಗೆ ತಿಳಿದ ಮಟ್ಟಿಗೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಈ ಕಳ್ಳಭಟ್ಟಿ ಸಾರಾಯಿಯನ್ನು ತಯಾರು ಮಾಡುತ್ತಾರೆ ಅದೇ ರೀತಿಯಲ್ಲಿ ನಮ್ಮ ಜಿಲ್ಲೆಯ ಬಾಗೇಪಲ್ಲಿ ಎನ್ನುವ ಒಂದು ತಾಲ್ಲೂಕಿನಿಂದ ಇಂತಹ ಒಂದು ವ್ಯವಸ್ಥೆ ಇತ್ತು. ಅದನ್ನು ಈಗಾಗಲೇ ಇವರು ಪತ್ತೆ ಹಚ್ಚಿದ್ದಾರೆ. ಆತನ ಬಳಿ ಸುಮಾರು ಎರಡು ಲಕ್ಷ ರೂಪಾಯಿಗಳ ಸಾಮಾನುಗಳು ಇದ್ದವು. ಆತ ಕಳ್ಳಭಟ್ಟಿ ಸಾರಾಯಿಯನ್ನು ತಯಾರು ಮಾಡಿ ಬಾಟಲ್‌ಗಳಲ್ಲಿ ತುಂಬಿಸಿ ಮಾರಾಟ ಮಾಡುತ್ತಿದ್ದುದು ಸ್ಪಷ್ಟವಾಗಿ ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಆದರೆ ಇದೇ ರೀತಿಯಲ್ಲಿ ಇನ್ನೂ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ನಡೆಯುತ್ತಿವೆ ಎನ್ನುವ ವಿಚಾರ ಮಾನ್ಯ ಮಂತ್ರಿಗಳ ಇಲಾಖೆಗೆ ಗೊತ್ತಿದೆ, ಆದರೂ ಸಹ ಅವರು ಸರಿಯಾಗಿ ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಇಡೀ ನಮ್ಮ ರಾಜ್ಯದ ಅರ್ಧ ಭಾಗಕ್ಕೆ ಬೇಕಾದರೆ ಕಳ್ಳಭಟ್ಟಿ ಸಾರಾಯಿಯನ್ನು ತಯಾರು ಮಾಡುತ್ತಾರೆ. ಪಾಪ ಈ ಬಡ ಜನತೆಗೆ ಆ ವಿಷದ ಸಾರಾಯಿಯನ್ನು ಕೊಟ್ಟು ಅವರ ಆರೋಗ್ಯವನ್ನು ವಿನಾಕಾರಣ ಹಾಳು ಮಾಡುತ್ತಿದ್ದಾರೆ. ನೀವು ಬೇಕಾದರೆ ಅವರಿಂದ ಇನ್ನು ಹೆಚ್ಚು ಹಣವನ್ನು ತೆಗೆದುಕೊಂಡು

ಬಡವರಿಗೆ ಒಳ್ಳೆಯ ಸಾರಾಯಿಯನ್ನು ಕೊಡಿ. ಆದರೆ ಇಂತಹ ವಿಷದ ಸಾರಾಯಿಯನ್ನು ಕೊಡಬೇಡಿ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್‌ರವರು ಮೊನ್ನೆ ದಿವಸ ಒಂದು ಖಾಸಗಿ ನಿರ್ಣಯವನ್ನು ತಂದಿದ್ದರು. ನಿಜವಾಗಿಯೂ ಸಹ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸಾರಾಯಿ ಕುಡಿಯುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಯಾರು ಕುಡಿಯುತ್ತಾರೋ ಅಂಥವರಿಗೆ ಒಳ್ಳೆಯ ಸಾರಾಯಿಯನ್ನು ಒದಗಿಸಿಕೊಡಿ. ನಮ್ಮ ಕೋಲಾರ ಜಿಲ್ಲೆಗೆ ಬನ್ನಿ ಸ್ವಾಮಿ, ಎಷ್ಟು ಕಡೆ ಇಂತಹ ಕಳ್ಳಭಟ್ಟಿ ಸಾರಾಯಿ ಕೇಂದ್ರಗಳು ಇವೆ ಎಂಬುದನ್ನು ತೋರಿಸುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ನಿಮ್ಮ ಕೈಯಲ್ಲಿ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಆಗಿಲ್ಲ. ನಿಮ್ಮ ಇಲಾಖೆಯ ಅಧಿಕಾರಿಗಳೂ ಸಹ ಇದರಲ್ಲಿ ಶಾಮೀಲಾಗಿ ಮಾಮೂಲಿಗಳನ್ನು ವಸೂಲು ಮಾಡುತ್ತಾರೆ. ಅವರು ಒಂದು ರೇಟ್ ಫಿಕ್ಸ್ ಮಾಡಿಕೊಂಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಒಬ್ಬ ಗಾರ್ಡ್‌ಗೆ ೧೦ ರೂಪಾಯಿಗಳು, ಒಬ್ಬ ಇನ್ಸ್‌ಪೆಕ್ಟರ್‌ಗೆ ೨೫ ರೂಪಾಯಿಗಳು ಅವರಿಗಿಂತ ಮೇಲ್ಪಟವರಿಗೆ ೧೦೦–೨೦೦ ರೂಪಾಯಿಗಳು ಹೀಗೆ ನಿಗದಿ ಮಾಡಿಕೊಂಡು ಮಾಮೂಲು ವಸೂಲು ಮಾಡುತ್ತಾರೆ.

ಶ್ರೀ ಎಂ. ರಾಮಪ್ಪ.—ಸ್ವಾಮಿ, ಒಬ್ಬ ಗಾರ್ಡ್‌ಗೆ ೧೦ ರೂಪಾಯಿಗಳು ಒಬ್ಬ ಇನ್‌ಪೆಕ್ಟರ್‌ಗೆ ೧೦೦ ರೂಪಾಯಿಗಳಂತೆ ಅವರು ಒಪ್ಪಿಕೊಳ್ಳುವುದಿಲ್ಲ.

೪–೩೦ ಪಿ. ಎಂ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ರಾಮಪ್ಪನವರು ಎಕ್ಸೈಸ್ ಕಂಟ್ರಾಕ್ಟರು, ಅವರಿಗೆ ಗೊತ್ತಿದೆ. ನನಗೆ ಗೊತ್ತಿಲ್ಲ. ಈ ಸಿಸ್ಟಂನ್ನು ರಿವೈಸ್ ಮಾಡಬೇಕು, ಅದನ್ನು ನಾನು ಒಪ್ಪುತ್ತೇನೆ. ಒಂದೇ ಒಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸಾರಾಯಿ ಕುಡಿಯುವರು, ಕುಡಿಯಲಿ. ನೀವು ಆರೋಗ್ಯಕರವಾದ ಸಾರಾಯಿ ಕೊಡಿ, ಆರೋಗ್ಯ ಕಾಪಾಡಿ, ಹಾಳು ಮಾಡಬೇಡಿ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಮುಕ್ತಾಯ ಮಾಡಿ,

ಶ್ರೀ ಆರ್. ವೆಂಕಟರಾಮಯ್ಯ.—ಇನ್ನು ಸಣ್ಣ ಉಳಿತಾಯದ ಬಗ್ಗೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾನು ಮಾನ್ಯ ವೀರಣ್ಣನವರನ್ನು ಒಪ್ಪುತ್ತೇನೆ. ಆದರೆ ಜೈಲಿನಲ್ಲಿ ಮೊದಲು ೪ ರೂಪಾಯಿ ಊಟ ಕೊಡುತ್ತಿದ್ದರು. ಈಗ ೩–೮೦ ಪೈಸೆಗೆ ಇಳಿಸಿದ್ದಾರೆ. ಏಕೆ ಈ ರೀತಿ ಅನ್ಯಾಯ ಮಾಡಿದ್ದಾರೆ. ದುರಾದೃಷ್ಟವಶಾತ್, ಸಾಯುವವರು ಸಾಯುತ್ತಾರೆ, ಆದರೆ ಇವರಿಗೆ ಏಕೆ ಅನ್ಯಾಯವಾಗಿದೆ. ಕೆಲವು ಜೈಲುಗಳನ್ನು ಅಪ್‌ಗ್ರೇಡ್ ಮಾಡಬೇಕಿತ್ತು ಇದುವರೆಗೂ ಅವನ್ನು ಮಾಡಿಲ್ಲ. ಯಾವುವೆಂದರೆ, ಕೋಲಾರ, ಹಾಸನ, ಚಿಕ್ಕಮಗಳೂರು, ಧಾರವಾಡ, ಮಂಡ್ಯ, ಚಿತ್ರದುರ್ಗ. ಇದು ಅನ್ಯಾಯ. ಇದನ್ನು ತಕ್ಷಣ ಯೋಚನೆ ಮಾಡಬೇಕು. ಇನ್ನು ಒಂದೇ ಒಂದು ಮಾತು ಹೇಳಿ ಮುಗಿಸುತ್ತೇನೆ. ಈ ಇಲಾಖೆಯ ಬೇಡಿಕೆಯ ಪುಸ್ತಕದ ಎರಡನೇ ಪೇಜಿನಲ್ಲಿ ೧೯೮೩–೮೪ರಲ್ಲಿ ೪–೯ ಪೈಸೆ ಖರ್ಚು ಮಾಡಿದೆ, ೧೯೮೪–೮೫ರಲ್ಲಿ ೪–೧೮ ಪೈಸೆ ಖರ್ಚು ಮಾಡಿದೆ, ಮಾನ್ಯ ವೀರಣ್ಣನವರು ಬಂದಮೇಲೆ ೩–೯೯ ಪೈಸೆಗೆ ನಿಲ್ಲಿಸಿದ್ದಾರೆ. ಇದು ತುಂಬಾ ಅನ್ಯಾಯ ಸ್ವಾಮಿ, ಇದನ್ನು ಸರಿಮಾಡಿ ಎಂದು ಹೇಳುತ್ತೇನೆ.

ಇನ್ನು ಲಾಟರಿ ಬಗ್ಗೆ ಹೇಳಿ ಮುಗಿಸುತ್ತೇನೆ. ಈ ಲಾಟರಿ ಕ್ಯಾನ್ಸರ್ ಹಬ್ಬಿದಹಾಗೆ ಆಗಿದೆ. ಇದರಿಂದ ೩೭೫ ಲಕ್ಷ ಸರ್ಕಾರಕ್ಕೆ ಬರುತ್ತದೆ, ಆದರೆ ಖರ್ಚಾಗುವುದು ೭೦೦ ಲಕ್ಷ ರೂಪಾಯಿ. ಇದು ಯಾರಿಗೂ ಉಪಯೋಗ ಇಲ್ಲ. ರೇಸಿಗೆ ಹೋಗಿ ಹಾಳಾದ ಹಾಗೆ, ಅನೇಕ ಬಡ ಸಂಸಾರಗಳು ಹಾಳಾಗುತ್ತಿವೆ. ಈ ೩೭೫ ಲಕ್ಷ ರೂಪಾಯಿ ಯಾವ ಲೆಕ್ಕ. ನಮ್ಮ ಮಾನ್ಯ ಜಿಗಜಿನಗಿಯವರು ಮನಸ್ಸು ಮಾಡಿ ನಾಲ್ಕು ಜನ ಸೂಪರಿಂಟೆಂಡೆಂಟ್ ಅವರಿಗೆ ಹೇಳಿದರೆ, ಇನ್ನೊಂದು ೫೦ ಕೋಟಿ ಜಾಸ್ತಿಯಾಗುತ್ತದೆ. ಅನ್ಯಾಯವಾಗಿ ಹೋಗುವುದನ್ನು ವಸೂಲ್ಮಾಡಿದರೆ ಲಾಭವಾಗುತ್ತದೆ. ಆದ್ದರಿಂದ ಈ ಲಾಟರಿಯನ್ನು ಅಬಾಲಿಷ್ ಮಾಡಬೇಕು. ಇನ್ನು ಎಕ್ಸೈಸ್‌ನಿಂದ ೨೫ ಕೋಟಿ ರೂಪಾಯಿ ಬಾಕಿ ಇದೆ. ಇದನ್ನು ಇಟ್ಟುಕೊಂಡು, ಕಂಟ್ರಾಕ್ಟರುಗಳು ಸಿನಿಮಾ ತೆಗೆಯುತ್ತಾರೆ, ಹೋಟೆಲ್ ತೆರೆಯುತ್ತಾರೆ. ಇದು ಆಗಬಾರದು. ಇಷ್ಟು ಹೇಳಿ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸ್ವಾಮಿರಾವ್ ಅವರೇ ತಾವು ಮಾತನಾಡಿ. ದಯಮಾಡಿ ೧೦ ನಿಮಿಷದಲ್ಲಿ ಮುಗಿಸಬೇಕು.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಅಧ್ಯಕ್ಷರೇ, ತಮ್ಮ ಆದೇಶವನ್ನು ನಾನು ಪಾಲಿಸಬೇಕಾಗುತ್ತದೆ. ಆದರೆ ಸತ್ಯವನ್ನೇ ಹೇಳಬೇಕಾಗುತ್ತದೆ, ಸುಳ್ಳನ್ನು ಹೇಳುವುದಕ್ಕೆ ಮನಸ್ಸು ಒಪ್ಪುವುದಿಲ್ಲ. ಅಧ್ಯಕ್ಷರೇ, ಈ ದಿನ ಇಟ್ಟಿರತಕ್ಕಂಥ ಪೋಲೀಸ್, ಅಬಕಾರಿ, ಜೈಲು ಮತ್ತು ಸಣ್ಣ ಉಳಿತಾಯ ಇಲಾಖೆಗಳ ಬೇಡಿಕೆಗಳನ್ನು ವಿರೋಧಿಸುತ್ತಾ, ಒಂದೆರಡು ಮಾತುಗಳನ್ನಾಡುತ್ತೇನೆ. ಮೊದಲನೆಯದಾಗಿ, ಬಹಳ ಪ್ರಾಮುಖ್ಯವಾದ, ಈ ರಾಜ್ಯದ ಜನತೆಗೆ ಬೇಕಾಗಿರುವಂಥ, ರಕ್ಷಣೆ ಕೊಡತಕ್ಕಂಥ ಇಲಾಖೆ, ನಮ್ಮ ಮಾನ್ಯ ರಾಚಯ್ಯನವರ ಪೋಲೀಸ್ ಇಲಾಖೆ. ನಮಗೆ ಮಾನ್ಯ ರಾಚಯ್ಯನವರ ಬಗ್ಗೆ ತುಂಬಾ ಗೌರವ ಇದೆ. ಅವರು ವಯಸ್ಸಾದವರು ನಮಗೆ ಹೊರಗಡೆ ಬಂದಾಗ ನೀತಿ ಕೂಡ ಹೇಳುತ್ತಾರೆ. ಪೋಲೀಸ್ ಇಲಾಖೆಯ ಅಧಿಕಾರಿಗಳು, ಅವರು ಹೇಳಿದರೂ ಕೇಳುವುದಿಲ್ಲ, ನಾವು ಹೇಳಿದರೂ ಕೇಳುವುದಿಲ್ಲ. ನಾವು ಒಬ್ಬರೇ ಹೇಳಿದರೆ ತೂಕ ಕಡಿಮೆ ಆಗಬಹುದು ಎಂದು, ನಾಲ್ಕೈದು ಜನ ಶಾಸಕರು ಸೇರಿ, ರುಜು ಹಾಕಿ ಕಳುಹಿಸಿದ್ದೂ ಉಂಟು. ಕೆಟ್ಟ ಅಧಿಕಾರಿ ಇದ್ದಾರೆ, ಬದಲಾಯಿಸಿ ಎಂದು ಹೇಳಿದ್ದೂ ಉಂಟು. ನಮ್ಮ ಮಾತಿಗೆ ಬೆಲೆ ಸಿಕ್ಕದೇ ಇದ್ದಾಗ ಏನು ಮಾಡಬೇಕು ? ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಒಬ್ಬರು ಸರ್ಕಲ್ ಇನ್‌ಸ್ಪೆಕ್ಟರ್ ಇದ್ದಾರೆ, ಅವರು ಹೆಸರು ಷರೀಫ್ ಎಂದು. ಅವರು ಮೂರು ವರ್ಷದಿಂದ ಇದ್ದಾರೆ. ಅವರ ಮೇಲೆ ಒಂದು ಸಾವಿರ ಆಪಾದನೆಗಳು ಇವೆ. ನಾನೂ ಬರೆದಿದ್ದೇನೆ, ನಮ್ಮ ಕೆ. ಹೆಚ್. ಶ್ರೀನಿವಾಸ್ ಅವರೂ ಬರೆದಿದ್ದಾರೆ. ಮತ್ತೆ ಆಗದಿರುವ ಶಾಸಕರೂ ಅವರನ್ನು ವರ್ಗ ಮಾಡಬೇಕೆಂದು ಬರೆದಿದ್ದಾರೆ. ಆದರೆ ಅವರ ಮೇಲೆ ಏನೂ ಕ್ರಮ ಆಗಿಲ್ಲ. ಡೆಪ್ಯೂಟಿ ಕಮೀಷನರ್ ಅವರೂ ಸಹ ನೀವು ಇಲ್ಲಿರುವುದು ಸರಿಯಲ್ಲ, ಶಾಂತಿ ಭಂಗವಾಗುತ್ತದೆ ಎಂದು ರಿಪೋರ್ಟ್ ಹಾಕಿದ್ದಾರೆ. ಸ್ಪೆಷಲ್ ಡಿ.ಸಿ ಯವರೂ ಕೂಡ ಬದಲಾವಣೆ ಮಾಡಬೇಕೆಂದು ರಿಪೋರ್ಟ್ ಹಾಕಿದ್ದಾರೆ. ಆದರೆ ಕ್ರಮ ಮಾತ್ರ ತೆಗೆದುಕೊಂಡಿಲ್ಲ. ಹಾಗೂ ಡಿ.ಐ.ಜಿ. ಅವರೂ ಕೂಡ ಅವರನ್ನು ಬದಲಾವಣೆ ಮಾಡಬೇಕೆಂದು ಹೇಳಿ, ಬರೆದಿದ್ದಾರೆ. ಅದರ ಮೇಲೂ ಕ್ರಮ ತೆಗೆದುಕೊಂಡಿಲ್ಲ. ಸಾರ್ವಜನಿಕರು ಪ್ರತಿಭಟನೆ, ಮೆರವಣಿಗೆ ಮಾಡಿದ್ದಾರೆ, ಅವರನ್ನು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ, ಆದರೂ ಮಾಡಿಲ್ಲ. ನಾನೂ ಕೂಡ ಅರ್ಜಿ ಬರೆದಿದ್ದೇನೆ. ನಾನು ಒಂದು ಸಾರಿ ಹೊಸನಗರ ಸರ್ಕ್ಯೂಟ್ ಹೌಸ್‌ನಲ್ಲಿದ್ದೆ. ಆಗ ಈತ ಅಲ್ಲಿಗೆ ಬಂದು ಒಂದನೇ ರೂಮು ಕೇಳಿದಾಗ, ಅಲ್ಲಿದ್ದ ವಾಚ್‌ಮನ್ ಆದ ಹುಡುಗ, ಒಂದನೇ ರೂಮನ್ನು ಎಂ.ಎಲ್.ಎ ಗೆ ಕೊಟ್ಟಿದೆ ಎಂದು ಹೇಳಿದ್ದಕ್ಕೆ, ಈ ಸರ್ಕಲ್ ಇನ್‌ಸ್ಪೆಕ್ಟರ್ ಷರೀಫ್, ಬೀಗ ಮುರಿದು, ಅಲ್ಲಿದ್ದ ಹುಡುಗನಿಗೆ ಹೊಡೆದು ಕಳುಹಿಸಿದ್ದಾರೆ. ನಾನು ಇದರ ಮೇಲೂ ರಿಪೋರ್ಟ್ ಮಾಡಿದ್ದೇನೆ. ಕ್ರಮ ತೆಗೆದುಕೊಂಡಿಲ್ಲ. ಹಲವಾರು ಆಪಾದನೆಗಳು ಇದ್ದರೂ, ಹಲವಾರು ಸಾರಿ ಮನವರಿಕೆ ಮಾಡಿ ಕೊಟ್ಟರೂ ಕೂಡ ಯಾವುದೇ ಒಂದು ಬದಲಾವಣೆ, ಶಿಕ್ಷೆಯ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ನಾವು ಯಾರ ಹತ್ತಿರ ಹೇಳಬೇಕು ಎಂಬುದೇ ನಮ್ಮ ಆತಂಕ. ಅಲ್ಲಿ ಕೆಲಸ ಮಾಡತಕ್ಕಂಥ ಸಬ್-ಇನ್‌ಸ್ಪೆಕ್ಟರ್, ಪೋಲೀಸಿನವರೂ ಕೂಡ ಅಷ್ಟೇ ಹಿಂಸೆಗೆ ಒಳಗಾಗಿದ್ದಾರೆ. ಕಳ್ಳ ಮಾಲನ್ನು ಸಲೀಸಾಗಿ ಬಿಡುತ್ತಿದ್ದಾರೆ. ಗೇಟ್‌ನಲ್ಲಿ ಅವರೇ ವಸೂಲ್ಮಾಡಿಕೊಂಡು ಬರುತ್ತಾರೆ. ಈ ವಿಚಾರವನ್ನು ತಮಗೂ ತಿಳಿಸಿದ್ದೇನೆ. ಜಿಲ್ಲಾಧಿಕಾರಿಗಳಿಗೂ ಗೊತ್ತಿದೆ. ೨-೩ ಜನ ಜಿಲ್ಲಾಧಿಕಾರಿಗಳೂ ರಿಪೋರ್ಟ್ ಹಾಕಿದ್ದಾರೆ ಏನು ಮಾಡಿದ್ದಾರೆ ? ನಮ್ಮ ತಾಲ್ಲೂಕಿನಲ್ಲಿ ರಿಬ್ಬನ್‌ಪೇಟೆ ಪೋಲೀಸ್ ಸ್ಟೇಷನ್ ಇದೆ. ಅಲ್ಲಿ ಪ್ರಮೋಷನ್ ಆಗಿರತಕ್ಕಂಥ ಸಬ್-ಇನ್‌ಸ್ಪೆಕ್ಟರ್ ಇದ್ದಾರೆ. ಅವರೇ ಸರ್ವಾಧಿಕಾರಿಯಾಗಿ ವರ್ತಿಸುತ್ತಾರೆ. ಗೌಟೂರು ಎಂಬ ಒಂದು ಹಳ್ಳಿ ಇದೆ. ಅಲ್ಲಿಂದ ರಿಬ್ಬನ್‌ಪೇಟೆ ಪೋಲೀಸ್ ಸ್ಟೇಷನ್‌ಗೆ ಹೋಗುವುದು, ಬರುವುದು ಮಾಡುತ್ತಾರೆ. ಅವರು ಪೋಲೀಸ್ ಕ್ವಾರ್ಟರ್ಸ್‌ನಲ್ಲಿ ಇರುವುದಿಲ್ಲ. ಅಲ್ಲಿ ನಾಲ್ಕು ಕೊಲೆಗಳು ಆಗಿದ್ದು, ಇವರೇ ಕೊಲೆ ಮಾಡಿದರು ಎಂದು ಹೇಳಿದರೂ ಅವರನ್ನು ಹಿಡಿಯಲಿಲ್ಲ. ಬಹಳ ಜನ ಹೇಳಿದರು, ಆದರೂ ಹಿಡಿಯಲಿಲ್ಲ. ತೀರ್ಥಹಳ್ಳಿ ತಾಲ್ಲೂಕಿನ, ಎಡೆಯೂರು ಎಂಬಲ್ಲಿ, ೧೨ ಗಂಟೆ ಹೊತ್ತಿನಲ್ಲಿ, ೨೫ ವರ್ಷದ ಯುವಕ ಚಂದ್ರಶೇಖರ್ ಎಂಬುವರಿಗೆ, ದೊಣ್ಣೆಯಿಂದ ಹೊಡೆದು ಕೈಲಿರತಕ್ಕಂಥ ದುಡ್ಡನ್ನು ದೋಚಿಕೊಂಡು ಹೋದರೂ, ಇವತ್ತಿನವರೆಗೂ ಪತ್ತೆ ಹಚ್ಚುವುದಕ್ಕಾಗಿಲ್ಲ. ಗುಂಡಾಗಳು ಒಬ್ಬ ಬಡವನ ಮನೆಯನ್ನು ಕಿತ್ತು ಲಾರಿಯಲ್ಲಿ ಹೇರಿಕೊಂಡು ಹೋದರೂ, ಇವತ್ತಿನವರೆಗೂ ಹಿಡಿಯಲಿಲ್ಲ. ಲಾರಿ ನಂಬರು ಎಲ್ಲಾ ಕೊಟ್ಟಿದ್ದೇನೆ, ಲಾರಿ ಚಾಲಕನ ಹೆಸರು ಕೊಟ್ಟಿದ್ದೇನೆ.

ಯಾರು ಹಿಡಿಯಬೇಕು. ಯಾರು ಕ್ರಮ ತೆಗೆದುಕೊಳ್ಳಬೇಕು, ನನಗೆ ಆಶ್ಚರ್ಯವಾಗುತ್ತದೆ. ಬೇಳೂರು ಎಂಬ ಗ್ರಾಮದಲ್ಲಿ ಒಂದು ಕೊಲೆಯಾಯಿತು. ಅಲ್ಲಿಯ ಜನ ಇದನ್ನು ಮರೆಯುವ ಹೊತ್ತಿಗೆ, ೩-೪ ದಿವಸಗಳ ಹಿಂದೆ ಒಂದು ನಡೆದಿದೆ. ಗದ್ದೆಯಲ್ಲಿ ಕೆಲಸ ಮಾಡತಕ್ಕಂಥ ಒಬ್ಬ ರೈತನಿಗೆ, ರೇಂಜ್ ಆಫೀಸರ್ ಬಂದೂಕಿನಿಂದ ಹೊಡೆದಿದ್ದಾರೆ. ಆತನ ಕಣ್ಣು ಹೋಗಿದೆ, ಬೆಂಗಳೂರಿನ ಮಿಂಟೋ ಕಣ್ಣಾಸ್ಪತ್ರೆಗೆ ಸೇರಿಸಿದ್ದಾರೆ. ನಾನೇ ದಿನವೂ ನೋಡಿಕೊಂಡು ಬರುತ್ತಿದ್ದೇನೆ. ಆತ ಸಾಯುವ ಸ್ಥಿತಿಯಲ್ಲಿ ಇಲ್ಲ, ಕಣ್ಣು ರೆಪ್ಪೆ ತೆಗೆಯಬೇಕಾಗುತ್ತದೆಂದು ತಿಳಿಸಿದ್ದಾರೆ. ಈಗ, ಆತ ಹೊಡೆಯುವುದಕ್ಕೆ ಬರುತ್ತಿದ್ದ, ಹಾಗೆ, ಹೀಗೆ ಎಂದು ಹೇಳಿಕೆ ತಯಾರು ಮಾಡಿ, ಕತೆ ಕಟ್ಟುವಂಥ ಕೆಲಸ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಹೀಗೆ ಇಲಾಖೆ ಮಾಡಬೇಕಾದ ಕೆಲಸವನ್ನು ಬಿಟ್ಟು, ಬೇರೆ ಕೆಲಸ ಮಾಡಿದರೆ ಒಳ್ಳೆಯ ಹೆಸರು ಬರುವುದಿಲ್ಲ, ಜನರಿಗೆ ರಕ್ಷಣೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಇದರ ಜೊತೆಯಲ್ಲೇ ಈ ಇಲಾಖೆಯ ಜೊತೆಗೆ ಯಾವ ಪಕ್ಷ ಅಧಿಕಾರದಲ್ಲಿ ಇರುತ್ತದೋ ಆ ಪಕ್ಷ ಅವರಿಗೇ ನೇರವಾಗಿ ಡೈರಕ್ಷನ್ ಕೊಟ್ಟು ಹಾಗೆ ಮಾಡಿ ಹೀಗೆ ಮಾಡಿ ಎಂದು ಹೇಳುತ್ತಾರೆ. ಕೊಲೆ ಕೇಸನ್ನು ಅವರು ಬೇಕಾದರೆ ಹಿಡಿಯಬಹುದು ಅಥವಾ ಬಿಡಬಹುದು. ಇಲ್ಲವೇ ಅವರನ್ನು ಸುಮ್ಮನೆ ಒಳಗಡೆ ತೆಗೆದುಕೊಂಡು ಹೋಗಿ ಎಂದು ಹೇಳಬಹುದು, ಮಾನ್ಯ ರಾಚಯ್ಯನವರು ಸೂಚನೆ ಕೊಟ್ಟಿದ್ದಾರೆಂದು ಆ ಪಕ್ಷದ ಮುಖಂಡರು ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ನಾನು ಕಳೆದ ವರ್ಷ ಈ ವಿಧಾನಸಭೆಯಲ್ಲಿ ಹೇಳಿದೆ. ೩ ಜನ ರೈತರ ಮನೆಯನ್ನು ಬೆಂಕಿ ಹಾಕಿ ಸುಟ್ಟರು. ಯಾರು ಈ ಗೇಣಿದಾರರ ಮನೆಯನ್ನು ಸುಟ್ಟರು ಅವರನ್ನು ಅರೆಸ್ಟ್ ಮಾಡಲಿಕ್ಕೆ ಸಬ್-ಇನ್‌ಸ್ಪೆಕ್ಟರ್ ಹಿಡಿಯುವುದಕ್ಕೆ ಹೋದರು ಆಗ ಅಲ್ಲಿ ಇರತಕ್ಕಂಥಾ ಮುಖಂಡರು ಹೇಳಿದರು, ಅವರ ಮೈ ಮುಟ್ಟಿದರೆ ನಿಮ್ಮನ್ನು ಟ್ರಾನ್ಸ್‌ಫರ್ ಮಾಡಿಸುತ್ತೇವೆ ಎಂದು ಹೆದರಿಸಿ, ಬೆದರಿಸಿದರು. ಅವರು ಅವರ ಮೇಲೆ ಯಾವ ಕಾರ್ಯಕ್ರಮವನ್ನೂ ಸಹ ತೆಗೆದುಕೊಳ್ಳಲಿಕ್ಕೆ ಬಿಡಲಿಲ್ಲ. ಅವರನ್ನು ಅರೆಸ್ಟ್ ಸಹ ಮಾಡಲಿಲ್ಲ. ಹೀಗಾಗಿ ಈ ಇಲಾಖೆಯನ್ನು ನೇರವಾಗಿ ಆಪಾದನೆ ಮಾಡುವುದರ ಜೊತೆಗೆ ಅಧಿಕಾರದಲ್ಲಿರತಕ್ಕಂಥ ಪಕ್ಷದ ಮುಖಂಡರ ಆಯಾಯ ಪಕ್ಷದ ಅಧ್ಯಕ್ಷರು ಅವರ ಹತೋಟಿಯಲ್ಲಿಟ್ಟು ಕೊಂಡು ಅವರನ್ನು ಹೆದರಿಸಿ ಬೆದರಿಸಿ ನಾವು ರಾಚಯ್ಯನವರ ಹತ್ತಿರ ಹೋಗುತ್ತೇವೆ, ಮುಖ್ಯಮಂತ್ರಿಗಳ ಹತ್ತಿರ ಹೋಗುತ್ತೇವೆ ಅಂತ ಹೇಳುವುದರಿಂದ ಈ ಪೋಲೀಸಿನವರು ನಿಷ್ಕ್ರಿಯರಾಗಿದ್ದಾರೆ. ಹೀಗಾದರೆ ಅಧಿಕಾರಿಗಳು ಏನು ಮಾಡಬಹುದು. ಹೀಗಾಗಿ ಅನೇಕ ಕೇಸುಗಳನ್ನು ಹಿಡಿದಿಲ್ಲ. ಒಂದು ಉದಾಹರಣೆ ಹೇಳುವುದಾದರೆ, ತೀರ್ಥಹಳ್ಳಿಯಲ್ಲಿ ಒಬ್ಬ ಗೇಣಿದಾರರ ಮನೆಯನ್ನು ಬೆಂಕಿ ಹಾಕಿ ಸುಟ್ಟರು. ಅದರ ಬಗ್ಗೆ ಇದುವರೆಗೂ ಪತ್ತೆಯಾಗಲಿಲ್ಲ. ಇನ್ನು ನಾನು ಇದರ ಬಗ್ಗೆ ಹೆಚ್ಚು ಹೇಳುವುದಿಲ್ಲ.

ಇನ್ನು ಅಬ್ಕಾರಿ ಇಲಾಖೆ ಏನು ಇದೆ ಅದರ ಬಗ್ಗೆ ಮಾತನಾಡುತ್ತೇನೆ. ಮೊನ್ನೆ ದಿವಸ ಈ ಅಬ್ಕಾರಿ ಇಲಾಖೆ ಬಗ್ಗೆ ಬಂದಿರತಕ್ಕಂಥಾ ಜಡ್ಜ್‌ಮೆಂಟ್ ಏನಿದೆ ಇದು ಒಂದು ಮಾಸ್ಟರ್‌ಪೀಸ್ ಆಗಿದೆ, ಇದು ಒಂದು ಅತ್ಯುತ್ತಮ ತೀರ್ಪು ಎಂದು ನಾನು ಹೇಳುತ್ತೇನೆ. ಈ ದೇಶದಲ್ಲಿ ಈ ಬಗ್ಗೆ ಅತ್ಯುತ್ತಮವಾದಂಥಾ ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಈ ಅಬ್ಕಾರಿ ಇಲಾಖೆಗೆ ಶಹಭಾಸ್‌ಗಿರಿ ಕೊಟ್ಟಿದೆ. ಇದರ ಬಗ್ಗೆ ಎಷ್ಟು ಹೇಳಿದರೂ ಕೂಡ ಅದು ಬಹಳ ಕಡಿಮೆ ಹೇಳಿದ ಹಾಗೆ ಕಾಣುತ್ತದೆ.

ಅಧ್ಯಕ್ಷರು.—ತಾವು ವಿಷಯವನ್ನು ನೇರವಾಗಿ ಹೇಳಿ. ವ್ಯಂಗವಾಗಿ ಮಾತನಾಡುತ್ತೀರಲ್ಲಾ ?

ಶ್ರೀ ಬಿ. ಸ್ವಾಮಿರಾವ್.—ಹೆಂಡವನ್ನು ತಯಾರು ಮಾಡುವಾಗ ಸರಿಯಾಗಿ ತಯಾರು ಮಾಡದೇ ಕೃತಕ ಹೆಂಡವನ್ನು ತಯಾರು ಮಾಡಿ ಜನರನ್ನು ಸಾಯಿಸುತ್ತಿದ್ದಾರೆ. ಒಂದು ರೂಪಾಯಿಗೆ ಸಿಕ್ಕುವ ಹೆಂಡವನ್ನು ೨ ರೂಪಾಯಿಗೆ ಮಾರಾಟ ಮಾಡಿ ಆ ಬಡವರ ಮೇಲೆ ಹೊರೆ ಹಾಕಿ, ಅವರಿಗೆ ಅನ್ಯಾಯ ಮಾಡಿದ್ದಾರೆ. ಇದರಿಂದ ಏನು ಉಪಯೋಗ? ಬಳಕೆದಾರರಿಗೆ ದೊಡ್ಡ ಲುಕ್ಸಾನು ಆಗಿದೆ, ಆದ್ದರಿಂದ ಅದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ವೀರಣ್ಣನವರು ಈ ಸಣ್ಣ ಉಳಿತಾಯದಲ್ಲಿ ಏನು ಕೆಲಸ ಮಾಡುತ್ತಿದ್ದಾರೋ ಅದನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅವರು ಈ ಸಣ್ಣ ಉಳಿತಾಯದ ಲೆಕ್ಕಕ್ಕೆ ತೋರಿಸುವುದಕ್ಕೆ ಸರ್ಕಾರದ ಖಜಾನೆಯಲ್ಲಿರುವ ದುಡ್ಡನ್ನೂ ಸೇರಿಸಿ ಲೆಕ್ಕ ಕೊಟ್ಟಿದ್ದರೆ. ಇದರಿಂದ ನಮಗೆ ಅನುಮಾನ ಬರುತ್ತದೆ. ಎನ್‌ಎಸ್‌ಸಿ ಸರ್ಟಿಫಿಕೇಟ್ ನಮ್ಮನ್ನೂ ಜೊತೆಗೆ ಸೇರಿಸಿದ್ದಾರೆ. ಅದರ ಲೆಕ್ಕವೇನೋ ಇದೆ. ಅದಕ್ಕೆ ನಾವೂ ಸಹ ಒಪ್ಪಿಗೆ ಕೊಟ್ಟಿದ್ದೇವೆ. ಅದೇ ದುಡ್ಡನ್ನು

ಬ್ಯಾಂಕ್‌ನಲ್ಲಿ ಇಟ್ಟಿದ್ದರೆ ತಿಂಗಳಿಗೆ ಏನು ಬಡ್ಡಿ ಬರುತ್ತಿತ್ತು, ಅದನ್ನು ಇವರು ಈಗ ಕಸಿದು ಕೊಂಡಿದ್ದಾರೆ. ನಮಗೆ ಬರತಕ್ಕಂಥಾ ಆದಾಯವನ್ನು ಇದಕ್ಕೆ ಕೊಡುವ ಹಾಗೆ ಮಾಡಿದ್ದಾರೆ. ಇನ್ನು ನಾನು ಇದರ ಬಗ್ಗೆ ಹೆಚ್ಚು ಹೇಳುವುದಿಲ್ಲ.

ಕೊನೆಯದಾಗಿ ಈ ಪೋಲೀಸ್ ದೌರ್ಬಲ್ಯಗಳ ಬಗ್ಗೆ, ಅದರ ಲೋಪದೋಷಗಳ ಬಗ್ಗೆ ಈಗಲಾದರೂ ಕೂಡ ಶ್ರೀಮಾನ್ ರಾಚಯ್ಯನವರು ಗಮನಹರಿಸಿ ಸರಿಮಾಡಬೇಕು. ಮತ್ತು ಈ ಅಬ್ಕಾರಿಯಲ್ಲಿ ಸರಿಯಾದ ಹೆಂಡವನ್ನು ತಯಾರು ಮಾಡಬೇಕು. ಕೃತಕ ಹೆಂಡವನ್ನು ತಯಾರು ಮಾಡಿ ಜನರ ಆರೋಗ್ಯವನ್ನು ಕೆಡಿಸಿ ಅವರನ್ನು ಹಾಳು ಮಾಡುವ ಹಾಗೆ ಮಾಡಬಾರದು ಹಾಗೆ ಮಾಡಿದರೆ ನಮ್ಮ ರಾಜ್ಯ ಬಹಳ ದುರ್ಬಲ ಸ್ಥಿತಿಗೆ ಬರುತ್ತದೆ ಎಂದು ಹೇಳಿ, ನಾನು ಮತ್ತೊಮ್ಮೆ ಈ ಬೇಡಿಕೆಯನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈವೊತ್ತೇ ರಿಪ್ಲೈ ಆಗುತ್ತದೆಯೇ ?

ಅಧ್ಯಕ್ಷರು.—ಈವೊತ್ತೇ ರಿಪ್ಲೈ ಆಗುತ್ತದೆ. ೩ ಜನ ಮಂತ್ರಿಗಳೂ ಕೂಡ ಅರ್ಧರ್ಧ ಗಂಟೆ ಮಾತನಾಡಿ ಬೇಗನೆ ಮುಗಿಸುತ್ತಾರೆ.

† ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸ ಈ ಸಭೆಯ ಮುಂದೆ ತಂದಿರತಕ್ಕಂಥ ಆರಕ್ಷಕ ಮತ್ತು ಅಗ್ನಿಶಾಮಕ ಸೇವೆಗಳು, ರಾಜ್ಯದ ಅಬಕಾರಿ, ಸಣ್ಣ ಉಳಿತಾಯಗಳು ಹಾಗೂ ಬಂದೀಖಾನೆ ಇತ್ಯಾದಿಗಳ ವಿಷಯವಾಗಿ ಏನು ಬೇಡಿಕೆಗಳನ್ನು ತಂದಿದ್ದಾರೋ ಅದನ್ನೆಲ್ಲಾ ನಾನು ಸ್ವಾಗತಿಸುತ್ತಾ, ಈ ಸಂದರ್ಭದಲ್ಲಿ ನಾನು ಎರಡು ಮಾತುಗಳನ್ನಾಡಲು ಇಷ್ಟಪಡುತ್ತೇನೆ. ಈಗಾಗಲೇ ಈ ಸದನದ ವಿರೋಧ ಪಕ್ಷದ ಕಡೆಯಿಂದ ಮತ್ತು ನಮ್ಮ ಕಡೆಯಿಂದ ಈ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಅವರ ಮಾತಿಗೂ ನನ್ನ ಮಾತಿಗೂ ಮುಖ್ಯವಾದ ವ್ಯತ್ಯಾಸ ಏನೆಂದರೆ, ಅವರು ವಿಚಾರವನ್ನು ತಿಳಿದುಕೊಂಡಿದ್ದಾರೆ, ವಿಚಾರವನ್ನು ಮಥನ ಮಾಡಿದ್ದಾರೆ. ನಾನಾದರೂ ಕೂಡ ಈ ಇಲಾಖೆಯಲ್ಲಿ ೪ ವರ್ಷ ಸೇವೆಯನ್ನು ಸಲ್ಲಿಸಿ, ಅನುಭವವನ್ನು ಪಡೆದು ಅದರ ಅನುಭವ ಮತ್ತು ವಿಚಾರಗಳನ್ನು ಮಿಶ್ರಣ ಮಾಡಿ ಕೆಲವು ವಿಚಾರಗಳನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸ ಈ ಸದನದಲ್ಲಿಯಾಗಲಿ ಅಥವಾ ಹೊರಗಡೆಯಲ್ಲಾಗಲಿ ಬಹಳ ಒಂದು ಕೆಟ್ಟ ಸಂಪ್ರದಾಯದಲ್ಲಿ ತೇಜೋವಧೆಗೆ ಸಿಕ್ಕತಕ್ಕಂಥಾ ವಸ್ತು ಪೋಲೀಸು ಎಂದು ಹೇಳಿದರೆ ತಪ್ಪಾಗಲಾರದು. ನಿಜವಾಗಿಯೂ ಪೋಲೀಸಿನವರು ರಾಷ್ಟ್ರದ, ರಾಜ್ಯದ ಜನತೆಯ ರಕ್ಷಣೆ ಮಾಡಬೇಕು. ಅದರ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡಬೇಕು. ನಾವೆಲ್ಲರೂ ಕೂಡ ಅವರ ಕಷ್ಟಸುಖಗಳನ್ನೂ ಸಹ ಅರಿತುಕೊಳ್ಳಬೇಕು. ಪೋಲೀಸರ ಮುಖವನ್ನು ನೋಡಿದರೆ ಆ ಪೋಲೀಸಿನವರು ಪಡುವಂಥಾ ಕಷ್ಟಸುಖಗಳು ಗೊತ್ತಾಗುತ್ತದೆ. ಅವರೇನೂ ಮನುಷ್ಯರಲ್ಲವೇ? ಅವರೇನೂ ದೇವಲೋಕದಿಂದ ಬಂದವರಲ್ಲ, ಅವರೇನೂ ರಾಕ್ಷಸರಲ್ಲ, ಅವರೂ ಕೂಡ ನಮ್ಮ ಹಾಗೆ ಮನುಷ್ಯರೇ. ಅವರ ಕಷ್ಟಸುಖಗಳು ಹೇಗಿದೆ ಇದೆ ಎನ್ನುವುದರ ಬಗ್ಗೆ ಮಾತನಾಡುವುದಕ್ಕೆ ಯಾವ ಸದಸ್ಯರೂ ಹೋಗಲಿಲ್ಲ. ನಾನಾದರೂ ಕೂಡ ಹೇಳುವುದು ಇಷ್ಟೇ. ಕಾಕಿ ಎನ್ನುವುದು ಶೌರ್ಯದ ಒಂದು ಸಂಕೇತ. ಆ ಶೌರ್ಯದ ಸಂಕೇತದ ಹಿಂದೆ ಕಾಕಿ ಬಟ್ಟೆ ಇದೆ. ಆದರೆ ಅದರ ಹಿಂದೆ ಅವರ ಹೃದಯದಲ್ಲಿ ಎಷ್ಟು ನೋವು ಇದೆ ಎಷ್ಟು ಕಷ್ಟ ಇದೆ ಅದನ್ನು ಅವರು ಅರ್ಥಮಾಡಿಕೊಂಡಿಲ್ಲ. ನಾವು ಮಾನವೀಯತೆ ದೃಷ್ಟಿಯಿಂದ ನೋಡಿದಾಗ ಪೋಲೀಸಿನವರಿಗೆ ಸ್ಕಾಟ್ಲೆಂಡ್‌ನಲ್ಲಿ ಕೊಡತಕ್ಕಂಥಾ ಸೌಲಭ್ಯಗಳನ್ನು ಇಲ್ಲಿ ಕೊಟ್ಟಿಲ್ಲ. ಇಲ್ಲಿ ಅವರಿಗೆ ಅಲ್ಲಿಯ ಹಾಗೆ ಯಾವ ಸೌಲಭ್ಯಗಳನ್ನೂ ಕೊಟ್ಟಿಲ್ಲ. ಇಲ್ಲಿ ಅವರ ಕೆಲಸಕ್ಕೆ ಅನೇಕ ಗಂಡಾಂತರ ಇದೆ, ಅನೇಕ ಅಡಚಣೆಗಳು ಇವೆ. ಈ ಮಧ್ಯದಲ್ಲಿ ಪೋಲೀಸ್ ಅಧಿಕಾರಿಗಳು ಅವರ ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಇದು ಬಹಳ ಕಷ್ಟ. ಯಾವುದೇ ಕ್ಷೇತ್ರಕ್ಕೆ ಹೋದರೂ, ರಾಜಕೀಯ ಕ್ಷೇತ್ರಕ್ಕೆ ಹೋದರೂ ಯಾವ ಅಧಿಕಾರೀ ಕ್ಷೇತ್ರದಲ್ಲಾದರೂ ಕೂಡ, ಎಲ್ಲಿ ಹೋದರೂ ಕೂಡ ಅವರು ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಈವೊತ್ತು ಒಬ್ಬ ಪೋಲೀಸ್ ಅಧಿಕಾರಿ ಹೆಚ್ಚು ಸ್ಟ್ರಿಕ್ಟ್ ಆಗಿದ್ದರೆ ಅವನನ್ನು ಎತ್ತಂಗಡಿ ಮಾಡುತ್ತಾರೆ. ಒಂದುವೇಳೆ ಅವನು ಸ್ಟ್ರಿಕ್ಟ್ ಆಗಿಲ್ಲದೇ ಹೋಗಿದ್ದರೆ ಅವನನ್ನು ಅದಕ್ಷತೆ ಎಂದು ಹೇಳುತ್ತಾರೆ. ಕೆಲವೊಂದು ವಿಚಾರದಲ್ಲಿ ಜನರ ಕಡೆ ವಿದ್ಯಾವಂತರು ಶಾಮೀಲು ಆಗುತ್ತಾರೆ. ಇದರಿಂದ ಅವರು ವಿದ್ಯಾವಂತರನ್ನೂ ಹಿಡಿಯುವುದಕ್ಕಾಗುವುದಿಲ್ಲ, ಬಲಿಷ್ಠರನ್ನೂ ಹಿಡಿಯುವುದಕ್ಕಾಗುವುದಿಲ್ಲ, ಕೆಲವೊಂದು ಸಂದರ್ಭದಲ್ಲಿ ಇಂಡಿವಿಜುಯಲ್ ಆಗಿರತಕ್ಕಂಥಾ ವ್ಯಕ್ತಿಗಳನ್ನೂ ಹಿಡಿಯುವುದಕ್ಕಾಗುವುದಿಲ್ಲ.

ಈ ಕಡೆ ರೌಡಿಗಳನ್ನೂ ಹಿಡಿಯುವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲದೆ, ಹಣವಂತರನ್ನೂ ಹಿಡಿಯುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಹಣವಂತರನ್ನು ಹಿಡಿದರೆ ಅನ್ಯಾಯವನ್ನು ನ್ಯಾಯ ಮಾಡಿಕೊಳ್ಳುತ್ತಾರೆ, ತಮಗೆ ಬೇಕಾದ ಹಾಗೆ ನ್ಯಾಯವನ್ನು ದೊರಕಿಸಿಕೊಳ್ಳುತ್ತಾರೆ. ವಿದ್ಯಾವಂತರನ್ನು ಹಿಡಿದರೆ ಕೋರ್ಟು ಕಛೇರಿಗಳಿಗೆ ಹೋಗಿ ತಪ್ಪನ್ನು ಸಮರ್ಥಿಸಿಕೊಳ್ಳುತ್ತಾರೆ. ರೌಡಿಗಳ ಹತ್ತಿರ ಹೋದರೆ ಅವರು ಚಾಕು ಚೂರಿ ತೋರಿಸಿ ಪೋಲೀಸರನ್ನು ವಧೆ ಮಾಡುತ್ತೇವೆಂದು ಹೆದರಿಸಿ ಬೆದರಿಸಿಕೊಳ್ಳುತ್ತಾರೆ. ಪೋಲೀಸಿನವರು ಈ ಮಧ್ಯದಲ್ಲಿ ತಮ್ಮ ಕೆಲಸವನ್ನು ನಿರ್ವಹಿಸಬೇಕಾಗಿದೆ. ಇಷ್ಟೇ ಅಲ್ಲದೆ ಅವರಮೇಲೆ ಇಲ್ಲದಸಲ್ಲದ ಆರೋಪಗಳನ್ನು ಮಾಡಿ ನಿರಪರಾಧಿಯನ್ನು ಅಪರಾಧಿಯನ್ನಾಗಿ ಮಾಡಿ ಆ ಸ್ಥಾನದಲ್ಲಿ ನಿಲ್ಲಿಸುತ್ತಾರೆ. ಕೆಲವರು ತಿಂಗಳಿಗೆ ಇಷ್ಟು ಕೇಸ್‌ಗಳನ್ನು ತೆಗೆದುಕೊಂಡು ಬಂದಿದ್ದೇವೆಂದು ಹೇಳಿ ಶಹಭಾಸ್‌ಗಿರಿಯನ್ನೂ ಬಹುಮಾನವನ್ನೂ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇನ್ನೊಂದು ವಿಷಯ ಏನೆಂದರೆ, ೧೯೪೭ನೇ ಇಸವಿಯಲ್ಲಿ ನಮಗೆ ಸ್ವಾತಂತ್ರ್ಯ ಬಂದಿದ್ದರೂ ಕೂಡ ಬ್ರಿಟಿಷರ ಕಾಲದಲ್ಲಿ ಏನು ಒಂದು ಕಾನೂನು ನಿಯಮಗಳು ಇತ್ತು, ಆ ಹಳೇ ಜಾಡಿನಲ್ಲೇ ಇನ್ನೂ ನಡೆದುಕೊಂಡು ಬರುತ್ತಾ ಇದೆ. ಅದೇ ಸೆಕ್ಷನ್, ಅದೇ ಕಾನೂನು, ಅದು ಒಳ್ಳೆಯದೇ ಇರಲಿ, ಅದು ಕೆಟ್ಟದ್ದೇ ಇರಲಿ, ಅದು ಸಮಾಜಕ್ಕೆ ಕೆಟ್ಟದ್ದೋ, ಒಳ್ಳೆದೋ ಅದೇ ಇದೆ. ಹಿಂದಿನ ಐ.ಪಿ.ಸಿ, ಹಿಂದಿನ ಸಿ.ಆರ್.ಪಿ. ಅದೇ ಇದೆ. ಈ ಒಂದು ಹಳೇ ಜಾಡ್ಯದಲ್ಲಿ ಪೋಲೀಸಿನವರು ಕೆಲಸ ಮಾಡಬೇಕಾಗಿದೆ. ಈ ವಿಷಯವನ್ನು ಲಘುವಾಗಿ ಹೇಳಿದರು ಅಂತ ತಿಳಿದುಕೊಳ್ಳಬೇಡಿ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಂಗಾರಪ್ಪನವರು ಈ ಬಗ್ಗೆ ಒಂದು ಮಾತನ್ನು ಹೇಳಿದರು, ಅದನ್ನು ಕೇಳಿ ನನಗೆ ವ್ಯಸನವಾಯಿತು. ಅವರು ಹೇಳುವಂಥಾ ಸಂದರ್ಭದಲ್ಲಿ ಏನು ಹೇಳಿದರು ಎಂದರೆ ಕರ್ನಾಟಕದಲ್ಲಿ ಪೋಲೀಸ್ ಸಮಾಧಿಯಾಗಿದೆ ಎಂದು ಹೇಳಿದರು. ನಾನು ಹೇಳುತ್ತೇನೆ, ಆ ರೀತಿ ಏನಾದರೂ ಸಮಾಧಿಯಾಗಿದ್ದರೆ ನಾವೂ ನೀವೂ ಬದುಕುತ್ತಿದ್ದೆವೇ? ಪೋಲೀಸಿನವರು ನಿಷ್ಕ್ರಿಯರಾಗಿದ್ದಾರೆ ಎಂದು ಹೇಳುತ್ತೀರಿ. ಅವರು ಅಧಿಕಾರವನ್ನು ಚಲಾಯಿಸಿದರೆ ನಾವೂ ನೀವೂ ಒಂದು ಗಂಟೆಯಾಗಲಿ, ಅರ್ಧ ಗಂಟೆಯಾಗಲಿ ಇರುತ್ತಿರಲಿಲ್ಲ. ಪೋಲೀಸಿನವರು ತಮ್ಮ ಅಧಿಕಾರವನ್ನು ಚಲಾಯಿಸಿದ್ದರೆ ನಾವೂ ನೀವೂ ಯಾರೂ ಈ ಸದನದಲ್ಲಿ ಇರುವುದಕ್ಕಾಗುವುದಿಲ್ಲ. ಅವರು ಅಧಿಕಾರವನ್ನು ಚಲಾಯಿಸಿದ್ದರೆ ನಮಗೆ ರಕ್ಷಣೆಯೂ ಸಿಗುವುದಿಲ್ಲ, ಅಲ್ಲದೆ ಜನರ ಆಸ್ತಿಪಾಸ್ತಿಗೂ ರಕ್ಷಣೆ ಸಿಗುವುದಿಲ್ಲ. ರಾಮಪ್ಪನವರಂಥಾ ಬಲಶಾಲಿಗಳು ಬಂಗಾರಪ್ಪನವರಂಥಾವರನ್ನು ಹಿಡಿದು ಅವರ ಚೈನನ್ನೂ, ವಾಚನ್ನೂ ಕಸಿದುಕೊಂಡು ಹೋಗುವ ಪರಿಸ್ಥಿತಿ ಬರುತ್ತಿತ್ತು. ಸರ್ಕಾರ ಇದೆ ಎಂದು ಗೊತ್ತಾಗಬೇಕಾದರೆ ಪೋಲೀಸಿನವರನ್ನು ಒಂದು ಗಂಟೆ ಕಾಲ ಕೆಲಸ ಮಾಡಬೇಡಿ ಎಂದು ಹೇಳಿ, ಆಗ ಸರ್ಕಾರದ ರಕ್ಷಣೆಗೆ ಯಾರು ಹೋಗುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಸರ್ಕಾರದ ರಕ್ಷಣೆಗೂ ಪೋಲೀಸಿನವರು ಬೇಕು, ನಾವು ತಪ್ಪು ಮಾಡಿದರೂ ಕೂಡ ಪೋಲೀಸರ ರಕ್ಷಣೆ ಬೇಕು, ಸಮಾಜದಲ್ಲಿ ಯಾರು ತಪ್ಪು ಮಾಡಿದರೂ ಕೂಡ ಪೋಲೀಸರ ರಕ್ಷಣೆಯನ್ನು ಕೇಳುತ್ತಾ ಇರುವುದನ್ನು ನಾವು ಕಾಣುತ್ತಾ ಇದ್ದೇವೆ, ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ.

ಇಂತಹ ಸಂದರ್ಭದಲ್ಲಿ ಹೇಳುವುದಾದರೆ ಇವತ್ತು ಎಲ್ಲರೂ ನಿದ್ರಿಸುತ್ತಾ ಇದ್ದಾರೆ, ಪೋಲೀಸರು ಮಾತ್ರ ೪೮ ಗಂಟೆಗಳ ಕಾಲ ಕೆಲಸ ಮಾಡಬೇಕು. ಐಪಿಎಸ್, ಐಎಎಸ್ ಅಧಿಕಾರಿಗಳು ಇರುತ್ತಾರೆ; ಕಾನ್‌ಸ್ಟೇಬಲ್‌ನಿಂದ ಹಿಡಿದು ಐಜಿಪಿವರೆಗೆ ಯಾರೂ ನಿದ್ದೆ ಮಾಡುವುದಿಲ್ಲ. ನಾಳೆ ಎಲ್ಲಿ ಕಳ್ಳತನವಾಗುತ್ತದೋ, ಎಲ್ಲಿ ದರೋಡೆಯಾಗುತ್ತದೊ, ಎಲ್ಲಿ ಕೊಲೆಯಾಗುತ್ತದೋ, ಅಸೆಂಬ್ಲಿಯಲ್ಲಿ ಏನಾಗುತ್ತದೋ ಎಂದು ಇಡೀ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಬೇರೆಯವರ ರಕ್ಷಣೆಗೋಸ್ಕರ ತ್ಯಾಗ ಮಾಡತಕ್ಕಂಥ ವ್ಯಕ್ತಿಯ ವಿಚಾರವನ್ನು ಹೊಗಳುವುದಕ್ಕೆ ಆಗುವುದಿಲ್ಲ ಅಂದರೆ ನಾಚಿಕೆಗೇಡಿನ ವಿಷಯ. ಜನತಾ ಸರ್ಕಾರ ಬಂದ ತಕ್ಷಣ ಮಂತ್ರವಾದಿಯಂತೆ ಇಡೀ ಪೋಲೀಸ್ ಇಲಾಖೆ ಸರಿಯಾಗಿದೆ ಎಂದು ಹೇಳುತ್ತಾ ಇಲ್ಲ. ಹಿಂದೆ ಅವರೇ ತಂದಂಥ ಪೋಷಿಸಿ, ಬೆಳೆಸಿದಂಥ ಪೋಲೀಸ್ ಇಲಾಖೆಯಲ್ಲಿ ಕೆಲವು ಲೋಪದೋಷಗಳು ಇರುತ್ತವೆ, ಆ ಲೋಪದೋಷಗಳನ್ನು ತಿದ್ದಿಕೊಂಡು ಸರಿಯಾದ ಮಾರ್ಗದಲ್ಲಿ ನಡೆಯತಕ್ಕ ಸಲಹೆಗಳನ್ನು ಕೊಡುವುದರ ಬದಲು ಪೋಲೀಸ್ ಇಲಾಖೆ ಸಮಾಧಿಯಾಗಿದೆ ಎಂದು ಹೇಳುವುದು ಸರಿಯಲ್ಲ. ವಿರೋಧ ಪಕ್ಷದವರು ಅಧಿಕಾರದಲ್ಲಿದ್ದಾಗ ಮಾಡಲಿಲ್ಲವೇ, ಎಲ್ಲದಕ್ಕೂ ಇತಿಮಿತಿಗಳಿರುತ್ತವೆ. ನಾವು ಟೀಕೆಟಿಪ್ಪಣಿಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ರಚನಾತ್ಮಕವಾದಂಥ ಟೀಕೆಟಿಪ್ಪಣಿಗಳನ್ನು ಮಾಡಬೇಕೇ ಹೊರತು, ನಾವು ವಿರೋಧ ಪಕ್ಷದಲ್ಲಿದ್ದೇವೆ ಅದಕ್ಕೋಸ್ಕರ ವಿರೋಧ

ಮಾಡತಕ್ಕಂಥಾದ್ದು ಎಂದು ಹೇಳುವುದು ಸಲ್ಲದು ಎಂದು ಹೇಳುತ್ತೇನೆ. ನಾನು ಈ ಇಲಾಖೆಯಲ್ಲಿ ೪ ವರ್ಷ ಇದ್ದೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಎಲ್ಲದಕ್ಕೂ ಪನಿಷ್‌ಮೆಂಟ್ ಇದೆ. ಹೇರ್‌ಕಟ್ ಸರಿಯಾಗಿ ಮಾಡಿಕೊಂಡು ಬರಲಿಲ್ಲ ಅಂದರೆ ಪನಿಷ್‌ಮೆಂಟ್ ಇದೆ. ಇಷ್ಟೊಂದು ಶಿಸ್ತಿನಿಂದ ಪೋಲೀಸರು ಕಾರ್ಯ ನಿರ್ವಹಿಸಬೇಕು ಎಂದರೆ ಕಷ್ಟವಾಗುತ್ತದೆ. ಇತ್ತೀಚೆಗೆ ಡಕಾಯಿತಿ ಆಯಿತು. ಡಕಾಯಿತಿ ಬಗ್ಗೆ ಮಾತನಾಡುತ್ತಿದ್ದಾರೆಯೇ ಹೊರತು ಬೇರೆ ವಿಚಾರ ಹೇಳಲಿಲ್ಲ. ಜನತಾ ಸರ್ಕಾರದಲ್ಲಿ ಕೋಮು ಗಲಭೆ ಕಡಿಮೆಯಾಗಿದೆ, ರೌಡಿಗಳು ಕಡಿಮೆಯಾಗಿದ್ದಾರೆ. ಬೆಂಗಳೂರು ಮತ್ತು ಸೌತ್‌ಕೆನರ ಎರಡು ಬಿಟ್ಟರೆ ಬೇರೆ ಕಡೆ ಗಲಭೆ ಇಲ್ಲ. ಇಲ್ಲಿ ಹೊರಗಡೆಯಿಂದ ಬಂದಿರತಕ್ಕವರು ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕು ಎಂದು ಮಾಡುತ್ತಿದ್ದಾರೆ, ರಾಜಕೀಯ ದೃಷ್ಟಿಯಿಂದ ಕೆಲವು ಡಕಾಯಿತಿ ನಡೆಯುವುದು ಬಿಟ್ಟರೆ ಬೇರೆ ವಿಚಾರ ಏನಿದೆ. ನಮ್ಮ ಮೈಸೂರು, ನಂಜನಗೂಡಿಗೆ ಬನ್ನಿ. ನಮ್ಮ ಹೆಣ್ಣು ಮಕ್ಕಳು ನೆಮ್ಮದಿಯಿಂದ ಬಾಳುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಅಕಸ್ಮಾತ್ ರೌಡಿಗಳಿದ್ದರೆ ಕಾಂಗ್ರೆಸ್‌ನವರಿದ್ದಾಗ ಪೋಷಿಸಿ, ಬೆಳೆಸಿಕೊಂಡು ಬಂದವರು ಇರುತ್ತಾರೆ, ೫-೬ ವರ್ಷಗಳಲ್ಲಿ ಎಲ್ಲರೂ ನಿರ್ನಾಮವಾಗುತ್ತಾರೆ. ನೆಮ್ಮದಿಯಿಂದ ಇದ್ದೇವೆಂದು ಜನ ಹೇಳುತ್ತಾ ಇದ್ದಾರೆ. ಜನತಾ ಸರ್ಕಾರ ಏನು ಮಾಡದೇ ಹೋದರೂ ಚಿಂತೆಯಿಲ್ಲ, ನಾವು ನೆಮ್ಮದಿಯಿಂದ ಇದ್ದೇವೆಂದು ಜನ ಹೇಳುತ್ತಾ ಇದ್ದಾರೆ. ಎಲ್ಲೋ ಒಂದು ಅಕೃತ್ಯ ನಡೆದರೆ ....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಹೇಳುತ್ತಾ ಇರುವುದು ಸರಿಯೇ ಎಂದು ಮಾನ್ಯ ರಾಚಯ್ಯನವರನ್ನು ಕೇಳುತ್ತಾ ಇದ್ದೇನೆ. ಜನ ನೆಮ್ಮದಿಯಿಂದ ಇದ್ದಾರೆ, ಹೆಣ್ಣು ಮಕ್ಕಳ ಮಾನ್ಯ ಮರ್ಯಾದೆ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ. ಅದು ಸರಿಯೋ, ನೀವು ಒಪ್ಪಿಕೊಳ್ಳುತ್ತಾ ಇದ್ದೀರಾ ಎಂದು ನಿಮ್ಮನ್ನೇ ಕೇಳುತ್ತಾ ಇದ್ದೇನೆ.

ಶ್ರೀ ಡಿ. ಟಿ. ಜಯಕುಮಾರ್.—ಶ್ರೀಮತಿ ನಾಗರತ್ನಮ್ಮನವರು ಕರ್ನಾಟಕದ ಬಗ್ಗೆ ಹೇಳುತ್ತಾ ಇದ್ದಾರೆ. ಇವತ್ತು ಕರ್ನಾಟಕದಲ್ಲಿ ಡಕಾಯಿತಿ ನಡೆಯುತ್ತಿದೆ, ಅದಕ್ಕೋಸ್ಕರ ಕೇಳುತ್ತಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರನ್ನು ಕೊಲೆ ಮಾಡಿದಂಥ ಸಂದರ್ಭದಲ್ಲಿ ಇಡೀ ರಾಷ್ಟ್ರದಲ್ಲಿ ಪೋಲೀಸರ ರಕ್ಷಣೆ ಕೊಡುವುದಕ್ಕಾಗಿಲ್ಲ, ಇಲ್ಲಿ ಕರ್ನಾಟಕದ ಬಗ್ಗೆ ಮಾತ್ರ ಹೇಳುತ್ತಾ ಇದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಸ್ಸಾಂನಲ್ಲೋ ಎಲ್ಲೋ ಆದರೆ ಅದೇ ರೀತಿ ಕರ್ನಾಟಕದಲ್ಲೂ ಮಾಡಬೇಕೇ. ಅವರಿಗೆ ಸ್ವಲ್ಪ ಸರಿಯಾಗಿ ಹೇಳುವುದಕ್ಕೆ ಹೇಳಿ.

ಶ್ರೀ ಡಿ. ಟಿ. ಜಯಕುಮಾರ್.—ಹಿರಿಯರಾದ ನಾಗರತ್ನಮ್ಮನವರು ಇಂಟರ್‌ಫಿಯರ್ ಆಗುತ್ತಾ ಇದ್ದಾರೆ. ಅವರು ಮಾತನಾಡುವಾಗ ನಾವು ಮಾತನಾಡಿದರೆ ತಕ್ಷಣ ಕೋಪ ಮಾಡಿಕೊಂಡು ಬಿಡುತ್ತಾರೆ. ನಾವು ಹೊಸಬರು, ಭಾಷಣ ಮಾಡುವುದಕ್ಕೆ ಬರದೇ ಇರಬಹುದು. ಕೆಲವು ಅಂಶಗಳನ್ನು ಹೇಳುವಾಗ ಸೌಜನ್ಯದಿಂದ ಕೇಳಬೇಕು. ಇಡೀ ರಾಷ್ಟ್ರದಲ್ಲಿ ಅತ್ಯುತ್ತಮವಾದಂಥ ಪೋಲೀಸ್ ಇಲಾಖೆ ಏನಾದರೂ ಇತ್ತು ಅಂದರೆ ಅದು ಕರ್ನಾಟಕದ್ದು ಮಾತ್ರ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೋ ಅಥವಾ ಅದರಲ್ಲಿ ಏನಾದರೂ ಭಿನ್ನಾಭಿಪ್ರಾಯ ಇದೆಯೋ ಕೇಳಿ. ಇಡೀ ರಾಷ್ಟ್ರಕ್ಕೆ ಈ ಪೋಲೀಸ್ ಇಲಾಖೆ ಒಳ್ಳೆಯ ಹೆಸರು ತಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಲ್ಪ ಅವಕಾಶ ಕೊಡಬೇಕು. ಏಕೆಂದರೆ, ಸತ್ಯಾಂಶ ಹೊರಗಡೆ ಬರುತ್ತೆ. ಇಷ್ಟೆಲ್ಲಾ ಹೇಳಿದರು, ರಾಜಕೀಯ ದೃಷ್ಟಿಯಿಂದ ಕಾಂಗ್ರೆಸ್‌ನವರು ಮಾಡಿದರು ಎಂದು. ಇಡೀ ರಾಷ್ಟ್ರದಲ್ಲಿ ಒಳ್ಳೆಯ ಪೋಲೀಸ್ ಇಲಾಖೆ ಇದ್ದರೆ ಅದು ಕರ್ನಾಟಕದಲ್ಲಿ ಎಂದು ಹೇಳಿದರು. ೩ ವರ್ಷ ಗೊಮ್ಮಟೇಶ್ವರನನ್ನು ತಯಾರು ಮಾಡಿದ ಹಾಗೆ ಜನತಾದವರು ತಯಾರು ಮಾಡಿದ ಪೋಲೀಸರೇ........

ಅಧ್ಯಕ್ಷರು.—ರೈತ ವರ್ಗದಿಂದ ಬಂದವರು ರೈತರ ಪರವಾಗಿ ಮಾತನಾಡುತ್ತಾರೆ. ಅಧಿಕಾರಿ ವರ್ಗದಿಂದ ಬಂದವರು ಅಧಿಕಾರಿಗಳ ಪರವಾಗಿ ಮಾತನಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧಿಕಾರ ವರ್ಗದಿಂದ ಬಂದವರು ಜವಾಬ್ದಾರಿಯಿಂದ ಮಾತನಾಡಬೇಕು. ಪ್ರಾರಂಭದಲ್ಲಿ ಬಹಳ ಚೆನ್ನಾಗಿ ಮಾತನಾಡಿದರು. ಇಲಾಖೆಯ ಮೊರೇಲನ್ನು ಎತ್ತಿ ಹಿಡಿಯಬೇಕು, ರಕ್ಷಣೆ ಕೊಡಬೇಕು ಎಂದು ಹೇಳಿದರು, ನನಗೆ ಬಹಳ ಸಂತೋಷವಾಯಿತು.

ಆಮೇಲೆ ಬರಬರುತ್ತಾ ಪೂರ್ತಿ ಅಡ್ಡದಾರಿ ಹಿಡಿದರು. ಅವರು ಪೋಲೀಸ್ ಇಲಾಖೆಯಲ್ಲಿ ಇದ್ದವರು, ಪೋಲೀಸ್ ಇಲಾಖೆಯ ನೀತಿ, ಶೌರ್ಯಗಳನ್ನು ಎತ್ತಿ ಹಿಡಿದ ಮೇಲೆ ಅದು ಪೋಲೀಸ್ ಕಲ್ಚರ್ ಮೇಲೆ ರಿಫ್ಲೆಕ್ಟಾಗುತ್ತದೆ.

ಶ್ರೀ ರಾಜವರ್ಧನ.—೩ ವರ್ಷಗಳಿಂದ ಪೋಲೀಸ್ ಇಲಾಖೆ ಯಾವ ಘಟ್ಟದಲ್ಲಿದೆ, ಹೇಗಿದೆ ಎನ್ನುವುದನ್ನು ಹೇಳುತ್ತಾ ಇದ್ದಾರೆ.

ಶ್ರೀ ಎಂ. ರಾಮಪ್ಪ.—ಇನ್ನೂ ಏನೇನು ಮಾಡಬೇಕು ಎಂದು ಇದ್ದೀರೋ ಮಾಡಿ.

ಅಧ್ಯಕ್ಷರು.—ಕಾಂಟ್ರವರ್ಸಿ ಬರುವ ರೀತಿ ಮಾತನಾಡಬೇಡಿ ಎಂದು ಮೊದಲೇ ಹೇಳಿದೆ.

ಶ್ರೀ ಡಿ. ಟಿ. ಜಯಕುಮಾರ್.—೧೯೪೭, ೧೯೬೦, ೧೯೭೦, ೧೯೮೦ ರಲ್ಲಿ ಜನಸಂಖ್ಯೆ ಎಷ್ಟು ಇತ್ತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಈಗ ಸುಮಾರು ೪ ಕೋಟಿ ಜನಸಂಖ್ಯೆ ಇರತಕ್ಕ ರಾಜ್ಯದಲ್ಲಿ ಪೋಲೀಸ್ ವ್ಯವಸ್ಥೆ ಎಷ್ಟಿದೆಯೆಂದರೆ; ರಾಜ್ಯದ ಪೋಲೀಸ್ ವ್ಯವಸ್ಥೆಯಲ್ಲಿ ೭೫ ವಿಭಾಗಗಳಿವೆ, ೧೭೨ ವಲಯಗಳಿವೆ, ೬೫೧ ಪೋಲೀಸ್ ಠಾಣೆಗಳಿವೆ, ೩೦೭ ಉಪ ಪೋಲೀಸ್ ಠಾಣೆಗಳಿವೆ ಮತ್ತು ೪೫,೪೦೮ ಅಧಿಕಾರಿಗಳು ಮತ್ತು ಪೋಲೀಸರು ಇದ್ದಾರೆ. ಇದು ಯಾವ ನ್ಯಾಯ ಸ್ವಾಮಿ. ೪ ಕೋಟಿ ಜನ ಸಂಖ್ಯೆ ಇದ್ದಾಗಲೂ ೪೫,೪೨೮; ೨ ಕೋಟಿ ಜನಸಂಖ್ಯೆ ಇದ್ದಾಗಲೂ ೪೫,೪೦೮. ಹೀಗೆ ಜನಸಂಖ್ಯೆ ಯಾವ ಪ್ರಮಾಣದಲ್ಲಿ ಜಾಸ್ತಿಯಾಗುತ್ತದೋ ಅದೇ ರೀತಿ ಪ್ರಪೋರ್ಷನೇಟಾಗಿ ಪೋಲೀಸರ ಸಂಖ್ಯೆಯೂ ಜಾಸ್ತಿಯಾಗಬೇಕು. ಈಗ ಪೋಲೀಸ್ ಡಿಪಾರ್ಟ್‌ಮೆಂಟಿಗೆ ೯೮.೭೫ ಕೋಟಿ ಮಾತ್ರ ೧೯೮೬–೮೭ಕ್ಕೆ ಅಲೋಕೇಷನ್ ನಿಗದಿ ಮಾಡಿದ್ದಾರೆ, ಇದು ಬಹಳ ಕಡಿಮೆ. ಒಬ್ಬ ಡಕಾಯಿತಿಯನ್ನು ಹಿಡಿಯಬೇಕಾದರೆ ವೇಗವಾಗಿ ಹೋಗಬೇಕು, ಅಂಬಾಸಿಡರ್ ಬಹಳ ಸ್ಪೀಡಾಗಿ ಹೋಗುತ್ತದೆ; ಪೋಲೀಸ್ ಜೀಪಿನಲ್ಲಿ ಹೋಗುವಾಗ ಮಧ್ಯದಲ್ಲಿ ಪೆಟ್ರೋಲ್, ಡೀಸಲ್ ಇಲ್ಲದೆ ನಿಂತರೆ ಪೋಲೀಸರು ತಳ್ಳಿಕೊಂಡು ಹೋಗಬೇಕಾಗುತ್ತದೆ. ಇಂತಹ ಅವ್ಯವಸ್ಥೆಯಲ್ಲಿ ಎಲ್ಲವನ್ನೂ ಸರಿ ಮಾಡಬೇಕು ಅಂದರೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಗೃಹ ಸಚಿವರು ೯೮ ಕೋಟಿಗಿಂತ ಇನ್ನೂ ಹೆಚ್ಚಿನ ಬೇಡಿಕೆಯನ್ನು ಇಟ್ಟು ಸರ್ಕಾರಕ್ಕೆ ಒತ್ತಾಯ ತರಬೇಕು ಎಂದು ಹೇಳುತ್ತೇನೆ. ಇನ್ನು ಪೋಲೀಸ್ ಅಧಿಕಾರಿಗಳನ್ನು ಹೆಚ್ಚು ಮಾಡಬೇಕು; ತರಬೇತಿ ಕೊಡುವಂಥ ಸಂದರ್ಭದಲ್ಲಿ ಅತ್ಯುತ್ತಮವಾದಂಥ ತರಬೇತಿ ಕೊಟ್ಟು, ಹೆಚ್ಚು ವಾಹನಗಳನ್ನು ತೆಗೆದುಕೊಳ್ಳಬೇಕು. ಸಮರ್ಪಕವಾದಂಥ ಉತ್ತಮವಾದಂಥ ವಾಹನಗಳನ್ನು ಪರ್ಚೇಸ್ ಮಾಡಬೇಕು ಎಂದು ಪೋಲೀಸ್ ಇಲಾಖೆ ಬಗ್ಗೆ ಇಷ್ಟನ್ನು ಹೇಳಿದ್ದೇನೆ.

ಇನ್ನು ಸಣ್ಣ ಉಳಿತಾಯದ ಬಗ್ಗೆ ಹೇಳುವುದಾದರೆ, ಇದನ್ನು ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಶ್ರೀಮಾನ್ ವೀರಣ್ಣನವರು ಚಿಕ್ಕದಾಗಿ, ಚೊಕ್ಕವಾಗಿ ಕೆಲಸ ಮಾಡಿದ್ದಾರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಒಪ್ಪಿಕೊಂಡಿದ್ದಾರೆ.

ಇನ್ನು ಅಬ್ಕಾರಿ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಜಿಗಜಿನಗಿಯವರು ನಮ್ಮ ಹಾಗೆ ಯುವಕರು, ಒಳ್ಳೆಯ ಕೆಲಸ ಮಾಡಿದ್ದಾರೆ. ಇದೊಂದು ಹಗರಣವನ್ನು ಬಿಟ್ಟರೆ ಬಾಕಿ ವಿಚಾರದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಇದರಿಂದ ರಾಜ್ಯದ ಬೊಕ್ಕಸಕ್ಕೆ ಏನು ಆದಾಯ ಬರುತ್ತಿದೆ ಅದನ್ನು ಇನ್ನೂ ಹೆಚ್ಚು ಮಾಡತಕ್ಕಂಥ ಅವಕಾಶ ಅವರ ಪಾಲಿಗೆ ಇದೆ. ಎಕ್ಸೈಜ್ ಲಾಬಿ, ಅವರ ಕುತಂತ್ರ ರಾಜಕೀಯದಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ೧೧೮ ಕೋಟಿ ರೂಪಾಯಿ ಏನು ಬರುತ್ತಿದೆ ಅದು ೪೦೦,೫೦೦ ಕೋಟಿ ರೂಪಾಯಿ ಬರತಕ್ಕಂಥ ಅವಕಾಶವಿದೆ, ವ್ಯವಸ್ಥೆ ಇದೆ. ಈ ಸಾರಿ ಈ ಇಲಾಖೆಯನ್ನು ಸಮರ್ಪಕವಾಗಿ ನಡೆಸಿಕೊಂಡು ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹಣವನ್ನು ಕೊಡಲು ಹೆಚ್ಚು ಆಸಕ್ತಿಯನ್ನು ವಹಿಸಬೇಕು ಎಂದು ಮಾನ್ಯ ಮಂತ್ರಿಗಳಿಗೆ ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

೫–೦೦ ಪಿ. ಎಂ.

† ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಸಿರಾ).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಪೋಲೀಸ್ ಇಲಾಖೆ, ಅಬ್ಕಾರಿ ಇಲಾಖೆ ಹಾಗೂ ಸಣ್ಣ ಉಳಿತಾಯ, ಬಂಧೀಖಾನೆ ಇಲಾಖೆಗಳ ಬಗ್ಗೆ ಬೇಡಿಕೆಗಳನ್ನು ಈ ಸದನದಲ್ಲಿ ಏನು ಮಂಡಿಸಿದ್ದಾರೆ, ಅದನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಒಂದು ಉಲ್ಲೇಖನವನ್ನು ಬರೆದಿದ್ದಾರೆ.

> " The basic function of the Police Department is to protect the lives and property of the people. It is main job is to maintaion law and order, prevention of crimes. The Police force had discharged its duties efficiently during the year 1985 "

ಎಂದು ಅವರ ರಿಪೋರ್ಟ್‌ನಲ್ಲಿ ಬರೆದಿದ್ದಾರೆ. ಪೋಲೀಸ್ ಇಲಾಖೆಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ ಈ ಪೋಲೀಸ್ ಇಲಾಖೆ ಇರುವುದು ಕೇವಲ ಒಂದು ಪ್ರಾಣ ರಕ್ಷಣೆಗೆ ಅಥವಾ ಸಾರ್ವಜನಿಕರ ಆಸ್ತಿಪಾಸ್ತಿಯ ರಕ್ಷಣೆಗೆ ಮಾತ್ರ ಇಲ್ಲ, ಇದು ಸಾರ್ವಜನಿಕರ ಪ್ರತಿಯೊಂದು ರಕ್ಷಣೆಗೂ ಬೇಕಾಗಿದೆ. ಎಲ್ಲ ರಕ್ಷಣೆಯೂ ಪೋಲೀಸ್ ಇಲಾಖೆಗೆ ಸಂಬಂಧಪಟ್ಟಿದೆ. ಸರ್ಕಾರದಲ್ಲಿ ಇದು ಬಹಳ ಮುಖ್ಯವಾದಂತಹ ಅಂಗವಾಗಿದೆ ತಾವು ನೋಡಿರಬಹುದು ಇವತ್ತು ಜನರು ಪೋಲೀಸಿನವರು ಎಂದರೆ ಭೀತಿ ಪಡಬೇಕಾದ ಸಂದರ್ಭ ಬಂದಿದೆ. ಇದಕ್ಕೆ ಕಾರಣ, ಪೋಲೀಸಿನವರಲ್ಲಿ ಇರತಕ್ಕಂತಹ ಒಂದು ಸೌಜನ್ಯತೆ, ಅವರಲ್ಲಿರತಕ್ಕಂತಹ ಪ್ರೀತಿ ವಿಶ್ವಾಸ ಹಾಗೂ ಅವರು ಜನತೆಯ ಮೇಲೆ ಇಟ್ಟಿರತಕ್ಕಂತಹ ಪ್ರೀತಿ ವಿಶ್ವಾಸ. ಅವರಲ್ಲಿ ಈ ವಿಶ್ವಾಸವಿಲ್ಲ ಅನ್ನತಕ್ಕಂತಹ ಭಾವನೆ ಬರುತ್ತಿದೆ. ಪೋಲೀಸ್ ಇಲಾಖೆಯವರು ತಂದೆತಾಯಿಗಳಿದ್ದ ಹಾಗೆ, ತಂದೆ ತಾಯಿಗಳನ್ನು ನೋಡಿದ ತಕ್ಷಣ ಮಕ್ಕಳು ಹೇಗೆ ನಗುಮುಖದಿಂದ ಅವರ ಹತ್ತಿರಕ್ಕೆ ಹೋಗುತ್ತಾರೆ ಹಾಗೆ ಪೋಲೀಸ್ ಇಲಾಖೆಯವರ ಹತ್ತಿರ ಪ್ರಜೆಗಳು ನಗುಮುಖದಿಂದ ಹೋಗಬೇಕು ಏಕೆಂದರೆ ಅವರ ಹತ್ತಿರ ಎಲ್ಲ ರಕ್ಷಣೆ ಸಿಗಬೇಕು ಇದಕ್ಕೆ ತಕ್ಕ ತರಬೇತಿಯನ್ನು ಕೊಡಬೇಕೆಂದು ಸಂಬಧಪಟ್ಟ ಮಂತ್ರಿಗಳಿಗೆ ಸಲಹೆ ಕೊಡುತ್ತೇನೆ. ಈಗ ಪೋಲೀಸ್ ಇಲಾಖೆಯವರಿಗೆ ಯಾವರೀತಿ ಟ್ರೈನಿಂಗ್ ಕೊಡುತ್ತಿದ್ದಾರೆಂದರೆ, ಹಳೆಯ ರೀತಿಯಲ್ಲಿ ಫಿಸಿಕಲ್ ಟ್ರೈನಿಂಗ್ ಕೊಡುತ್ತಿದ್ದಾರೆ. ಅವರು ಪ್ರಜೆಗಳೊಡನೆ ಯಾವ ರೀತಿ ನಡೆದುಕೊಳ್ಳಬೇಕು ಯಾವ ರೀತಿ ಅವರನ್ನು ಭಾವಿಸಬೇಕೆಂದು ಟ್ರೈನಿಂಗ್ ಕೊಡಬೇಕು. ಅದನ್ನು ಕೊಡುತ್ತಿಲ್ಲವೆಂದು ನನಗೆ ವ್ಯಕ್ತವಾಗುತ್ತದೆ. ಇನ್ನು ತಾವು ಪೋಲೀಸ್ ಇಲಾಖೆಗೆ ರೆಕ್ರೂಟ್ ಮಾಡಿಕೊಳ್ಳುವುದರಲ್ಲಿ ಸ್ಪೆಷಲೈಸೇಷನ್ ಇಲ್ಲ. ಅವರು ಇಂಟೆಲಿಜೆನ್ಸ್ ವರ್ಕ್ ಮಾಡಲೀ ಸಿ.ಓ.ಡಿ ವರ್ಕ್ ಮಾಡಲೀ ಔಟ್ ಪೋಸ್ಟ್ ವರ್ಕ್ ಮಾಡಲೀ ಅದಕ್ಕೆ ಬೇಕಾದಂತಹ ಸ್ಪೆಷಲ್ ಟ್ರೈನಿಂಗ್ ಕೊಡುತ್ತಿಲ್ಲ. ಇನ್ನು ಮುಂದೆ ಮಾಡತಕ್ಕಂತಹ ರೆಕ್ರೂಟ್‌ಮೆಂಟ್‌ನಲ್ಲಿ ಅವರ ವಿದ್ಯಾಭ್ಯಾಸದ ಯೋಗ್ಯತೆಗೆ ತಕ್ಕ ಹಾಗೆ ಆ ಡಿಪಾರ್ಟ್‌ಮೆಂಟಿಗೆ ರೆಕ್ರೂಟ್‌ಮೆಂಟ್ ಮಾಡಿಕೊಳ್ಳಬೇಕೆನ್ನುವ ಸಲಹೆಯನ್ನು ತಮಗೆ ಕೊಡುವುದಕ್ಕೆ ಬಯಸುತ್ತೇನೆ ಮತ್ತು ಇವತ್ತಿನ ದಿವಸ ನಮ್ಮ ದೇಶದಲ್ಲಿ ಮಹಿಳೆಯರು ಸರಿಸಮನಾದಂತಹ ಹಕ್ಕನ್ನು ಕೇಳುತ್ತಾರೆ. ಅವರು ಸಂಖ್ಯೆಯಲ್ಲೂ ಕೂಡ ಸರಿಸಮನಾಗಿದ್ದಾರೆ. ಪೋಲೀಸ್ ಇಲಾಖೆಯಲ್ಲಿರತಕ್ಕಂತಹ ಮಹಿಳಾ ಪೋಲೀಸರನ್ನು ನೋಡಿದರೆ, ಇದು ಬಹಳ ಕಡಿಮೆಯೆಂದು ಅನಿಸುತ್ತದೆ. ಮಹಿಳಾ ಉನ್ನತ ಅಧಿಕಾರಿಗಳು ಯಾರೂ ಇಲ್ಲ. ಕಾನ್‌ಸ್ಟೆಬಲ್ಸ್, ಸಬ್ ಇನ್ಸ್‌ಪೆಕ್ಟರ್, ಎ. ಎಸ್. ಪಿ, ಡಿ. ಎಸ್. ಪಿ. ಗಳಾಗಿ ಮಹಿಳಾ ಅಧಿಕಾರಿಗಳು ಇರಬಹುದು. ಅವರ ಸಂಖ್ಯೆಗೆ ತಕ್ಕ ಹಾಗೆ ಉನ್ನತ ಮಟ್ಟದಲ್ಲಿ ಮಹಿಳಾ ಅಧಿಕಾರಿಗಳು ಇಲ್ಲದೇ ಇರುವುದು ನಿಜವಾಗಿಯೂ ಬಹಳ ಶೋಚನೀಯವಾದ ಸಂಗತಿಯಾಗಿದೆಯೆಂದು ನಾನು ಭಾವಿಸುತ್ತೇನೆ. ನಮ್ಮ ಸ್ನೇಹಿತರಾದ ಜಯಕುಮಾರ್‌ರವರು ಒಂದು ವಿಚಾರವನ್ನು ಹೇಳಿದರು, ಎಲ್ಲರಿಗೂ ರಕ್ಷಣೆ ಇದೆಯೆಂದು. ಉದಾಹರಣೆಗೆ ಹೇಳುತ್ತೇದೆ. ಹೆಗ್ಗಡದೇವನ ಕೋಟೆಯಲ್ಲಿ ಒಬ್ಬ ಪೋಲೀಸ್ ಅಧಿಕಾರಿ ಹೆಣ್ಣುಮಗಳ ಮೇಲೆ ಅತ್ಯಾಚಾರ ಮಾಡಿ ಸಸ್ಪೆಂಟ್ ಆಗಿದ್ದಾರೆ. ಮಾನ್ಯ ಸಹ ಸದಸ್ಯರಿಗೆ ಗೊತ್ತಿರಬಹುದು. ಯಾರು ಕಾನೂನನ್ನು ರಕ್ಷಣೆ ಮಾಡಬೇಕು, ಯಾರು ಹೆಣ್ಣುಮಗಳನ್ನು ರಕ್ಷಣೆ ಮಾಡಬೇಕು, ಅವರೇ ಅತ್ಯಾಚಾರಕ್ಕೆ ಇಳಿದಾಗ ನಮ್ಮ ದೇಶದ ಪರಿಸ್ಥಿತಿ, ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳ ಹೆಣ್ಣುತನದ ಗೌರವ ಏನಿದೆ, ಅದನ್ನು ಕಾಪಾಡುತ್ತೇವೆ ಎನ್ನುವುದರ ಜವಾಬ್ದಾರಿ ಸರ್ಕಾರಕ್ಕೆ, ಪೋಲೀಸ್ ಇಲಾಖೆಗೆ ಇದೆಯೋ ಎಂದು ವ್ಯಕ್ತವಾಗುತ್ತದೆ. ಮತ್ತೊಂದು ಸಲಹೆಯನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ವುಮೆನ್ಸ್, ಚಿಲ್ಡ್ರನ್ಸ್ ಬಗ್ಗೆ ಒಂದು ಸ್ಪೆಷಲ್ ಸ್ಕ್ವಾಡ್ ಮಾಡಬೇಕು. ಅನೇಕ ಇಲಾಖೆಗಳ ಬಗ್ಗೆ ಸ್ಕ್ವಾಡ್ ಮಾಡಿದ್ದೀರಿ. ಅದೇ ರೀತಿ ವುಮೆನ್ಸ್, ಚಿಲ್ಡ್ರನ್ಸ್ ರೈಟ್ಸ್ ಅನ್ನು ಪ್ರೊಟೆಕ್ಟ್ ಮಾಡುವುದಕ್ಕೆ ಸ್ಪೆಷಲ್ ಸ್ಕ್ವಾಡ್ ಮಾಡಬೇಕಾದುದು ಅತಿ ಮುಖ್ಯವಾದುದೆಂದು ಸಜೆಷನ್ ಕೊಡುತ್ತಿದ್ದೇನೆ. ಡಿಟೆಕ್ಟ್ ಮಾಡುವುದರಲ್ಲಿ ನಿಮ್ಮ ಇಲಾಖೆ ಬಹಳ ಹಿಂದುಳಿದಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ತಾಲ್ಲೂಕಿನ ಗ್ರಾಮದುಣಸೇ ಗ್ರಾಮದಲ್ಲಿ ಒಂದು ಮರ್ಡರ್

ಆಯಿತು. ದಿನಾಂಕ ಸರಿಯಾಗಿ ಗೊತ್ತಿಲ್ಲ. ಆದಾಗಿ ಸುಮಾರು ಒಂದೂವರೆ ತಿಂಗಳಾಗಿರಬಹುದು. ಅಲ್ಲಿಗೆ ಡಾಗ್ ಸ್ಕ್ವಾಡ್ ಬಂದಿದ್ದು ಅಪರಾಧಿಗಳನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗಿಲ್ಲ. ನಿಮ್ಮ ಪೋಲೀಸ್ ಇಲಾಖೆಯಲ್ಲಿ ಇಂಟೆಲಿಜೆನ್ಸ್ ಇದೆ, ಸಿ.ಓ.ಡಿ. ಇದೆ, ಪ್ರಿವೆನ್‌ಷನ್ ಮೇಜರ್ಸ್ ಇದೆ ಇಷ್ಟೆಲ್ಲಾ ಇದ್ದರೂ ಕೂಡ ಮರ್ಡರ್ ಮಾಡಿರತಕ್ಕಂತಹ ಅಪರಾಧಿಯನ್ನು ಕಂಡು ಹಿಡಿಯಲಿಲ್ಲವೆಂದರೆ ಪೋಲೀಸ್ ಇಲಾಖೆಗೆ ಇದು ಬಹಳ ನಾಚಿಕೆಗೇಡಿತನದ ವಿಚಾರವೆಂದು ನಾನು ಮುಂದುವರಿದು ಹೇಳುತ್ತಿದ್ದೇನೆ. ನಾನು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಕೇಳಿದೆ. ಯಾರು ಕೊಲೆಗೆ ಈಡಾದರೋ ಅವರ ಮಗನನ್ನೇ ಹಿಡಿದುಕೊಂಡು ಬಂದರು. ಮೂರು ದಿನ ಅವರ ತಂದೆಯ ಸೆರೆಮನೆ ಇತ್ತು. ಅದಕ್ಕೆ ಅವನು ಹೋಗುವುದಕ್ಕೆ ಅವಕಾಶವಾಗಲಿಲ್ಲ. ನಾನು ಹೋಗಿ ಕೇಳಿದಾಗ ಅವನನ್ನು ಬಿಡುಗಡೆ ಮಾಡಿದರು ಹಾಗೂ ಇದರ ಬಗ್ಗೆ ಇನ್ನೂ ಕ್ಲೂ ಸಿಕ್ಕಿಲ್ಲವೆಂದು ಹೇಳಿದರು. ಡಾಗ್ಸ್ ಸ್ಕ್ವಾಡ್ ಹೋದರೂ ಇದನ್ನು ಪತ್ತೆ ಹಚ್ಚುವುದಕ್ಕೆ ಆಗದೇ ಇರತಕ್ಕಂಥಾದ್ದು ನಿಜವಾಗಿಯೂ ಶೋಚನೀಯವಾದ ಸಂಗತಿ ಇನ್ನು ಮೇಲುಕುಂಟೆ ಗ್ರಾಮದಲ್ಲಿ ಒಂದು ಕಳ್ಳತನವಾಗಿದೆ. ಕಳ್ಳನನ್ನು ಹಿಡಿದುಕೊಂಡು ಬಂದರೂ ಕೂಡ ಇದುವರೆಗೆ ಅವನನ್ನು ಅರೆಸ್ಟ್ ಮಾಡಿಲ್ಲ. ನಾನು ಅಧಿಕಾರಿಗಳನ್ನು ಕೇಳಿದಾಗ, ಆದಷ್ಟು ಬೇಗ ಚಾರ್ಜ್ ಷೀಟ್ ಹಾಕುತ್ತೇವೆಂದು ಹೇಳಿದರು. ಮತ್ತು ಯಾರು ಇದರ ಬಗ್ಗೆ ಕಂಪ್ಲೈಂಟ್ ಕೊಟ್ಟಿದ್ದಾರೋ ಅವರಿಗೆ ಹೇಳಿದ್ದಾರೆ, ನಾವು ಮಾಡುವುದಕ್ಕಾಗುವುದಿಲ್ಲ ನಮಗೆ ಒತ್ತಡ ಜಾಸ್ತಿಯಿದೆ ಕಳ್ಳತನವಾಗಿರುವುದು ಕಳ್ಳಮಾಲು ಎಂದು. ಯಾವ ಒತ್ತಡ ಎಂದು ನನಗೆ ಅರ್ಥವಾಗುತ್ತಿಲ್ಲ. ಕ್ಲಬ್‌ಗಳಿಗೆ ಲೈಸನ್ಸ್ ಕೊಡುತ್ತಾರೆ. ಅದರಲ್ಲಿ ಅನೇಕ ರೀತಿಯಾದಂತಹ ಅವ್ಯವಹಾರಗಳು, ಅನೀತಿಯಾದಂತಹ ಕೆಲಸಗಳು ನಡೆಯುತ್ತಿವೆ. ಯಾವ ಉದ್ದೇಶಕ್ಕೋಸ್ಕರ ಈ ಕ್ಲಬ್‌ಗಳಿಗೆ ಲೈಸನ್ಸ್ ಕೊಡುತ್ತಿದ್ದೀರೋ, ಆ ಉದ್ದೇಶದಿಂದ ಕಾರ್ಯಚಟುವಟಿಕೆಗಳು ನಡೆಯುತ್ತಿಲ್ಲ, ಕ್ಲಬ್‌ಗೆಂದು ಲೈಸನ್ಸ್ ತೆಗೆದುಕೊಳ್ಳುತ್ತಾರೆ. ಆದರೆ ಅಲ್ಲಿ ಜೂಜುಕೋರತನ ಜಾಸ್ತಿಯಾಗುತ್ತಿದೆ. ಅಲ್ಲಿ ರಿಕ್ರಿಯೇಷನ್ಸ್ ಆಕ್ಟಿವಿಟೀಸ್ ಇರುವುದಿಲ್ಲ. ಏನೇನು ಆಕ್ಟಿವಿಟೀಸ್ ಮಾಡುತ್ತೇವೆಂದು ಮೆಮೊರ್ಯಾಂಡಮ್‌ನಲ್ಲಿ ಕೊಟ್ಟಿರುತ್ತಾರೆ, ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಾರೆ. ಇದರ ಬಗ್ಗೆ ಉಸ್ತುವಾರಿ ಮಾಡುತ್ತಿಲ್ಲ. ಇನ್ನು ಡಕಾಯಿತಿ ಬಗ್ಗೆ ಒಂದೆರಡು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಡಕಾಯಿತಿ ಬಗ್ಗೆ ಬೆಂಗಳೂರಿನ ಜನಗಳಲ್ಲಿ ಬಹಳ ಭೀತಿಯುಂಟಾಗಿದೆ, ಈ ವಿಷಯದಲ್ಲಿ ನಮ್ಮ ಮಂತ್ರಿಗಳು ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತಿರಬಹುದು, ಅಧಿಕಾರಿಗಳೂ ಕೂಡ ಪ್ರಾಮಾಣಿಕ ಪ್ರಯತ್ನ ಪಡುತ್ತಿರಬಹುದು. ಆದರೆ ಜನರಲ್ಲಿರತಕ್ಕಂತಹ ಭೀತಿಯನ್ನು ಯಾರೂ ಸಹ ತೊಡೆಯುವುದಕ್ಕೆ ಆಗುತ್ತಿಲ್ಲ. ಪೋಲೀಸ್‌ನವರ ಕೈಗೆ ಲಾಠಿ ಕೊಟ್ಟು ಡಕಾಯಿತರನ್ನು ಹಿಡಿಯಿರಿ ಎಂದು ಹೇಳಿದರೆ ಅವರ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಪೋಲೀಸಿನವರಿಗೂ ಮಕ್ಕಳು ಮರಿಗಳು ಇರುತ್ತಾರೆ. ಅವರಿಗೂ ಜೀವದ ಮೇಲೆ ಆಸೆಯಿರುತ್ತದೆ ನೀವು ಹೋಗಿ ಡಕಾಯಿತರನ್ನು ಹಿಡಿಯಿರಿ ಎಂದರೆ ಹೇಗೆ ? ಈ ಡಕಾಯಿತರನ್ನು ಹಿಡಿಯಲು ಒಂದು ಸ್ಕ್ವಾಡ್ ಮಾಡಬೇಕು. ಮತ್ತು ಪೋಲೀಸ್‌ನವರಿಗೆ ಸರಿಯಾದಂತಹ ಸಲಕರಣೆಗಳನ್ನು ಕೊಡಬೇಕಾಗುತ್ತದೆ. ಆಗ ಮಾತ್ರ ಇದನ್ನು ಎಫೆಕ್ಟೀವ್ ಆಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಅಬ್ಕಾರಿ ಇಲಾಖೆ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಕಾನೂನಿನಲ್ಲಿ ದೇವಸ್ಥಾನಗಳು ಮತ್ತು ಮಸೀದಿಗಳ ಪಕ್ಕದಲ್ಲಿ ಲೈಸೆನ್ಸ್ ಕೊಡಬಾರದೆಂದು ಇದೆ. ಆದರೆ, ಬೆಂಗಳೂರಿನಲ್ಲಿ ಕಾನೂನಿಗೆ ವಿರುದ್ಧವಾಗಿ ಲೈಸೆನ್ಸ್ ಕೊಟ್ಟಂತಹ ನಿದರ್ಶನಗಳು ಬೇಕಾದಷ್ಟು ಇವೆ, ಈ ಒಂದು ವಿಷಯದಲ್ಲಿ ಸರ್ಕಾರ ತನಗೆ ಹೆಚ್ಚಿನ ಆದಾಯ ಬರುತ್ತದೆಂದು ಉತ್ತೇಜನಕೊಡುವುದು ಸರಿಯಲ್ಲ, ಕಾನೂನಿನ ಚೌಕಟ್ಟಿನಲ್ಲಿಯೇ ಕಟ್ಟಳೆ ಹಾಕಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಮಾನ್ಯ ಮಂತ್ರಿಯವರಾದ ವೀರಣ್ಣನವರು ಸಣ್ಣ ಉಳಿತಾಯದ ಬಗ್ಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಹಲ್ಲರ್ ಲೈಸೆನ್ಸ್ ಕೊಡಬೇಕಾದರೆ, ಬಸ್ ಲೈಸೆನ್ಸ್ ಕೊಡಬೇಕಾದರೆ ಸೀಮೆಂಟ್ ಲೈಸೆನ್ಸ್ ಕೊಡಬೇಕಾದರೆ, ಇಷ್ಟು ಉಳಿತಾಯ ಮಾಡಬೇಕೆಂಬುದು ಸಾರ್ವಜನಿಕರ ಮೇಲೆ ಒತ್ತಡ ತಂದು ವಸೂಲು ಮಾಡಿದ್ದಾರೆನ್ನುವ ಅಪಾದನೆ ಕೂಡ ಅವರ ಮೇಲಿದೆ. ದಯವಿಟ್ಟು ಆ ರೀತಿ ಒತ್ತಾಯದ ಮೂಲಕ ಸಣ್ಣ ಉಳಿತಾಯವನ್ನು ಮಾಡುವುದು ಬೇಡವೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ,

† ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೇ, ಪೋಲೀಸ್ ಇಲಾಖೆಗಾಗಿ ಈ ವರ್ಷ ೯೮ಕೋಟಿ ೭೦ ಲಕ್ಷ ರೂಪಾಯಿಗಳನ್ನು ಏನು ಇಟ್ಟಿದ್ದಾರೆ ಇದನ್ನು ವಿರೋಧಿಸಿ ಎರಡು ಮಾತು ಗಳನ್ನು ಹೇಳುತ್ತೇನೆ. ಪೋಲೀಸಿನವರನ್ನು ನಾವು ಎಷ್ಟು ಪ್ರೀತಿಯಿಂದ ಕಾಣುತ್ತೇವೆಯೋ ಅಷ್ಟೇ ಪ್ರೀತಿಯಿಂದ ಅವರೂ ಕೂಡ ಪ್ರಜೆಗಳನ್ನು ಕಂಡರೆ ಮಾತ್ರ ದೇಶದಲ್ಲಿ ಕಳ್ಳತನ ದರೋಡೆ, ಕಡಿಮೆ ಯಾಗುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಪೋಲೀಸಿನವರನ್ನು ಕಂಡರೆ ಜನತೆಯಲ್ಲಿ ಒಂದು ರೀತಿಯ ಭಯ ಉಂಟಾಗಿದೆ, ಸಾರ್ವಜನಿಕರು ಪೋಲೀಸಿನವರ ಜೊತೆಯಲ್ಲಿ ಸರಿಯಾಗಿ ಸಂಪರ್ಕ ಬೆಳೆಸುತ್ತಿಲ್ಲ, ಬೆಳೆಸುವುದಕ್ಕೆ ಪೋಲೀಸಿನವರು ಬಿಡುವುದಿಲ್ಲ. ದೂರು ಕೊಟ್ಟವರನ್ನೇ ಅರೆಸ್ಟ್ ಮಾಡತಕ್ಕಂಥ ಸಂದರ್ಭಗಳು ಜಾಸ್ತಿಯಾಗಿದೆ. ಪೋಲೀಸಿನವರು ಜನರ ಸೇವೆಗಾಗಿ ಬಂದವರೂ ಎಂಬುವನ್ನು ಯಾವತ್ತೂ ಮರೆಯಬಾರದು. ಜನರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಿ, ಖ್ಯಾತಿಯನ್ನು ಪಡೆಯತಕ್ಕಂಥ ಸ್ಫೂರ್ತಿ ಪೋಲೀಸಿನವರಲ್ಲಿ ಹುಟ್ಟಿಕೊಳ್ಳಬೇಕು. ಪೋಲೀಸ್ ಇಲಾಖೆಯಲ್ಲಿ ಯಾವ ಅಧಿಕಾರಿಗಳು ಪ್ರಾಮಾಣಿಕವಾಗಿ ದಕ್ಷ ರೀತಿಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂಥವರು ಕೆಲಸ ಬಿಟ್ಟು ಹೋಗಲಿ, ಅಂತಹವರಿಂದ ಸಮಾಜಕ್ಕೆ ಯಾವರೀತಿಯ ಅನುಕೂಲವೂ ಆಗುವುದಿಲ್ಲ. ಯಾವ ಕೇಸುಗಳಲ್ಲಿಯೂ ಪೋಲೀಸಿನವರು ಪ್ರಾಮಾಣಿಕರೀತಿಯಲ್ಲಿ ತನಿಖೆ ಮಾಡುವುದಿಲ್ಲ, ಶಿಫಾರಸ್ಸುಗಳ ಮೇಲೆ ತನಿಖೆ ಮಾಡುತ್ತಾರೆ ಕೋರ್ಟಿನಲ್ಲಿ ಬಿದ್ದು ಹೋಗುತ್ತದೆ, ಪ್ರಾಮಾಣಿಕವಾಗಿ ಕಾನೂನುಬದ್ಧವಾಗಿ ತನಿಖೆ ಮಾಡಿದರೆ, ಜನರಿಗೆ ಅದರಿಂದ ತುಂಬ ಅನುಕೂಲವಾಗುತ್ತದೆ. ದೂರು ಕೊಡುವುದಕ್ಕೆ ಹೋದವರನ್ನು ಮತ್ತೆ ಕರೆಸಿಕೊಂಡು ಅವರ ಮೂಲಕವೇ ಎಲ್ಲವನ್ನೂ ತಿಳಿದುಕೊಂಡು ಮುಂದುವರಿಯುತ್ತಾರೆ. ದೂರುಕೊಟ್ಟಕೂಡಲೇ ಸ್ಥಳಕ್ಕೆ ಹೋಗಿ ಪ್ರಾಮಾಣಿಕವಾಗಿ ತನಿಖೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡರೆ ಯಾವರೀತಿಯ ಅಶಾಂತಿಯೂ ರಾಜ್ಯದಲ್ಲಿರುವುದಿಲ್ಲ. ನಮ್ಮ ಜಿಲ್ಲೆಯ ಕೋತೂರು ಗ್ರಾಮದಲ್ಲಿ ಪೋಲೀಸಿನವರು ಮಾಡದ ಫೈರಿಂಗ್‌ನಲ್ಲಿ ಮೂರು ಜನ ಸತ್ತಿದ್ದಾರೆ. ಅದರ ಬಗ್ಗೆ ಸರಿಯಾಗಿ ತನಿಖೆ ಮಾಡಿಲ್ಲ. ಸ್ಥಳೀಯ ಸಬ್ ಇನ್ಸ್‌ಪೆಕ್ಟರ್‌ರವರು ಗುಂಡು ಹೊಡೆದರೂ ಎಂಟು ದಿನಗಳ ಕಾಲ ವಿಷಯವನ್ನು ಬಯಲು ಮಾಡಿಲ್ಲ ಅಂದರೆ, ಅದರಲ್ಲಿ ಪೋಲೀಸಿನವರ ಕೈವಾಡ ಇದೆಯೆಂದು ಗೊತ್ತಾಗುತ್ತದೆ.

ಇನ್ನು ಅಬ್ಕಾರಿ ಇಲಾಖೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಹಿಂದಿನ ಕಾಲದಲ್ಲಿ ಸೇಂದಿಯನ್ನು ಕುಡಿದು ಸಂತೋಷದಿಂದ ಜನ ಜೀವನ ಮಾಡುತ್ತಿದ್ದರು. ಇವತ್ತು ದೇವಸ್ಥಾನಗಳ, ಶಾಲೆಗಳ ಮಸೀದಿಗಳ ಪಕ್ಕದಲ್ಲಿ ಸಾರಾಯಿ ಅಂಗಡಿಗಳನ್ನು ತೆರೆಯುವುದಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ, ಅವನ್ನು ಕೂಡಲೇ ನಿಲ್ಲಿಸಬೇಕು.

ಇನ್ನು ಸಣ್ಣ ಉಳಿತಾಯವನ್ನು ಮಾನ್ಯ ಮಂತ್ರಿಯವರು ಚೆನ್ನಾಗಿ ಮಾಡಿದ್ದಾರೆ. ಪ್ರತಿಯೊಬ್ಬರೂ ಸಣ್ಣ ಉಳಿತಾಯದಲ್ಲಿ ಭಾಗವಹಿಸಿ, ರಾಜ್ಯದ ಅಭಿವೃದ್ಧಿ ಕಾರ್ಯಗಳಲ್ಲಿ ಮುಂದಿನ ಯೋಜನೆಗಳಿಗೆ ಹೆಚ್ಚಿನ ಹಣ ಒದಗಿಸುವುದಕ್ಕೆ ಅನುಕೂಲ ಮಾಡಿ ಕೊಡಬೇಕೆಂದು ಹೇಳಿ ನನಗೆ ಕಡಿಮೆ ಸಮಯಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಬಿ. ಶ್ಯಾನಪ್ಪ (ಶಹಬಾದ್).—ಮಾನ್ಯ ಅಧ್ಯಕ್ಷರೇ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಮ್ಮ ಮುಂದಿಟ್ಟಿದ್ದಾರೆ, ಇವತ್ತು ಸಣ್ಣ ಉಳಿತಾಯ ಯೋಜನೆಯಲ್ಲಿ ಸುಮಾರು ೨೦೦ ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಿದ್ದಾರೆ. ಬಂದೀಖಾನೆ ಇಲಾಖೆಗೆ ೧೨ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಪ್ರಜಾತಂತ್ರದ ಚೌಕಟ್ಟಿನಲ್ಲಿ ನಮ್ಮ ಸಂರಕ್ಷಣೆ, ಸಮಾಜದ ಸಂರಕ್ಷಣೆ, ಆಸ್ತಿ ಮತ್ತು ಜೀವನದ ಸಂರಕ್ಷಣೆ ಮಾಡುವುದು ಬಹಳ ಮುಖ್ಯವಾದುದು. ೧೭ನೇ ಶತಮಾನದಲ್ಲಿ ಜಾನ್ ಎನ್ನುವಂಥ ಒಬ್ಬ ಮೇಧಾವಿ ಒಂದು ಮಾತು ಹೇಳುತ್ತಾನೆ. ಸೋಷಿಯಲ್ ಕಂಟ್ರಾಕ್ಟ್ ಥಿಯೇರಿನಲ್ಲಿ ಹೀಗೆ ಹೇಳುತ್ತಾನೆ.

> "ನನ್ನ ಜೀವ, ನನ್ನ ಆಸ್ತಿ ಇವುಗಳ ರಕ್ಷಣೆಯ ಎಲ್ಲ ಭಾರವನ್ನು ಕೊಡುವುದಕ್ಕಾಗಿ ನಾನು ಸ್ಟೇಟ್ ಪವರನ್ನು ಒಪ್ಪಿದ್ದೇನೆ. ಅದೇ ಕಂಟ್ರಾಕ್ಟಿನಲ್ಲಿ ನಾನು ಸರಂಡರ್ ಆಗಿದ್ದೇನೆ. ಅದಕ್ಕಾಗಿ ಅಧಿಕಾರಗಳನ್ನು, ಕಛೇರಿಗಳನ್ನು, ಬಂದೂಕುಗಳನ್ನು ಹಣನ್ನು ಕೊಡುವುದಕ್ಕಾಗಿ ನೀವು ಎಷ್ಟು ಕೋಟಿ ಬೇಡಿಕೆಗಳನ್ನು ಇಟ್ಟರೂ ಅದನ್ನು ಮಂಜೂರು ಮಾಡುತ್ತೇನೆ. ಈ ಚೌಕಟ್ಟಿನಲ್ಲಿ ಇರಬೇಕು. ಅದನ್ನು ಮೀರಿದರೆ ನನ್ನನ್ನು ಅರೆಸ್ಟ್ ಮಾಡುವಂಥ ಅಧಿಕಾರ ಕೊಟ್ಟಿದ್ದೇನೆ" ಎನ್ನುವ ಮಾತನ್ನು ಹೇಳುತ್ತಾನೆ.

ಇವತ್ತು ದಿನ ಬೆಳಗಾದರೆ ಪತ್ರಿಕೆಗಳನ್ನು ನೋಡಿದರೆ ಒಂದಲ್ಲ ಒಂದು ಕಡೆ, ಡಕಾಯಿತಿ ಕೊಲೆಗಳು ನಡೆಯುವಂಥ ಸುದ್ದಿ ಬರುತ್ತದೆ. ಇತ್ತೀಚೆಗೆ ಡಕಾಯಿತಿಗಳು ಬಹಳ ವಿಕೋಪಕ್ಕೆ ಹೋಗಿದೆ. ಪ್ರತಿಯೊಬ್ಬ ಜನರನ್ನೂ ಸಂರಕ್ಷಣೆ ಮಾಡುವಂಥ ಸರ್ಕಾರ ೧೫ ಜನ ಡಕಾಯಿತರನ್ನು ಹಿಡಿಯಲಿಕ್ಕೆ ಹಿಂಗುಳಿದಿದ್ದಾರೆಂದರೆ ರಾಜ್ಯದ ಜನತೆಯನ್ನು ಒಂದು ರೀತಿಯ ಚಿಂತನೆಗೆ ಒಳಗು ಮಾಡಿದೆ. ಡಕಾಯಿತರನ್ನು ಆದಷ್ಟು ಬೇಗ ಆರೆಸ್ಟ್ ಮಾಡಬೇಕೆಂದು ಹೇಳುತ್ತೇನೆ. ಪೋಲೀಸಿನವರ ಕೆಲಸ ಬಹಳ ಮುಖ್ಯವಾಯಿತು. ಅವರಿಗೆ ಆಧುನಿಕ ಸಾಮಗ್ರಿಗಳನ್ನು ಒದಗಿಸಿಲ್ಲ. ಹಗಲುರಾತ್ರಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚು ಮಾಡಬೇಕು. ಪ್ರಧಾನಮಂತ್ರಿಯವರು ೨೧ನೇ ಶತಮಾನಕ್ಕೆ ಹೋಗಬೇಕೆಂದು ಹೇಳುತ್ತಿರುವಾಗ್ಗ ಬೆಂಗಳೂರಿನಲ್ಲಿ ನಡೆಯುವ ಡಕಾಯಿತಿಯನ್ನು ತಿಳಿಯುವುದಕ್ಕಾಗಿಲ್ಲವೆಂದರೆ ಹೇಗೆ ? ೨೧ನೇ ಶತಮಾನಕ್ಕೆ ಹೋಗುವುದು ಹೇಗೆ ? ಪೋಲೀಸ್ ಇಲಾಖೆಯ ಆಡಳಿತದಲ್ಲಿ ಅದರಲ್ಲಿಯೂ ಸರ್ಕಲ್ ಇನ್ಸ್ಪೆಕ್ಟರ್ ಮಟ್ಟದಿಂದ ಕೆಳಗೆ ಇರತಕ್ಕ ಅಧಿಕಾರಿಗಳು ಜನಗಳೊಂದಿಗೆ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬ ಬಗ್ಗೆ ಸ್ಪಷ್ಟ ತಿಳುವಳಿಕೆ ನೀಡುವುದು ಒಳ್ಳೆಯದು. ಕೆಲವು ಪೋಲೀಸ್ ಅಧಿಕಾರಿಗಳು ಬಳಸುವ ಭಾಷೆಯನ್ನು ಕೇಳಿದರೆ ನಾಚಿಕೆಯಾಗುತ್ತದೆ ಯಾರೊಂದಿಗೆ ಯಾವ ರೀತಿ ಮಾತನಾಡಬೇಕೆಂಬುದೇ ಅವರಿಗೆ ಗೊತ್ತಿರುವುದಿಲ್ಲ. ಮೊನ್ನೆ ಲಾಯರ್ ರಾಮಯ್ಯನವರ ಮೇಲೆ, ವಿಧಾನ ಮಂಡಲದ ನೌಕರ ಸೆಬಾಸ್ಟೀನ್ ಮೇಲೆ ನಟರಾಜ ಎಂಬ ಪೋಲೀಸ್ ಅಧಿಕಾರಿ ಕೈ ಮಾಡಿದ್ದಾರೆ.

ನಟರಾಜ್ ಎಂಬುವರು ಸೆಬಾಸ್ಟೀನರನ್ನು ಸಂಜೆವರೆಗೆ ಹಿಡಿದು ಹೊಡೆದು ಬಿಟ್ಟಿದ್ದಾರೆ. ಈ ಮನೆ ಸುತ್ತಲೇ heart of the city ಯಲ್ಲೇ ಈ ಪ್ರಕಾರ ನಡೆದರೆ What is the guarantee ? ಆ ಗ್ಯಾರಂಟಿ ಕೊಡದಿದ್ದರೆ ಡಿಮ್ಯಾಂಡ್ ಇಟ್ಟು ನಮಗೆ ಇಷ್ಟು ಹಣ ಕೊಡಿ, ಅಷ್ಟು ಹಣ ಕೊಡಿ ಎಂದು ಭಾಷಣ ಮಾಡಿದರೆ, ನೌಕರ ಸಿಬ್ಬಂದಿಗೆ ಸಂಬಳಕ್ಕೆಂದು ಕೇಳುವುದಕ್ಕೆ Govt. machinery will function without money. We have to give sanction. We are bound to give. ಕೊಟ್ಟಾಗ ನಾವು ಕೇಳುತ್ತೇವೆ. ಸ್ವಾಮಿ, ಇಷ್ಟೊಂದು ಹಣ ಕೊಡುತ್ತೀವೆ ನಮ್ಮ ಸಂಸಾರದ ಪರಿಸ್ಥಿತಿ ಏನು ಜೀವದ ಪರಿಸ್ಥಿತಿ ಏನು ಇವಕ್ಕೆಲ್ಲ ಪ್ರೊಟೆಕ್ಷನ್ ಕೊಡುವುದಕ್ಕೆ ನೀವು ತಯಾರಿದ್ದೀರಾ ಎಂದು ಗೃಹಮಂತ್ರಿಗಳನ್ನು ಕೇಳಿದರೆ ಉತ್ತರಿಸಲು ಗೃಹಮಂತ್ರಿಗಳು ತಯಾರಿದ್ದಾರೆಯೋ ? I doubt about it ಈ ಪರಿಸ್ಥಿತಿ ಇದ್ದರೆ ನಾವು ಹೇಗೆ ಗ್ರಾಂಟ್ ಕೊಡುವುದು ? ಸೋ ಅದಕ್ಕಾಗಿ ಈಗಾಗಲೇ ಕೆಲವು ಪೋಲೀಸ್ ಅಧಿಕಾರಿಗಳ ಬಗ್ಗೆ ನಾನು ದೂರೂ ಕೊಟ್ಟಿದ್ದೇನೆ Indagi ಸಬ್ ಇನ್ಸ್ಪೆಕ್ಟರ್ ಜನವರಿಯಲ್ಲಿ ಯಾರೋ ತಮ್ಮ ಜೀಪನ್ನು ತೆಗೆದುಕೊಂಡು ಬಿಟ್ಟಿದ್ದಾರೆ ಎಂದು ಹೇಳಿದರೆ ರೊಕ್ಕ ಕೊಡು, ಇಲ್ಲವಿದ್ದರೆ ಜೀಪ್ ನಿಲ್ಲಿಸಿ ಮಾರುದಿನದೇ ಕೇಸ್ ರಿಜಿಸ್ಟರ್ ಮಾಡಿದರು. irregularities ಮಟ್ಕಾ, ಜೂಜು ಎಲ್ಲ ನಡೆದೇ ಇದೆ. because this is the society in which they have to exist, ಯಾವುದೂ ನಿಂತಿಲ್ಲ. ಬಂಡವಾಳಶಾಹಿಯ ಸಮಾಜದ ಲಕ್ಷಣ ಏನಿದೆ ಅದು ನೀವು ಎಷ್ಟೇ ಮದ್ದು ಅರೆದರೂ ಬಿಡುದಕ್ಕೆ ಸಾಧ್ಯವಿಲ್ಲ. ಕಾಂಗ್ರೆಸ್‌ನಲ್ಲೂ ಇತ್ತು ಈಗಲೂ ಇದೆ. ನಮ್ಮ ಮುಖ್ಯಮಂತ್ರಿಗಳೇನೋ ಸ್ವಲ್ಪ ಕಡಿಮೆ ಮಾಡುತ್ತಿದ್ದೇವೆಂದು ಹೇಳುತ್ತಾರೆ.

ಅಧ್ಯಕ್ಷರು.—ಶಾಣಪ್ಪನವರೇ ವೇಳೆ ಆಯಿತು.

ಶ್ರೀ ಕೆ. ಬಿ. ಶಾಣಪ್ಪ.—ಅಧ್ಯಕ್ಷರೇ. ಒಂದು ತಿಂಗಳಿನಿಂದಲೂ ನಾನು ಮಾತನಾಡೇ ಇಲ್ಲ. ಅಧ್ಯಕ್ಷರೇ, ಗೃಹ ಇಲಾಖೆಯ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ೧೯೮೫ರಲ್ಲಿ ರಾಜ್ಯ ಪೋಲಿಸ್ ದಳ ಸಮರ್ಥ ರೀತಿಯಲ್ಲಿ ಕೆಲಸವನ್ನು ನಿರ್ವಹಿಸಿದೆ ಎಂದು. ಕೊನೆಯಲ್ಲಿ ಚಾರ್ಟ್ ಕೊಟ್ಟಿದ್ದೀರಿ. ಅವರಲ್ಲಿ ೧೯೮೫ರಲ್ಲಿ ೧೯೮೪ಕ್ಕಿಂತ ಹೆಚ್ಚಿನ ಮರ್ಡರ್ಸ್, ಡಕಾಯಿತಿ, ಹಲ್ಲೆ ಪ್ರಕರಣಗಳಾಗಿವೆ. ಇದರಿಂದ ಹೇಗೆ ಎಫಿಷಿಯಂಟಾಗುತ್ತದೆ. ೧೯೮೪ರಲ್ಲಿ ಸಾವಿರ ಕೇಸ್ ಇದ್ದರೆ ೧೯೮೫ರಲ್ಲಿ ೧೯೦೦ಕ್ಕೆ ಬಂದಿದೆ ಎಂದರೆ ಎಫಿಷಿಯಂಟ್ ಆಗಬಹುದು. ಇಲ್ಲದಿದ್ದರೆ ಹೇಗೆ ? ರಾಜ್ಯದಲ್ಲಿ ೪೫ ಸಾವಿರ ಪೋಲಿಸರು ಇದ್ದಾರೆ. ಆದರೂ ಏನು ಸುಧಾರಿಸಿದೆ ? ಈ ಪೋಲಿಸರ ಹಣೆಬರಹ ಬಡತನದ ಬೇಗೆಯಲ್ಲಿ ಬೇಯುವುದಷ್ಟೇ. ಪಾಪ ಅವರು ತಾನೇ ಕೆಳಗಿನ ವರ್ಗದಿಂದ ಬಂದವರು ಅವರ ಸಾಮಾಜಿಕ ಸ್ಥಿತಿ-ಗತಿ, ಪೇಮೆಂಟ್ ಸಾಲುವುದಿಲ್ಲ, ಟ್ರಾನ್ಸ್‌ಫರ್ ದು ಗೊತ್ತಿಲ್ಲ, ಇವೆಲ್ಲ ತಲೇಲಿಟ್ಟುಕೊಂಡು ಅವರು ಕೊಲೆಗಾರರ ಹಿಂದೆ,

ಡಕಾಯಿತರ ಹಿಂದೆ ಏನು ಬಿದ್ದಾರು, ಅವನ ಮೆಂಟಲ್ ಟೆನ್‌ಷನ್ ಅವನಿಗೆ. ಸಮಾಧಾನದ ವಾತಾವರಣ ಇಲ್ಲ, ಮನಸ್ಸಿಗೆ ನೆಮ್ಮದಿಯೂ ಹಣ ಇಲ್ಲ ೧೯೮೦-೮೧ರಲ್ಲಿ ಮನೆಗೆ ಲೋನ್ ಕೊಡಬೇಕಾದ್ದು ಇನ್ನೂ ಪೆಂಡಿಂಗ್ ಇದೆ. ಕೊಟ್ಟಿಲ್ಲ ಕೆಲವರು ಸಿ ಒ ಡಿ.ಯಲ್ಲಿದ್ದಾರೆ. ಇನ್ನು ಕೆಲವರು ವಿಜಿಲೆನ್ಸ್‌ನಲ್ಲಿದ್ದಾರೆ. ಕೆಲವರು ೨೦ ವರ್ಷದಿಂದ ಸಿಟಿಯಲ್ಲೇ ಇದ್ದಾರೆ. ದಕ್ಷ ಆಡಳಿತ ನಡೆಸುವುದಕ್ಕೆ ಕೆಲವರನ್ನು ಡಿಸ್ಟರ್ಬ್ ಮಾಡಲೇಬೇಕು. ಶ್ರೀ ರಾಚಯ್ಯನವರು ಬಂದ ನಂತರ He has given justice to every part of the caste. ಆದರೂ ಕೆಲವರು ಅಸಮಾಧಾನದಿಂದಲೇ ಇದ್ದಾರೆ. ದಯವಿಟ್ಟು ತಾವು ಈ ಸಿಟಿಯಲ್ಲೇ ಕೂತಿರುವ ಆಫೀಸರ್‌ಗಳನ್ನು ಎಲಿಮಿನೇಟ್ ಮಾಡಬೇಕು. ಆಗ ಮಾತ್ರ ಒಳ್ಳೆಯ ಆಡಳಿತ ಕೊಡಲು ಸಾಧ್ಯ.

ಕೊನೆಯದಾಗಿ, ಅಬ್ಕಾರಿ ಇಲಾಖೆ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಈ ಜನತಾ ಪಕ್ಷ ಅಧಿಕಾರಕ್ಕೆ ಬಂದ ನಂತರ ಕ್ಲಾಸ್ ಒನ್ ಮತ್ತು ಕ್ಲಾಸ್ ೨ ಪೋಸ್ಟ್‌ಗಳು ಜಾಸ್ತಿಯಾಯಿತು. ಇದನ್ನು ನೀವೂ ಒಪ್ಪುತ್ತೀರಿ. ಆದರೆ ಷಾಪ್‌ಗಳನ್ನು ಕೊಡುವುದಕ್ಕೆ ಲೈಸೆನ್ಸ್‌ಗೆ ರೆವಿನ್ಯೂ ಡಿ.ಸಿ.ಗಳೇ ಆರ್ಡರ್ ಮಾಡಬೇಕು. ನನ್ನದು ಒಂದು ಸಜೆಷನ್ ಇದೆ. ರೆವಿನ್ಯೂ ಡಿಪಾರ್ಟ್‌ಮೆಂಟಿನ ಡಿ. ಸಿ.ಗಳನ್ನು ನೀವು ಡಿಸ್ಟರ್ಬ್ ಮಾಡದೆ ಎಕ್ಸೈಸ್ ಇಲಾಖೆಯ ವ್ಯವಹಾರ ನೋಡಿಕೊಳ್ಳಲೆಂದೇ ಒಬ್ಬ ಸ್ಪೆಷಲ್ ಡಿ. ಸಿ. ಮಾಡಿದರೆ ತುಂಬಾ ಒಳ್ಳೆಯದು.

ಇನ್ನು ವೀರಣ್ಣನವರ ಇಲಾಖೆ ಬಗ್ಗೆ ಹೇಳುವುದಾದರೆ, ಅವರು ಒಳ್ಳೆಯ ರೀತಿಯ ದಕ್ಷ ಕೆಲಸವನ್ನು ನಡೆಸಿದ್ದಾರೆ. ಅವರು ಕೋಟ್ಯಾವಧಿ ರೂಪಾಯಿಗಳನ್ನು ಸರ್ಕಾರಕ್ಕೆ ಇತ್ತಿದ್ದಾರೆ. ಕನ್ನಡದ ಕವಿಯೊಬ್ಬ ಹೇಳುವಂತೆ "ಉಡುರಾಜ ಕಳೆಗುಂದಿ ಪೆರ್ಚದಿಹನೇ" ಎಂಬಂತೆ ಬಹಳ ದಕ್ಷರಾದ ವೀರಣ್ಣನವರು ಇವತ್ತಲ್ಲ ನಾಳೆ ಮುಂದೆ ಬರುತ್ತಾರೆ. ಮುಂದೆಯೂ ಇದೇ ರೀತಿ ಕೆಲಸ ಮಾಡಿದರೆ ಇಂದಲ್ಲ ನಾಳೆ ನೀವು ಚೀಫ್ ಮಿನಿಸ್ಟರ್ ಜಾಗಕ್ಕೇ ಹೋಗುವ ವಿಶ್ವಾಸ ಇದೆ. ಆದಷ್ಟು ಶೀಘ್ರ ಒಳ್ಳೆಯ ಕೆಲಸ ಮಾಡಿ ಎಂದು ತಮಗೆ ಶಹಭಾಷ್‌ಗಿರಿ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರು ಮಿಟ್ಕಲ್).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಧರ್ಮಸಿಂಗರು ಗೃಹ ಇಲಾಖೆ ಮತ್ತು ವೆಲ್‌ಫೇರ್ ಬೋರ್ಡ್, ಅದೇ ರೀತಿ ಎಕ್ಸೈಸ್-ಹೀಗೆ ಐದಾರು ಡಿಪಾರ್ಟ್‌ಮೆಂಟ್ ಮೇಲೆ ಭಾಷಣ ಮಾಡಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಹೆಚ್ಚು ಮಾತನಾಡುವುದಿಲ್ಲ. ಈಗಾಗಲೇ ತಾವು ಹೇಳಿದ ಹಾಗೆ ಬೇರೆಯವರು ಪ್ರಸ್ತಾಪ ಮಾಡದಿರುವ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಅದರಲ್ಲಿ ವಿಶೇಷವಾಗಿ ಪೋಲಿಸ್ ಇಲಾಖೆ. ಇದು ಎಲ್ಲರಿಗೆ ರಕ್ಷಣೆ ಕೊಡಬೇಕಾದ ಇಲಾಖೆ. ಆದರಲ್ಲಿ ಹೆಚ್ಚಿನ ನಂಬಿಕೆಯನ್ನು ಬಡವರು ಇಟ್ಟಿದ್ದಾರೆ. ಏಕೆಂದರೆ, ಯಾವುದೇ ಅನ್ಯಾಯವಾದರೆ ಅವರಿಗೆ ರಕ್ಷಣೆ ಸಿಗಬೇಕೆನ್ನುವ ದೃಷ್ಟಿಯಿಂದ ಇರುವ ಇಲಾಖೆ ಎಂದರೆ ಪೋಲಿಸ್ ಇಲಾಖೆ. ಯಾವುದೇ ಹಳ್ಳಿಯಲ್ಲಾಗಲೀ ಅಥವಾ ಪಟ್ಟಣದಲ್ಲಾಗಲೀ ಗಲಭೆಯಾದರೆ ತಕ್ಷಣ ಜನ ಭಾವಿಸತಕ್ಕದ್ದು ಪೋಲಿಸ್ ಇಲಾಖೆ ಕಡೆಗೆ. ಅಂದರೆ ಪೋಲಿಸ್ ಇಲಾಖೆ ಬಹಳ ದಕ್ಷತೆಯಿಂದ ಕೆಲಸ ನಿರ್ವಹಿಸಬೇಕಾಗುತ್ತದೆ. ನಾನು ಹೇಳುತ್ತಿರುವುದು ಕರ್ನಾಟಕದ ಎಲ್ಲಾ ಪೋಲಿಸರೂ ಇನ್‌ಎಫಿಷಿಯೆಂಟಾಗಿದ್ದಾರೆಂದು ಅಲ್ಲ. ಅವರು ಒಳ್ಳೆಯವರೂ, ಕೆಲಸ ಮಾಡುವ ಸಾಮರ್ಥ್ಯದವರೂ ಇದ್ದಾರೆ. ಆದರೆ ಅವರಿಂದ ಯಾವ ರೀತಿ ಕೆಲಸ ತೆಗೆದುಕೊಳ್ಳಬೇಕೆಂಬುದು ಮುಖ್ಯ. ಕಾನೂನು ಎಷ್ಟು ಒಳ್ಳೆಯದಿದ್ದರೂ ಅದನ್ನು ಚಲಾಯಿಸುವ ಜನ ಸಮರ್ಥರಿರಲಿಲ್ಲ ಎಂದರೆ ಪ್ರಯೋಜನ ಇಲ್ಲ. ಇಲಾಖೆಯಲ್ಲಿ ಇವತ್ತು ಬಹಳ ಅಧಿಕಾರಿಗಳಿದ್ದರೂ ಕೂಡ ಅವರ ಉಪಯೋಗ ಮಾಡಿಕೊಂಡು ಸಮಾಜದಲ್ಲಿ ಭದ್ರತೆ ಮತ್ತು ರಕ್ಷಣೆ ಉಂಟು ಮಾಡಬೇಕೆನ್ನುವ ಕಡೆ ಹೆಚ್ಚಿನ ಗಮನವನ್ನು ಮಾನ್ಯ ರಾಚಯ್ಯನವರು ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಏನಾಗಿದೆ ಎಂದರೆ ಅವರ ಕೈ ಕಟ್ಟಿ ಹಾಕಿದ ಹಾಗೆ ಕಾಣುತ್ತದೆ. ಏಕೆಂದರೆ ಪದೇ ಪದೇ ನಾನು ಡಕಾಯಿತರನ್ನು ಇನ್ನೊಂದು ವಾರದಲ್ಲಿ ಹಿಡಿಯುತ್ತೇನೆ ಎಂದು ಹೇಳಿರುವುದು ಪೇಪರ್‌ನಲ್ಲಿ ಬರುತ್ತಲೇ ಇದೆ. ಡಕಾಯಿತಿ ಬಗ್ಗೆ, ಮರ್ಡರ್ಸ್ ಬಗ್ಗೆ ನಿಲುವಳಿ ಸೂಚನೆ, ಗಮನ ಸೆಳೆಯುವ ಸೂಚನೆಗಳನ್ನು ಇಲ್ಲೂ ತರುತ್ತಲೇ ಇದೆ. ಆಗೆಲ್ಲ ಮಾನ್ಯ ರಾಚಯ್ಯನವರು ಮೇಲಿನಂತೆ ಹೇಳುತ್ತಲೇ ಇರುತ್ತಾರೆ. ನಾನು ಕೇಳುವುದು ಇವರು ಕಠಿಣವಾದ ಕ್ರಮ ತೆಗದುಕೊಳ್ಳುತ್ತಿಲ್ಲ. ಎಂದು ಇದರ ಹಿನ್ನೆಲೆ ಏನು ? ಶಿವಮೊಗ್ಗದಲ್ಲಿ, ಮಂಗಳೂರು ಕಡೆಗಳಲ್ಲಿ ಕೊಲೆ ಡಕಾಯಿತಿಗಳಾಗಿವೆ. ಇಲ್ಲಿ ಆ

ಬಗ್ಗೆ ಚರ್ಚೆಗೆ ಬಂದಾಗ ರಾಜಕೀಯ ಹಸ್ತಕ್ಷೇಪ ಇದೆ ಎಂದೂ, ಸಮಯ ಬಂದಾಗ ಅದನ್ನು ಬಿಚ್ಚುತ್ತೇನೆ ಬಿಚ್ಚುತ್ತೇನೆ, ಎಂದೂ ಹೇಳುತ್ತಿರುತ್ತಾರೆ.

೫—೩೦ ಪಿ. ಎಂ.

ಇನ್ನೂ ಕೂಡಾ ಆ ಬಗ್ಗೆ ಪತ್ತೆಹಚ್ಚಿಲ್ಲ. ಅವರಿಂದ ನಿಮಗೆ ಏನಾದರೂ ಭಯ ಇದೆಯೇ? ಈ ಬಗ್ಗೆ ಏನಾದರೂ ತಾಪತ್ರಯ ಇದ್ದರೆ ಸ್ಪಷ್ಟವಾಗಿ ಹೇಳಿ. ತಾವು ಇದೇ ರೀತಿ ತಳ್ಳಿಕೊಂಡು ಹೋದರೆ ನಾಳೆಯ ದಿನ ನಿಮ್ಮ ಬಗ್ಗೆ ಜನ ವಿಶ್ವಾಸ ಇಡುವುದಿಲ್ಲ. ಈ ರಾಜ್ಯದ ಕಾಂಗ್ರೆಸ್ ಅಧ್ಯಕ್ಷರನ್ನು ಹೊಡೆದವರ ಬಗ್ಗೆ ಸರ್ಕಾರ ಏನು ಮಾಡಲಿಲ್ಲ. ನಾಳೆ ದಿವಸ ಯಾರಾದರೂ ರಾಜಯ್ಯನವರಿಗೆ ಹೊಡೆದರೂ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಇದೇರೀತಿ ನಡೆದರೆ ನಾಳೆ ದಿವಸ ಪೋಲೀಸ್ ಠಾಣೆಗೆ ಹೋಗಲೂ ಸಹಾ ಜನ ಭಯ ಪಡುತ್ತಾರೆ. ಇದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು, ಯಾದಗಿರ್ ಸಬ್ ಡಿವಿಜನ್‌ನಲ್ಲಿ ಏನು ನಡೆಯುತ್ತಿದೆ. ಅದನ್ನು, ಅಲ್ಲಿ ನಡೆಯುತ್ತಿರುವ ದಬ್ಬಾಳಿಕೆ ಬಗ್ಗೆ ನಾನು ಬಹಳ ಸಾರಿ ಹೇಳಿದ್ದೇನೆ. ಅಲ್ಲಿ ಶಾಸಕರ ಪ್ರಭಾವ ಇರಬಹುದು, ಪ್ರಭಾವೀ ವ್ಯಕ್ತಿಗಳ ಕೈವಾಡ ಇರಬಹುದು, ಅಥವಾ ನಿಮ್ಮ ಪಕ್ಷದವರು ಇರಬಹುದು ಅಥವಾ ನಮ್ಮ ಪಕ್ಷವವರು ಇರಬಹುದು, ಆದರೆ ನೀವು ಇದಕ್ಕೆಲ್ಲಾ ಮಣಿಯಬಾರದು. ಇದಕ್ಕೆಲ್ಲಾ ತಾವು ಮಣಿದರೆ ಆ ಜನರಿಗೆ ರಕ್ಷಣೆ ಹೇಗೆ ಸಿಗುತ್ತದೆ? ಯಾವ ಜನ ರಕ್ಷಣೆಗೋಸ್ಕರ ನಿಮ್ಮ ಕಡೆ ನಿರೀಕ್ಷಣೆ ಮಾಡುತ್ತಿದ್ದಾರೋ ಆ ಜನರಿಗೆ ರಕ್ಷಣೆ ಕೊಡದೇ ಯಾರು ಪ್ರಭಾವಿಗಳು ಇರುತ್ತಾರೋ ಯಾರು ತಮ್ಮ ಪ್ರಭಾವ ಬೀರಿ ಬೇಕಾದ ಕಡೆ ವರ್ಗಾವಣೆ ಮಾಡಿಕೊಂಡು ತಮಗೆ ಬೇಕಾದವರನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಆಯಾಯ ಮತಕ್ಷೇತ್ರಗಳಲ್ಲಿ ಅನ್ಯಾಯ, ಅತ್ಯಾಚಾರ ನಡೆಯದೇ ಮತ್ತೇನಾಗುತ್ತದೆ? ಅಧ್ಯಕ್ಷರೇ ನನ್ನ ಕ್ಷೇತ್ರದಲ್ಲಿ ೧೯೮೪–೮೫ರಲ್ಲಿ ಸುಮಾರು ಶಹಪುರ್, ಸುರಪುರ್ ಹಾಗೂ ಯಾದಗಿರ್‌ಗೆ ಸಂಬಂಧಪಟ್ಟ ಹಾಗೆ ಒಬ್ಬ ಡಿವೈ. ಎಸ್. ಪಿ. ಇದ್ದಾರೆ. ಅವರ ಜ್ಯೂರಿಸ್‌ಡಿಕ್ಷನ್‌ನಲ್ಲಿ ಸುಮಾರು ೨೩ ಕೊಲೆಗಳು ಆಗಿವೆ. ಈ ೩ ತಾಲ್ಲೂಕುಗಳಲ್ಲಿ ಇಷ್ಟು ಆಗಿದೆ. ಇದಕ್ಕೆ ಕಾರಣ ಏನು? ಯಾರನ್ನು ಯಾರು ಹೊಡೆದರೂ ಯಾರೂ ಕೇಳುವುದಿಲ್ಲವೆನ್ನುವ ಒಂದು ವಾತಾವರಣ ತಯಾರಾದ ಮೇಲೆ ಎಲ್ಲರೂ ಅದೇ ರೀತಿಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಟೆನೆಂಟ್ ಕೇಸ್ ಇರಬಹುದು, ಮನೆ ಜಗಳ ಇರಬಹುದು, ಜಾತಿ ಜಗಳ ಇರಬಹುದು, ಯಾವುದೇ ಇರಬಹುದು ಎಲ್ಲದರ ಮೇಲೆ ನಿಗಾವಹಿಸಬೇಕಾಗಿರುತ್ತದೆ. ಇವತ್ತು ಸೆನ್‌ಸಿಟಿವ್ ಏರಿಯಾಗಳ ಕಡೆ ಪೋಸ್ಟಿಂಗ್ಸ್ ಮಾಡುವಾಗ ಪ್ರೊಬೆಷನರ್ಸ್‌ನ್ನು, ಡೈರೆಕ್ಟ್ ರೆಕ್ರೂಟೀಸನ್ನು ಹಾಕತಕ್ಕದ್ದು ಒಳ್ಳೆಯದು. ಅವರಿಗೆ ಆ ಪಕ್ಷ ಈ ಪಕ್ಷ ಎನ್ನುವುದು ಇರುವುದಿಲ್ಲ. ಮೊದಲನೆಯ ಸಲ ಒಳ್ಳೆಯ ಕೆಲಸವನ್ನು ಮಾಡಿ ಹೆಸರು ಸಂಪಾದನೆ ಮಾಡಬೇಕೆನ್ನುವ ಬಗ್ಗೆ ಲಕ್ಷ್ಯ ಇರುತ್ತದೆ, ಪ್ರಾರಂಭದಲ್ಲಿ ಅವರಿಗೆ ಹಣದ ಆಸೆ ಕಡಿಮೆ ಇರುತ್ತದೆ. ಅಂತಹ ಅಧಿಕಾರಿಗಳನ್ನು ಹಾಕಿ ಎಂದರೆ, ಇವರು ಅದೇ ಜಾತಿಯ ಡಿವೈ. ಎಸ್. ಪಿ. ಅದೇ ಜಾತಿಯ ಸರ್ಕಲ್ ಇನ್ಸ್‌ಪೆಕ್ಟರ್, ಅದೇ ಜಾತಿಯ ಸಬ್ ಇನ್ಸ್‌ಪೆಕ್ಟರ್, ಪ್ರಭಾವ ಬೀರುವವರೂ ಅದೇ ಜಾತಿಯವರೇ. ಕಳೆದ ಎರಡು ವರ್ಷಗಳಿಂದ ಹೇಳಿಕೊಂಡು ಬಂದಿದ್ದೇನೆ, ಇದುವರೆವಿಗೂ ತೆಗೆದಿಲ್ಲ. ಎಂದರೆ ಈ ಬಗ್ಗೆ ತಾವು ಹೆದರಿಕೊಳ್ಳುತ್ತಿದ್ದೀರೆಂದು ನಾವು ಹೇಳುವುದಿಲ್ಲ. ಒಂದು ಕಡೆ ನಿಷ್ಪಕ್ಷಪಾತವಾದ ಕೆಲಸ ಮಾಡುತ್ತೇವೆ, ಜನರಿಗೆ ರಕ್ಷಣೆ ಮಾಡುವುದಕ್ಕೋಸ್ಕರ ಒಳ್ಳೆಯ ಅಧಿಕಾರಿಗಳನ್ನು ಹಾಕಿದ್ದೇವೆ ಎಂದು ಹೇಳುತ್ತೀರಿ. ಆದರೆ ನಾನು ಒಂದು ಸಲ ಅಲ್ಲ, ಹತ್ತು ಸಲ ಬರೆದಿದ್ದೇನೆ. ನಾನು ಈ ಬಗ್ಗೆ ಐ ಜಿ.ಪಿ. ಯವರಿಗೆ ಹೇಳಿದ್ದೇನೆ. ಎಸ್. ಪಿ. ಯವರಿಗೆ ಹೇಳಿದ್ದೇನೆ. ಎಸ್. ಪಿ. ಯವರು ಪಾಪ, ನಾನು ಏನು ಮಾಡಲಿ ಪತ್ರ ಬರೆದಿದ್ದೇನೆ, ಒಂದೇ ಜಾತಿಯವರು ಇರುವುದು ಬೇಡ, ಈ ಸಿಸ್ಟಮ್ ಬೇಡ, ಒಂದೇ ಜಾತಿಯವರು ಇದ್ದರೆ ತೊಂದರೆ ಎಂದು ಹೇಳಿದರೂ ಕೂಡಾ ಇಲ್ಲಿಯವರೆಗೆ ತೆಗೆದಿಲ್ಲ ನಾನೇನು ಮಾಡುವುದು ಎಂದು ಅವರು ನನ್ನ ಮುಂದೆ ಹೇಳಿದರು. ಈ ಬಗ್ಗೆ ಡಿ. ಐ. ಜಿ. ಅವರೂ ಕೂಡಾ ರೆಕಮಂಡೇಷನ್ ಮಾಡಿದ್ದಾರೆ. ಆದರೂ ಕೂಡಾ ನೀವು ಪ್ರಭಾವಕ್ಕೆ ಒಳಗಾದಂತಹ ಅಧಿಕಾರಿಗಳನ್ನು ಇಟ್ಟುಕೊಂಡಿದ್ದೀರಾ? ಅವರೇನೂ ನಿಮ್ಮ ಬೀಗರಲ್ಲ ನೆಂಟರಲ್ಲ, ನಿಮ್ಮ ಸಂಬಂಧೀಕರೂ ಅಲ್ಲ, ಅವರು ನಿಮ್ಮ ಪಕ್ಷದ ಸಹಕಾರಿಗಳೆಂದೇನಾದರೂ ಇಟ್ಟುಕೊಂಡಿದ್ದೀದೇನೋ ಎನ್ನುವ ಸಂಶಯ ನಮಗೆ ಬರುತ್ತದೆ, ಈ ರೀತಿ ವರ್ತನೆಯಾದರೆ ಏನು ಪ್ರಯೋಜನ? ನಮ್ಮ ಹಿಂದುಳಿದ ಜಿಲ್ಲೆಯಲ್ಲಿ ಕೆಲವು ಟೆನೆಂಟ್ ಕೇಸ್‌ಗಳಲ್ಲಿ ದಬ್ಬಾಳಿಕೆ ಆಗತಕ್ಕ ಪ್ರಸಂಗ ಇರುತ್ತದೆ. ಅಂತಹ ಏರಿಯಾದಲ್ಲಿ ಈ ರೀತಿ ಸರ್ಕಾರದ ವರ್ತನೆ ಇದ್ದರೆ ಇನ್ನೇನನ್ನು ನಾವು ಅಪೇಕ್ಷೆ ಮಾಡಬಹುದು? ಎರಡನೆಯದಾಗಿ, ತಾವು ಬಂದಮೇಲೆ ಅನೇಕ

ಸಲ ಈ ಸದನದಲ್ಲಿ ತಾವು ಅಂಕಿಸಂಖ್ಯೆಗಳನ್ನು ಕೊಟ್ಟಿರಿ. ಹಾಗೂ ಮಾನ್ಯ ಮುಖ್ಯಮಂತ್ರಿಗಳವರೂ ಹೇಳಿದರು. ನಮ್ಮ ಸರ್ಕಾರ ಆಡಳಿತ ವಹಿಸಿಕೊಂಡ ಮೇಲೆ ವರ್ಷದಿಂದ ವರ್ಷಕ್ಕೆ ಕ್ರೈಮ್ಸ್ ಕಡಿಮೆ ಆಗುತ್ತಿದೆ ಎಂದು ತಮಗೆ ಬೇಕಾದಂತಹ ಅಂಕಿಸಂಖ್ಯೆಗಳನ್ನು ಓದಿ ಸುಮ್ಮನೆ ಕುಳಿತರು. ತಾವು ಕೊಟ್ಟಿರತಕ್ಕ ವಾರ್ಷಿಕ ವರದಿಯ ಪುಟ ೩೩ರಲ್ಲಿ ತಾವು ಏನು ಕೊಟ್ಟಿದ್ದೀರಿ ಎಂಬುದನ್ನೇ ನೋಡಿ ಸ್ವಾಮಿ. ಒಟ್ಟು ಕ್ರೈಮ್ಸ್ ೧೯೮೪ರಲ್ಲಿ ೭೮,೪೮೪ ಇದ್ದರೆ ೧೯೮೫ರಲ್ಲಿ ೮೨,೬೧೧ ಆಗಿದೆ. ಎಂದರೆ ಜಾಸ್ತಿ ಇದೆಯೋ ಕಡಿಮೆ ಆಯಿತೋ. ನೀವು ಕ್ರೈಮ್ಸ್ ಬಹಳ ಕಡಿಮೆ ಆಗಿದೆ ಎಂದು ಹೇಳುತ್ತೀರಿ. ಆದರೆ ನೀವು ಕೊಟ್ಟಿರತಕ್ಕ ವರದಿಯಲ್ಲೇ ಇದು ಜಾಸ್ತಿಯಾಗಿದೆ ಎಂಬುದು ಗೊತ್ತಾಗುತ್ತದೆ. ಇನ್ನೊಂದು ವಿಷಯ. ಅನೇಕ ಕಡೆ ಸಬ್–ಇನ್ಸ್‌ಪೆಕ್ಟರ್‌ಗಳಿಗೆ, ಕಾನ್‌ಸ್ಟೇಬಲ್‌ಗಳಿಗೆ ಮನೆಗಳು ಇರುವುದಿಲ್ಲ. ಮತ್ತು ಹಳ್ಳಿಗಳಲ್ಲಿ ಹಾಗೂ ಅನೇಕ ರೆವಿನ್ಯೂ ಹೆಡ್–ಕ್ವಾರ್ಟರ್ಸ್‌ಗಳಲ್ಲಿ ಮತ್ತು ಕೆಲವು ಮುಖ್ಯ ಹಳ್ಳಿಗಳಲ್ಲಿ ಪೋಲೀಸ್ ಸ್ಟೇಷನ್‌ಗಳು ಇರುತ್ತವೆ. ಅಲ್ಲಿ ಇವರು ಮನೆ ಸಿಕ್ಕದೇಯಿರಾರದೋ ಮರ್ಜಿಗಾಗಿ, ಸಾಹುಕಾರರ ಮನೆಯಲ್ಲೋ, ಗೌಡರ ಮನೆಯಲ್ಲೋ ಪುಕ್ಕಟೆ ವಾಸ ಇರುತ್ತಾರೆ. ಇಂತಹ ಸಮಯದಲ್ಲಿ ಅವರ ಮರ್ಜಿ ಮೇಲೆ ಅನೇಕ ಸಲ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಎಲ್ಲೆಲ್ಲಿ ಮನೆಗಳು ಇಲ್ಲ ಅಲ್ಲಿ ದಯಮಾಡಿ, ಕಾನ್‌ಸ್ಟೇಬಲ್‌ಗಳಿಗೆ, ಸಬ್–ಇನ್ಸ್‌ಪೆಕ್ಟರುಗಳಿಗೆ ಕ್ವಾರ್ಟರ್ಸ್ ಕಟ್ಟಿಸುವ ವ್ಯವಸ್ಥೆಯನ್ನು ಮಾಡಿ. ಇಲ್ಲದಿದ್ದರೆ ಇವರು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ಒಂದು ಹಳ್ಳಿಯಲ್ಲಿ ಸ್ಟೇಷನ್ ಇದ್ದರೆ ಆತ ಹತ್ತಿರದ ದೊಡ್ಡ ಪಟ್ಟಣದಲ್ಲಿ ವಾಸವಾಗಿರುತ್ತಾನೆ, ಇದಕ್ಕೆ ಕಾರಣ ವಿಶೇಷವಾಗಿ ಹಿಂದುಳಿದಿರತಕ್ಕಂತಹ ಜನರಿಗೆ ಜನ ಮನೆ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಆ ಅಧಿಕಾರಿ ಪೋಲೀಸ್ ಇಲಾಖೆಯವನಾಗಿರಬಹುದು ಅಥವಾ ಬೇರೆ ಇಲಾಖೆಯ ಅಧಿಕಾರಿ ಆಗಿರಬಹುದು. ಆದುದರಿಂದ ಇವರ ವಸತಿಗಾಗಿ ಹೆಚ್ಚಿನ ಹಣವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಮೊನ್ನೆ ತಾವು ಹೌಸಿಂಗ್ ಕಾರ್ಪೊರೇಷನ್ ಎಂದು ಹೇಳಿ ಉದ್ಘಾಟನೆ ಮಾಡಿದ್ದು ನೋಡಿದೆ. ಅದರಲ್ಲಿ ಎಷ್ಟು ಖರ್ಚು ಮಾಡುತ್ತೀರಿ ಹಾಗೂ ಎಷ್ಟು ವಸತಿಗಳನ್ನು ಕಟ್ಟಿಸುತ್ತೀರಿ ಎಂದು ಸ್ಪಷ್ಟವಾಗಿ ಹೇಳಿಲ್ಲ. ಈ ಬಗ್ಗೆ ತಾವು ಉತ್ತರದಲ್ಲಿ ಹೇಳುತ್ತೀರೆಂದು ನಿರೀಕ್ಷೆ ಮಾಡಿದ್ದೇನೆ. ಇನ್ನು ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್ ಇದೆ. ಇದರಲ್ಲಿ ಸುಮಾರು ೬೬೦ ಕೇಸ್ ರಿಪೋರ್ಟ್ ಆಗಿದೆ ಎಂದು ಹೇಳಿದ್ದೀರಿ. ಈ ೬೬೦ ಯಾವ ಯಾವ ಹಂತದಲ್ಲಿ ಇವೆ ಎಂಬ ಬಗ್ಗೆ ವಿವರವನ್ನು ಸವಿಸ್ತಾರವಾಗಿ ತಾವು ಹೇಳಿಲ್ಲ. ಹಾಗೂ ಈ ಸದನದಲ್ಲಿ ಕೂಡಾ ತಿಳುವಳಿಕೆಗಾಗಿ ಹೇಳಿಲ್ಲ. ಇವುಗಳಲ್ಲಿ ಎಷ್ಟು ಅಕ್ವಿಟ್ ಆಗಿವೆ. ಎಷ್ಟು ಪನಿಷ್‌ಮೆಂಟ್ ಆಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಆಗ ಎಷ್ಟು ಪರಿಣಾಮಕಾರಿಯಾಗಿ ಆ ಕಾನೂನನ್ನು ಪರಿಪಾಲನೆ ಮಾಡುತ್ತಿದ್ದೀರಿ ಎಂದು ಗೊತ್ತಾಗುತ್ತದೆ. ಈಗ ೬೬೦ ಕೇಸ್ ಎಂದು ಹೇಳಿ ಎಲ್ಲಾ ಕೂಡಾ ಅಕ್ವಿಟ್ ಆದರೆ ಏನು ಪ್ರಯೋಜನ ? ಅವರು ಅರ್ಜಿ ಕೊಟ್ಟರು, ನಾವು ಅರೆಸ್ಟ್ ಮಾಡಿದೆವು ಎನ್ನುವ ಸಂಖ್ಯೆ ಬೇಡ. ಎಷ್ಟು ಜನ ತಪ್ಪಿತಸ್ಥರಾಗಿದ್ದಾರೆ, ಎಷ್ಟು ಫೈನ್ ಕಲೆಕ್ಟ್ ಮಾಡಲಾಗಿದೆ ಹಾಗೂ ಎಷ್ಟು ಜನರನ್ನು ಜೈಲಿಗೆ ಹಾಕಲಾಗಿದೆ ಎಂಬುದು ಮುಖ್ಯ. ಈ ಮೂಲಕ ಪನಿಷ್‌ಮೆಂಟ್ ಆಗಿದೆ ಎಂದರೆ ಮುಂದೆ ಜನ ಈ ಬಗ್ಗೆ ಹೆದರುತ್ತಾರೆ. ಇದು ಇಲ್ಲದೇ ಸುಮ್ಮನೇ ದೇಶಾವರಿ ಕಾನೂನನ್ನು ರಾಷ್ಟ್ರ ಮಟ್ಟದಲ್ಲಿ ಅಮಲಿಗೆ ಬಿಟ್ಟರೆ ಏನು ಪ್ರಯೋಜನ ? ಈ ಬಗ್ಗೆ ವಿವರಗಳನ್ನು ಕೊಡಬೇಕು.

ಹೋಮ್ ಗಾರ್ಡ್ಸ್ ಬಗ್ಗೆ ಒಂದು ಸಲಹೆಯನ್ನು ಕೊಡಬೇಕೆಂದಿದ್ದೇನೆ. ಇದರಲ್ಲಿ ಏನಾಗಿದೆ, ಎಂದರೆ, ಹೋಮ್ ಗಾರ್ಡ್ಸ್‌ನಲ್ಲಿ ಯಾರು ಹೊಸದಾಗಿ ನೇಮಕಾತಿಯನ್ನು ಹೊಂದುತ್ತಾರೆ ಅಂದರೆ ೩೫ ವರ್ಷಗಳು ಇರಬಹುದು, ೨೫ ವರ್ಷ ಇರಬಹುದು. ಆದರೆ ೪೦ ವರ್ಷಗಳಿಗಿಂತ ಕಡಿಮೆ ಇರುವವರು ಯಾರು ಇದ್ದಾರೆ, ಅವರನ್ನೆಲ್ಲಾ ಕಡ್ಡಾಯವಾಗಿ ಹೋಮ್ ಗಾರ್ಡ್ಸ್‌ನಲ್ಲಿ ರಿಜಿಸ್ಟರ್ ಮಾಡಬೇಕೆಂದು ಹೇಳಬೇಕು. ಅವರೆಲ್ಲರಿಗೂ ಆ ಬಗ್ಗೆ ತರಬೇತಿಯನ್ನು ಕೊಡಬೇಕು, ಆಗ ಇವರು ಒಂದಲ್ಲ ಒಂದು ಸಂದರ್ಭದಲ್ಲಿ ಅನುಕೂಲಕ್ಕೆ ಬರುತ್ತಾರೆ, ಮೊನ್ನೆ ನೀವೇ ಸೇರಿ ಬಂದ್ ಮಾಡಿಸಿದ್ದಿರಲ್ಲ, ಅಂತಹ ಸಮಯದಲ್ಲಿ ಇವರು ಉಪಯೋಗಕ್ಕೆ ಬರುತ್ತಾರೆ. ಅನೇಕ ಕಡೆ ಏನಾಗಿದೆ ಎಂದರೆ, ಇವರಿಗೆ ಸರಿಯಾಗಿ ನಡೆಯುವುದಕ್ಕೇ ಬರುವುದಿಲ್ಲ. ಇಂತಹವರು ಹೋಮ್ ಗಾರ್ಡ್ಸ್‌ನಲ್ಲಿದ್ದಾರೆ. ಯಾರು ಮೊದಲು ನೇಮಕಾತಿಯನ್ನು ಹೊಂದುತ್ತಾರೆ. ಅವರಿಗೆ ಕಡ್ಡಾಯವಾಗಿ ಹೋಮ್‌ಗಾರ್ಡ್ಸ್‌ನಲ್ಲಿ ಎನ್‌ರೋಲ್ ಮಾಡಬೇಕೆಂಬ ಸಲಹೆಯನ್ನು ಕೊಡುತ್ತೇನೆ.

ನಾನು ಹೋದ ಸಲವೂ ಗೃಹ ರಕ್ಷಕ ದಳದ ಬಗ್ಗೆ ಮಾತನಾಡಿದ್ದೆ. ಈ ಒಂದು ಗೃಹ ರಕ್ಷಣ ಠಾಣೆ ಗುಲ್ಬರ್ಗದಲ್ಲಿದೆ. ಯಾದಗಿರ್ ೫ ತಾಲ್ಲೂಕಿಗೂ ಸಂಬಂಧಪಟ್ಟ ಕೇಂದ್ರ ಸ್ಥಳವಾಗಿವೆ. ೭೫ ಸಾವಿರ ಜನಸಂಖ್ಯೆ ಇರತಕ್ಕಂತಹ ಪಟ್ಟಣ ಅದು. ಅದರಲ್ಲೂ ವಿಶೇಷವಾಗಿ ಅಲ್ಲಿ ಕಾಟನ್ ಮಾರುಕಟ್ಟೆ ಇದೆ. ಫೈರ್ ಸರ್ವೀಸ್ ಸ್ಟೇಷನ್ನಿನ ಅವಶ್ಯಕತೆ ಬಹಳವಾಗಿ ಇದೆ ಎಂದು ನಾನು ಹೋದ ಸಲವೇ ಕೇಳಿಕೊಂಡಿದ್ದೆ. ಮಾನ್ಯ ಮಂತ್ರಿಗಳು ಅದನ್ನು ಮಂಜೂರು ಮಾಡುವ ಬಗ್ಗೆ ಇಲ್ಲಿಯುವರೆವಿಗೂ ಯೋಚನೆಯನ್ನೇ ಮಾಡಿಲ್ಲ. ಅದು ಏಕೆಂದು ನನಗಂತೂ ಅರ್ಥವಾಗುವುದಿಲ್ಲ. ಅಥವಾ ಏನಾದರು ವಿರೋಧಪಕ್ಷದಲ್ಲಿರುವ ನನ್ನಂತಹವರು ಕೇಳಿದಾಗ ಏಕೆ ಕೊಡಬೇಕು ಎನ್ನುವ ದೃಷ್ಟಿಯಿಂದ ತಡೆಹಿಡಿದಿದ್ದಾರೋ ನನಗೆ ಗೊತ್ತಿಲ್ಲ. ಕಾಟನ್ ಮಾರುಕಟ್ಟೆಯಲ್ಲಿ ಆಕಸ್ಮಿಕವಾಗಿ ಬೆಂಕಿ ಹತ್ತಿದರೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತದೆ. ಈ ರೀತಿಯ ಘಟನೆ ಒಂದು ವೇಳೆ ನಡೆದರೆ ಅವರು ಗುಲ್ಬರ್ಗದಲ್ಲಿರುವ ಫೈರ್ ಸರ್ವೀಸ್ ಸ್ಟೇಷನ್‌ಗೆ ತಿಳಿಸಬೇಕು. ಗುಲ್ಬರ್ಗದಿಂದ ಯಾದಗಿರ್‌ಗೆ ಇರುವಂತಹ ಅಂತ ೧೨೦ ಕಿಲೋ ಮೀಟರ್. ಅಲ್ಲಿಂದ ಅವರು ಬರುವುದರೊಳಗೆ ಇಲ್ಲಿ ಎಲ್ಲ ಸಂಪೂರ್ಣವಾಗಿ ಸುಟ್ಟು ಭಸ್ಮವಾಗುತ್ತದೆ ಆದ್ದರಿಂದ ದಯಮಾಡಿ ಇದನ್ನು ತಾವು ಒಪ್ಪಿಕೊಂಡು, ತಮ್ಮ ಉತ್ತರದಲ್ಲೇ ಆ ಬಗ್ಗೆ ಅನೌನ್ಸ್ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಮೂರನೆಯದಾಗಿ ಸೈನಿಕ್ ವೆಲ್‌ಫೇರ್ ಬೋರ್ಡ್‌ದಲ್ಲಿ ಕೇವಲ ಕೆಲವೇ ೪ ಜನರಿಗೆ ಅನುಕೂಲವಾಗುತ್ತಿದೆ. ಅದು ಅವರಿಗೇ ಸೀಮಿತವಾಗಿದೆ. ಮಡಿಕೇರಿ, ಬೆಳಗಾಂ, ಅಥಣಿ ಹಾಗೂ ಕಾರವಾರ ಈ ನಾಲ್ಕು ಕಡೆ ಬಿಟ್ಟರೆ ಬೇರೆ ಎಲ್ಲೂ ಹಾಸ್ಟಲ್ ಇಲ್ಲವೇ ಇಲ್ಲ. ಎಕ್ಸ್-ಸರ್ವೀಸ್‌ಮನ್ ಮಕ್ಕಳೆಲ್ಲರೂ ಬಡವರೇ ಇದ್ದರೂ ಕೂಡ ಬೇರೆ ಕಡೆಯೂ ಕೂಡ ಸೈನ್ಯಕ್ಕೆ ಸೇರಿ ಮಾಜಿ ಯೋಧರಾದಂತಹವರು ಇದ್ದಾರೆ. ಉದಾಹರಣೆಗೆ ಬೀದರ್ ಜಿಲ್ಲೆ. ಅಲ್ಲೂ ಕೂಡ ಅವರ ಮಕ್ಕಳ ಅನುಕೂಲಕ್ಕಾಗಿ ಇಂತಹ ಹಾಸ್ಟಲ್‌ಗಳನ್ನು ತೆರೆಯಬೇಕು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಕೊನೆಯದಾಗಿ ಎಕ್ಸೈಜ್ ಇಲಾಖೆಯ ಬಗ್ಗೆ ಹೇಳುವುದಾದರೆ, ಅದು ಬಹಳ ಮಹತ್ವದ್ದು. ಸರ್ಕಾರಕ್ಕೆ ಹೆಚ್ಚು ಆದಾಯ ಬರುವಂತಹ ಇಲಾಖೆ. ಅದರಲ್ಲಿ ಖರ್ಚು ಮಾಡುವುದು ಬಹಳ ಕಡಿಮೆ. ಸಂಪಾದನೆ ಮಾತ್ರ ಹೆಚ್ಚು. ಆದ್ದರಿಂದ ಇದರ ಬಗ್ಗೆ ವಿಶೇಷವಾಗಿ ಹೇಳತಕ್ಕಂತಹದ್ದು ಅಂದರೆ ಎರಡು ಮಹತ್ತರವಾದ ವಿಚಾರಗಳ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ ಒಂದು ಬಾಟ್ಲಿಂಗ್ ಕೇಸು. ಇನ್ನೊಂದು ಸ್ಪಿರಿಟ್ ಸ್ಕ್ಯಾಂಡಲ್, ಇವೆರಡರಲ್ಲಿ ಇಲಾಖೆ ಬಹಳ ಪ್ರಚಾರಕ್ಕೆ ಬಂದಿದೆ.

ಅಧ್ಯಕ್ಷರು.—ಇದುವರೆವಿಗೂ ಬಹಳ ಚೆನ್ನಾಗಿ ಮಾತನಾಡಿದ್ದೀರಿ......

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೫೦ ಲಕ್ಷ ರೂಪಾಯಿಗಳ ರೆಕ್ಟಿಫೈಡ್ ಸ್ಪಿರಿಟ್‌ನ್ನು ಏನು ಖಾಸಗಿಯವರಿಗೆ ಮಾರಾಟ ಮಾಡಿದ್ದಾರೆ, ಅದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳವರೆಗೆ ಲಾಸಾಗಿದೆ ಅಂತಹದ್ದನ್ನು ಈ ಸಮಯದಲ್ಲಿ ಹೇಳದಿದ್ದರೆ, ಇನ್ಯಾವಾಗ ನಾವು ಈ ಸದನದಲ್ಲಿ ಪ್ರಸ್ತಾಪ ಮಾಡುವುದು ? ಈ ಸದನದಲ್ಲಿ ಆ ಬಗ್ಗೆ ಮಾತನಾಡುವ ಹಕ್ಕು ಇದೆ; ಹೇಳುತ್ತೇನೆ. ನೀವು ಮಾಡಿದ ತಪ್ಪನ್ನು ಇಲ್ಲಿ ನಾನು ಹೇಳುವುದಕ್ಕೆ ಬಂದಿದ್ದೇನೆ. ಅದು ಕಮಿಷನ್ ಮುಂದೆ ಇದೆ ಎಂಬುದೂ ಗೊತ್ತು. ಆದರೂ ಹೇಳಬಾರದು ಅಂತ ಇದೆಯೇನು ? ಏನು ತಪ್ಪು ಮಾಡಿದ್ದೀರಿ ? ಸರ್ಕಾರ ಏನು ತಪ್ಪು ಮಾಡಿದೆ ? ಮುಖ್ಯ ಮಂತ್ರಿಗಳು ಆದೇಶವನ್ನು ನಿಮಗೆ ನೀಡಿ ನಿಮ್ಮ ಕೈಯ್ಯಲ್ಲಿ ಹೇಳಿಸಿ ಮಾಡಿಸಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬಯಸುತ್ತೇನೆ.

ಶ್ರೀ ರಮೇಶ್ ಸಿ ಜಿಗಜಿನಗಿ.—ಅವರು ಏಕೆ ಹೇಳಿಸಿ ಮಾಡಿಸಿದ್ದಾರೆ ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಮಾಡಿದ್ದರೆ ಸಂತೋಷ. ನೀವೇ ಮಾಡಿದ್ದೀರಿ ಎಂಬುದಾಗಿ ಈ ಜಡ್ಜ್‌ಮೆಂಟ್‌ನಲ್ಲಿ ಎಲ್ಲೂ ಇಲ್ಲ.

ಶ್ರೀ ರಮೇಶ್ ಸಿ. ಜಿಗಜಿನಗಿ.—ಆ ಜಡ್ಜ್‌ಮೆಂಟ್ ಮೇಲೆ ರಿಟ್ ಸುಪ್ರೀಂ ಕೋರ್ಟಿನಲ್ಲಿ ಅಡ್ಮಿಟ್ ಆಗಿರುವುದರಿಂದ, ಕೋರ್ಟಿನ ಮುಂದಿರುವ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಬೇಡ.

ಅಧ್ಯಕ್ಷರು.—ತಾವು ದಯಮಾಡಿ ಮುಗಿಸಿ

ಶ್ರೀ ಮಲ್ಲಿಕಾರ್ಜುನ ಎಂ, ಖರ್ಗೆ.—ನಾನು ಡಿಮ್ಯಾಂಡ್ ಮೇಲೆ ಮಾತನಾಡುತ್ತಿದ್ದೇನೆ. ಇದರ ಬಗ್ಗೆ ಹಿಂದೆ ಅನೇಕ ಸಲ ನಿಲುವಳಿ ಸೂಚನೆಯನ್ನು ತಂದಾಗಲೂ ನಾನು ಮಾತನಾಡೇ ಇಲ್ಲ. ಅನೇಕ

ಸಲ ಗಮನ ಸೆಳೆಯುವ ಸೂಚನೆ ತಂದಾಗಲೂ ನಾನು ಮಾತನಾಡಲಿಲ್ಲ. ಆದ್ದರಿಂದ ಆ ವಿಷಯವನ್ನು ಡಿಮ್ಯಾಂಡ್ ಮೇಲೂ ಮಾತನಾಡಬಾರದೆ ?

ಶ್ರೀ ರಾಜವರ್ಧನ್.— ಬಾಟ್ಲಿಂಗ್ ಮೇಲೆ ಮಾನ್ಯ ಸದಸ್ಯರು ಮಾತನಾಡಿದರೆ ಅದು ಸಬ್‌ಜ್ಯುಡೀಸ್ ಆಗುತ್ತದೆ.

ಅಧ್ಯಕ್ಷರು,—ನಿಮಗೆ ನಾನು ೨೦ ನಿಮಿಷ ಅವಕಾಶ ಕೊಟ್ಟಿದ್ದೇನೆ, ದಯಮಾಡಿ ಮುಗಿಸಿಬಿಡಿ. ಸಾಕಷ್ಟು ವಿಷಯವನ್ನು ಹೇಳಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೨೦ ನಿಮಿಷ ಆಯಿತು. ೫೦ ಕೋಟಿ ರೂಪಾಯಿಯ ಹಗರಣವನ್ನು ಯಾವ ರೀತಿ ಮುಚ್ಚಿದ್ದಾರೋ ಅದೇ ರೀತಿ ನಾನೂ ಇದನ್ನು ಮುಚ್ಚಿಡಬೇಕು ಅಂದರೆ ಹೇಗೆ ಸಾಧ್ಯ ?

ಶ್ರೀ ಆರ್.ಎಲ್.ಜಾಲಪ್ಪ.—ಈಗಾಗಲೇ ಇದರ ಬಗ್ಗೆ ಸಾಕಷ್ಟು ಸಲ ಚರ್ಚೆಯಾಗಿದೆ ನಾಲ್ಕಾರು ಸಲ ಚರ್ಚೆಯಾಗಿದೆ. ೫೦ ಕೋಟಿ ಹಗರಣವೋ, ೧೦೦ ಕೋಟಿ ಹಗರಣವೋ ಸುಪ್ರೀಂ ಕೋರ್ಟಿನಿಂದ ತೀರ್ಪು ಬರಲಿ. ಆದ್ದರಿಂದ ಅದರ ಬಗ್ಗೆ ಪುನಃ ಚರ್ಚೆ ಮಾಡುವುದು ಅನಾವಶ್ಯಕ. ಮಾನ್ಯ ಸದಸ್ಯರು ಅದರ ಬಗ್ಗೆ ಅಷ್ಟಕ್ಕೆ ಅದನ್ನು ಬಿಟ್ಟರೆ ಒಳ್ಳೆಯದೆಂದು ನನಗನ್ನಿಸುತ್ತದೆ. ಇವರು ಪದೇ ಪದೇ "ರೆಡ್ಡಿ ಹುಟ್ಟ ಮೊದಲು ಎತ್ತೋ" ಎಂಬ ಗಾದೆಯಂತೆ ಪದೇ ಪದೇ ಅದನ್ನೇ ಮಾತನಾಡುವುದರಲ್ಲಿ ಅರ್ಥವಿಲ್ಲ.

ಅಧ್ಯಕ್ಷರು.—ನಿಮಗೆ ೨೦ ನಿಮಿಷ ಕೊಟ್ಟಿದ್ದೇನೆ. ಬಹಳ ಚೆನ್ನಾಗಿ ವಿಷಯವನ್ನು ಹೇಳಿದ್ದೀರಿ, ಮುಗಿಸಿಬಿಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನನಗೆ ಅವಕಾಶ ಕೊಟ್ಟಿದ್ದೀರಿ, ತಮಗೆ ಅಭಿನಂದಿಸುತ್ತೇನೆ. ಅವರು ನಾವು ಏನನ್ನು ಹೇಳುವುದಕ್ಕೂ ಬಿಡುವುದಿಲ್ಲ. ೧೦೦ ಸಲ ಹೇಳುತ್ತೇನೆ, ನಿಮಗೆ ನಾಚಿಕೆ ಬರುವವರೆಗೂ ಹೇಳುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಸಾವಿರಸಲ ಹೇಳಿ. ಅದರಿಂದ ನಮಗೇನೂ ಬೇಸರ ಇಲ್ಲ. ಆದರೆ ಯಾವಾಗ ಹೇಳಬೇಕು, ಯಾವಾಗ ಹೇಳಬಾರದು ಎಂಬುದಕ್ಕೆ ನಿಯಮಗಳು ಇವೆ. ಅದನ್ನು ಪಾಲನೆ ಮಾಡಿ ಎಂಬುದಾಗಿ ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದನ್ನು ನಾನು ನಿಮ್ಮಿಂದ ಕಲಿಯಬೇಕಾಗಿಲ್ಲ. ಎಕ್ಸೈಜ್ ಇಲಾಖೆಯ ಮೇಲೆ ಮಾತನಾಡುವಾಗ ಹೇಳಲೇಬೇಕಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮುಖ್ಯ ಮಂತ್ರಿಗಳು ಹೇಳಿ ಮಾಡಿಸಿದ್ದಾರೆ ಅಂತ ಹೇಳಿದರು. ಅದು ರೆಕಾರ್ಡಿಗೆ ಹೋಗಿದೆ. ಅದನ್ನು ತೆಗೆಯಬೇಕು. ಅವರು ಸ್ವತಂತ್ರವಾದ ಮಂತ್ರಿಗಳು. ಅಕಸ್ಮಾತ್ ನನ್ನದೇ ಜವಾಬ್ದಾರಿ ಇದೆ ಅಂತ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಏನು ಹೇಳಿದ್ದಾರೆಂಬುದನ್ನು ಓದಿ ಹೇಳುತ್ತೇನೆ...

ಶ್ರೀ ಆರ್. ಎಲ್. ಜಾಲಪ್ಪ.—ಬೇಕಾಗಿಲ್ಲ. ನೂರಾರು ಸಲ ಹೇಳಿದ್ದೀರಿ.

ಅಧ್ಯಕ್ಷರು.—ಏತಕ್ಕೆ. ಕೊನೆಗೆ ಬಂದಿದ್ದೀರಿ, ಮುಗಿಸಿಬಿಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇವರಿಗೆ ಬೇಕಾಗಿಲ್ಲ ಅಂದರೆ ಅದನ್ನು ಹೇಳಬಾರದು ಅಂತ ಏನೂ ಇಲ್ಲ.

ಅಧ್ಯಕ್ಷರು.—ನಾನು ನಿಮಗೆ ಕೊಟ್ಟಿದ್ದು ೧೦ ನಿಮಿಷ. ಆದರೂ ೨೦ ನಿಮಿಷ ಮಾತನಾಡಿದ್ದೀರಿ. ನಾಳೆ ಬೇರೆ ಡಿಮ್ಯಾಂಡ್ ಮೇಲೆ ಅರ್ಧ ಗಂಟೆ ಮಾತನಾಡಿ. ನಿಮಗೆ ಕೊಟ್ಟಂತಹ ಸಮಯದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದೀರಿ. ಇಲ್ಲಿಗೆ ಇದನ್ನು ನಿಲ್ಲಿಸಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಾಗಾದರೆ ನಾನು ಅಬ್ಕಾರಿ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಬಾರದಾ ? ಯಾವ ರೀತಿಯ ವ್ಯವಹಾರ ಇದರಲ್ಲಿ ನಡೆದಿದೆ ಎಂಬುದನ್ನು ನಾನು ಏಕೆ ಪ್ರಸ್ತಾಪ ಮಾಡಬಾರದು ?

ಅಧ್ಯಕ್ಷರು.—ನಿಮಗೆ ರೂಲ್ಸ್ ಪ್ರಕಾರ ೧೦ ನಿಮಿಷ ಮಾತ್ರ ಅವಕಾಶ ಕೊಟ್ಟಿದ್ದೆ. ಆದರೆ ೨೦ ನಿಮಿಷ ಮಾತನಾಡಿದ್ದೀರಿ. ನಿಮಗೆ ಬೇಕಾದಷ್ಟು ಅವಕಾಶ ಇದೆ. ನಿಮಗೆ ನಾನು ಅವಕಾಶ ಕೊಡುತ್ತೇನೆ. ಇಲ್ಲಿಯವರೆವಿಗೂ ಸಹಕರಿಸಿದ್ದೀರಿ. ಬಹಳ ಚೆನ್ನಾಗಿ ಮಾತನಾಡಿದ್ದೀರಿ. ಯಾರು ಹೇಳದೇ ಇರುವಂತಹ ಸಲಹೆಯನ್ನು ಕೊಟ್ಟಿದ್ದೀರಿ. ದಯಮಾಡಿ ಮುಗಿಸಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಚೆನ್ನಾಗಿ ಮಾತನಾಡಿದ್ದೇನೋ, ಚೆನ್ನಾಗಿ ಮಾತನಾಡಿಲ್ಲವೋ ಅದು ನನಗೆ ಬಿಟ್ಟದ್ದು. ತಾವು ನನಗೆ ಹೆಚ್ಚು ಸಮಯ ಕೊಟ್ಟಿದ್ದೀರಿ. ಅದಕ್ಕಾಗಿ ಅಭಿನಂದಿಸುತ್ತೇನೆ. ಆದರೆ ಈ ವಿಷಯ ಬಂದಾಗ ಪ್ರಸ್ತಾಪ ಮಾಡದಿದ್ದರೆ, ಮತ್ತೆ ಯಾವಾಗ ಪ್ರಸ್ತಾಪ ಮಾಡುವುದು ? ಡಿಮ್ಯಾಂಡ್ ಮೇಲೆ ಮಾತನಾಡಬಾರದ ?

ಅಧ್ಯಕ್ಷರು.—ಯಾರಿಗೂ ಕೊಡದೇ ಇರತಕ್ಕಂತಹ ಹೆಚ್ಚು ಸಮಯವನ್ನು ನಿಮಗೆ ನಾನು ಕೊಟ್ಟಿದ್ದೇನೆ. ದಯಮಾಡಿ ಮುಗಿಸಿ. ನಾನು ಮತ್ತೊಮ್ಮೆ ನಿಮಗೆ ಅವಕಾಶ ಕೊಡಬೇಕೋ ಬೇಡವೋ ? ಸಾಕು ಇಲ್ಲಿಗೆ ಮುಕ್ತಾಯ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾನೂನನ್ನು ಯಾವ ರೀತಿಯಾಗಿ ಇವರು ವೈಯಲೇಟ್ ಮಾಡಿ ಅದನ್ನು ಕೊಟ್ಟಿದ್ದಾರೆಂಬುದರ ಬಗ್ಗೆ ಕೆಲವು ವಿವರಗಳನ್ನು ಹೇಳಬೇಕಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ.—ಆ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿ ಏನೇನು ಹೇಳಬೇಕೋ ಎಲ್ಲವನ್ನೂ ಹೇಳಿದ್ದಾರೆ.

ಅಧ್ಯಕ್ಷರು.—ದಯವಿಟ್ಟು ಮುಗಿಸಿಬಿಡಿ, ನಿಮಗೆ ಹತ್ತು ನಿಮಿಷಕ್ಕೆ ಬದಲಾಗಿ ಇಪ್ಪತ್ತು ನಿಮಿಷ ಕೊಟ್ಟಿದ್ದೇನೆ. ನಿಮಗೆ ಇನ್ನೂ ಹೆಚ್ಚಿಗೆ ಕಾಲಾವಕಾಶ ಕೊಟ್ಟರೆ ಪಕ್ಷಪಾತ ಮಾಡಿದಂತಾಗುತ್ತದೆ. ಗಮನ ಸೆಳೆಯುವ ರೂಪದಲ್ಲಿ ಅಥವಾ ಬೇರೆ ಯಾವ ರೂಪದಲ್ಲಾದರೂ ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೇಳಿ, ಕೊಡುತ್ತೇನೆ. ಈಗ ನಿಮಗೆ ಕೊಟ್ಟಿರುವಷ್ಟು ವೇಳೆಯನ್ನು ಈ ಕಡೆಯ ಸದಸ್ಯರಿಗೂ ಕೊಟ್ಟಿಲ್ಲ. ನಿಮಗೆ ವಿಶೇಷವಾಗಿ 20 ನಿಮಿಷ ಕೊಟ್ಟಿದ್ದೇನೆ. ವೇಳೆ ಆಗಿದೆ, ಬೇಗ ಮುಗಿಸಿ.

ಶ್ರೀ ಕೆ.ಬಿ. ಶಾಣಪ್ಪ.—ತಾವು ಬೆದರಿಸಿದರೆ ಅಂಜಿ ಕೂರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಂದರ್ಭಾನುಸಾರವಾಗಿ ನಾನು ಏತಕ್ಕೆ ಹೇಳುತ್ತಿದ್ದೆ ಎಂದರೆ....

ಅಧ್ಯಕ್ಷರು.—ಸಬ್‌ಜುಡೀಸ್ ಆಗುತ್ತದೆನ್ನುವುದು ಅವರಿಗೂ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರ ಬಗ್ಗೆ ನಾನು ಮಾತನಾಡುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಮೆರಿಟ್‌ಗೆ ಹೋಗುತ್ತಿಲ್ಲ, ವಿಷಯದ ಮೇಲೆ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಸಬ್ ಜುಡೀಸ್ ಆಗುವುದನ್ನು ಬಿಟ್ಟು ಬೇರೆಯದರ ಬಗ್ಗೆ ಮಾತನಾಡುವುದಕ್ಕೆ ಹಕ್ಕಿದೆ. ಆದರೆ ಈಗ ನಾನು ಭಾಷಣಕ್ಕೆ ಕಾಲದ ಮಿತಿಯನ್ನು ಹಾಕಿರುವುದರಿಂದ ಮುಗಿಸಿ ಎಂದು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಬ್‌ಜುಡೀಸ್ ಆಗುವುದು ಯಾವುದನ್ನೂ ನಾನು ಮಾತನಾಡುವುದಿಲ್ಲ. ಸುಪ್ರೀಂ ಕೋರ್ಟ್ ಮುಂದೆ ಇಶ್ಯೂಸ್ ಏನಿದೆ ಅದರ ಬಗ್ಗೆ ಮಾತನಾಡುತ್ತಿಲ್ಲ, ಬಾಟ್ಲಿಂಗ್ ಅಂದ ತಕ್ಷಣ ಏಕೆ....

ಅಧ್ಯಕ್ಷರು.—ನಿಮಗೆ ಎಲ್ಲರಿಗಿಂತ ಹೆಚ್ಚಿಗೆ ಟೈಂ ಕೊಟ್ಟಿದ್ದೇನೆ. ದಯವಿಟ್ಟು ಸಾಕು ಮಾಡಿ. ಇದುವರೆಗೆ ಸಮಾಧಾನವಾಗಿ ಮಾತನಾಡುತ್ತಿದ್ದವರು ಈಗ ಏಕೆ ಹೀಗೆ ಮಾತನಾಡುತ್ತಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನೇಕ ಕಾನೂನು ಬಾಹಿರವಾದ ಕೆಲಸಗಳನ್ನು ಮಾಡಿದ್ದಾರೆ. ಅವರಿಗೆ ಧೈರ್ಯ ಇದೆ, ಇಲ್ಲದೆ ಇಲ್ಲ. ನೀವು ಏತಕ್ಕೆ ಬೇಡ ಅನ್ನುತ್ತೀರಿ? ಅವರು ಮಾಡಿದ ಹಗರಣವನ್ನು ನೀವು ಏತಕ್ಕೆ ಕಟ್ಟಿಕೊಳ್ಳುತ್ತೀರಿ?

ಅಧ್ಯಕ್ಷರು.—ನಿಮಗೆ ಗರಿಷ್ಠ ಅವಧಿಯನ್ನು ಕೊಟ್ಟಿದ್ದೇನೆ. ಇನ್ನೂ ಕೊಡುತ್ತಾ ಹೋದರೆ ಬೇರೆಯವರು ಪಕ್ಷಪಾತ ಮಾಡಿದರು ಅನ್ನುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟೈಂ ಕೊಟ್ಟಿದ್ದಕ್ಕೆ ಅಭಿನಂದಿಸುತ್ತೇನೆ. ತಾವು ನ್ಯಾಯವಾದಿಗಳು. ಕಾನೂನು ಬಾಹಿರವಾಗಿ ಕೆಲಸ ಮಾಡಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಲುಕ್ಸಾನಾಗಿದೆ. ಫೇವರಿಟಿಸಂ, ನೆಪೋಟಿಸಂ ಆಗಿದೆ. ಅದಕ್ಕೆ ನಾನು ಒಂದು ಸಲಹೆ ಮಾಡುತ್ತೇನೆ. ಇಂಥ ಹಗರಣಗಳು ಮುಂದೆ ಆಗಬಾರದು. ಅಬ್ಕಾರಿ ಮಂತ್ರಿಗಳು ಕೇರಳದಲ್ಲಿ, ತಮಿಳ್ನಾಡಿನಲ್ಲಿ ಯಾವ ರೀತಿ ಮಾಡಿದ್ದಾರೆ ಎಂಬುದನ್ನು ನೋಡಬೇಕು. ಈಗ ಏನಾಗಿದೆ ಎಂದರೆ, ಇವತ್ತು ಕೆಲವು ಎಕ್ಸೈಜ್ ಕಂಟ್ರಾಕ್ಟರುಗಳು ಯಾರಿಗೆ ಆಗುವುದಿಲ್ಲ ಅವರು ಇರುತ್ತಾರೆ. ಮಧ್ಯದಲ್ಲಿ ಅನೇಕ ಸ್ಕ್ಯಾಂಡಲ್ಸ್ ಎಕ್ಸೈಜ್ ಇಲಾಖೆಯಲ್ಲಿ ಬರುತ್ತಿವೆ. ಕೇರಳ ಮತ್ತು ತಮಿಳ್ನಾಡಿನಲ್ಲಿ ಒಂದು ಕಾರ್ಪೊರೇಷನ್ ಮಾಡಿದ್ದಾರೆ. ಸ್ಪಿರಿಟ್ ಆಗಲಿ, ರೆಕ್ಟಿಫೈಡ್ ಸ್ಪಿರಿಟ್ ಆಗಲಿ ಎಲ್ಲವನ್ನು ಇಲಾಖೆಯ ಮೂಲಕ ಹಂಚತಕ್ಕ ವ್ಯವಸ್ಥೆ ಮಾಡಿದ್ದಾರೆ. ಈ ರೀತಿ ಮಾಡುವುದರಿಂದ ಇವತ್ತು ಏನು ಕಾಂಪಿಟೇಷನ್ ಇದೆ ಅದು ತಪ್ಪುತ್ತದೆ, ಮತ್ತು ಸರ್ಕಾರಕ್ಕೆ ಹೆಚ್ಚಿಗೆ ಆದಾಯ ಬರತಕ್ಕ ವ್ಯವಸ್ಥೆ ಆಗುತ್ತದೆ. ಇದರ ಬಗ್ಗೆ ಯೋಚನೆ ಮಾಡಿ. ಇದರಿಂದ ಏನು ತೊಂದರೆ ಆಗುತ್ತದೆಂಬುದನ್ನು ಹೇಳುವುದಕ್ಕೆ ಅವಕಾಶ ಇಲ್ಲ. ಕನಿಷ್ಠಪಕ್ಷ ಇಲ್ಲಿ ಒಂದು ಕಾರ್ಪೊರೇಷನ್ ಮಾಡುತ್ತೀರಾ ಹೇಗೆ ಎಂದು ಹೇಳಬಯಸುತ್ತೇನೆ. ತಾವು ಸಾಕು ಅನ್ನುವುದರೊಳಗೆ ಎಲ್ಲವನ್ನೂ ಹೇಳಿ ಮುಗಿಸುತ್ತಿದ್ದೆ. ಆದರೆ ತಾವು ಅದಕ್ಕೆ ಅವಕಾಶ ಕೊಡಲಿಲ್ಲ. ಇಷ್ಟು ಮಾತ್ರ ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಗಿಯಿತು. ಈಗ ಮಂತ್ರಿಗಳಿಂದ ಉತ್ತರ. ಗೃಹ ಮಂತ್ರಿಗಳು ನಾಳೆ ಬೆಳಿಗ್ಗೆ ಉತ್ತರಿಸುತ್ತಾರೆ.

ಶ್ರೀ ರಮೇಶ್ ಸಿ ಜಿಗಜಿಣಗಿ. (ಅಬ್ಕಾರಿ ಸಚಿವರು).— ಮಾನ್ಯ ಅಧ್ಯಕ್ಷರೇ, ಇವತ್ತು ನನ್ನ ಇಲಾಖೆಯ ಮೇಲೆ ಚರ್ಚೆ ನಡೆದ ಸಮಯದಲ್ಲಿ ಅನೇಕ ಸದಸ್ಯರು ಭಾಗವಹಿಸಿ ಇಲಾಖೆಯ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಅಬ್ಕಾರಿ ಇಲಾಖೆ ಸಮಾಜದ ದೃಷ್ಟಿಕೋನದಲ್ಲಿ ಬಹಳ ಚಿಕ್ಕದಾಗಿ ಕಂಡರೂ ಸರ್ಕಾರಕ್ಕೆ ಬರತಕ್ಕ ಆದಾಯದ ದೃಷ್ಟಿಕೋನವನ್ನು ಇಟ್ಟುಕೊಂಡು ನೋಡಿದರೆ ಇಡೀ ರಾಜ್ಯದಲ್ಲಿ ಹೆಚ್ಚಿನ ಆದಾಯ ಬರತಕ್ಕ 2ನೇ ಇಲಾಖೆ ಎಂದು ಹೇಳುವುದಕ್ಕೆ ಬಹಳ ಸಂತೋಷ ಅನ್ನಿಸುತ್ತಿದೆ. ಈ ಇಲಾಖೆಯಲ್ಲಿ 1983-84 ರಲ್ಲಿ 164 ಕೋಟಿ ರೂಪಾಯಿ ಆದಾಯ ಬಂದಿದ್ದರೆ 1984-85ರಲ್ಲಿ 190 ಕೋಟಿ ರೂಪಾಯಿ ಬಂದಿದೆ. 1985-86 ರಲ್ಲಿ 222 ಕೋಟಿ ರೂಪಾಯಿ ಆದಾಯ ಬಂದಿದ್ದರೆ 1986-87ರಲ್ಲಿ 237.40 ಕೋಟಿ ರೂಪಾಯಿ ಬರಬಹುದೆಂದು ನಿರೀಕ್ಷೆ ಮಾಡಿದ್ದೇವೆ, ನಾವು ಕಾಕಂಬಿ ಮದ್ಯಸಾರ ಮಾಡತಕ್ಕ 12 ಕಾರ್ಖಾನೆಗಳನ್ನು ಹೊಂದಿದ್ದೇವೆ. ಇದರಲ್ಲಿ ೧೯೮೪-೮೫ರಲ್ಲಿ ೪೭೧ ೭೫ ಲಕ್ಷ ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ತಯಾರಿಸಿದ್ದರೆ ೧೯೮೫-೮೬ರಲ್ಲಿ ೫೧೦ಲಕ್ಷ ಲೀಟರ್ ತಯಾರಿಸಿದ್ದೇವೆ. ಈ ಇಲಾಖೆಯ ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಹಿಂದೆಲ್ಲ ಭಾಗವಹಿಸಿ ಮಾತನಾಡಿದ್ದಾರೆ, ಈ ಸಾರಿ ಯಾವ ವಿಷಯಗಳೂ ಇಲ್ಲವೆಂದು ತಿಳಿದು ಕೊಂಡರೋ ಅಥವಾ ಇದು ಸರ್ಕಾರಕ್ಕೆ ಕಡಿಮೆ ಖರ್ಚಾದರೂ ಹೆಚ್ಚಿನ ಆದಾಯವನ್ನು ಕೊಡತಕ್ಕ ಇಲಾಖೆಯೆಂದು ತಿಳಿದರೋ ಬಹಳ ಕಡಿಮೆ ಮಂದಿ ಸದಸ್ಯರು ಮಾತನಾಡಿದ್ದಾರೆ. ಈ ರಾಜ್ಯದಲ್ಲಿ ಭಾರತೀಯ - ವಿದೇಶಿ ಮದ್ಯ ತಯಾರಿಸತಕ್ಕ ೨೦ ಘಟಕಗಳು ಇವೆ. ಇವು ೧೯೮೩-೮೪ರಲ್ಲಿ ೨.೯೧ ಕೋಟಿ, ೧೯೮೪-೮೫ರಲ್ಲಿ ೩.೦೫ ಕೋಟಿ. ೧೯೮೫-೮೬ ರಲ್ಲಿ ಜನವರಿಯಿಂದ ಡಿಸೆಂಬರ್‌ವರೆಗೆ ೧.೬೮ ಕೋಟಿ ಲೀಟರ್ ಮದ್ಯವನ್ನು ಉತ್ಪಾದನೆ ಮಾಡಿವೆ. ರಾಜ್ಯದಲ್ಲಿ ಮದ್ಯಸಾರವನ್ನು ಅವಲಂಬಿಸಿದ ಒಟ್ಟು ೬೯ ಕಾರ್ಖಾನೆಗಳಿವೆ. ಇವುಗಳಿಗೆ ನಾವು ಪ್ರತಿಸಾರಿ ರೆಕ್ಟಿಫೈಡ್ ಸ್ಪಿರಿಟ್ ಒದಗಿಸುತ್ತೇವೆ. ಆದರೆ ಇಲ್ಲಿ ರೆಕ್ಟಿಫೈಡ್ ಸ್ಪಿರಿಟ್ ಬೇಸ್ಡ್ ಇಂಡಸ್ಟ್ರಿ ಎಂದು ಏನು ಹೇಳುತ್ತೇವೆ ಇದರಲ್ಲಿ ಕೆಲವೊಂದು ಜನಗಳು ಇದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಇದು ಸರಿಯಾಗಿ ಅಭಿವೃದ್ಧಿ ಆಗುತ್ತಿಲ್ಲ. ಇಲ್ಲಿಂದ ರೆಕ್ಟಿಫೈಡ್ ಸ್ಪಿರಿಟ್ ಅನ್ನು ತೆಗೆದುಕೊಂಡು ಹೋಗಿ ಹೊರಗಡೆ ಕಳುಹಿಸುತ್ತಿದ್ದಾರೆಂದು ಬಹಳ ದೂರುಗಳು ಬಂದಿವೆ. ಆ ದೂರುಗಳ ಮೇಲೆ ಸಂಪೂರ್ಣವಾಗಿ ಸಿಒಡಿ. ತನಿಖೆ ಮಾಡಿಸುತ್ತಿದ್ದೇವೆಂದು ಹೇಳಬಯಸುತ್ತೇನೆ. ಇಲ್ಲಿ ನಾವು ತಯಾರಿಸತಕ್ಕ ಭಾರತೀಯ-ವಿದೇಶಿ ಮದ್ಯವನ್ನು ಮಾರಲು ಅಂಗಡಿಗಳಿಗೆ ಲೈಸೆನ್ಸ್ ಕೊಡಬೇಕಾಗಿದೆ. ಈ ವರ್ಷ ೨೯೧೭ ಅಂಗಡಿಗಳನ್ನು ಮತ್ತು ೧೨೮೨ ಬಾರ್‌ಗಳನ್ನು ನಡೆಸುವುದಕ್ಕೆ ಲೈಸೆನ್ಸ್ ಕೊಟ್ಟಿದ್ದೇವೆ. ಆದರೆ ಅಂಗಡಿಯವರು ಬಹಳ ಸಾರಿ ರೂಲ್ಸನ್ನು ವಯಲೇಟ್ ಮಾಡುತ್ತಿದ್ದಾರೆಂದು ಕೆಲವು ಜನರಿಂದ ದೂರುಗಳು ಬಂದಿವೆ. ಇದನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಹೇಳಿರುವುದರಿಂದ ಅಧಿಕಾರಿಗಳು ಮೇಲಿಂದ ಮೇಲೆ ಸರ್‌ಪ್ರೈಸ್ ಇನ್ಸ್‌ಪೆಕ್ಷನ್ ಮಾಡುತ್ತಿ

ದ್ದಾರೆ. ರೂಲ್ಸ್ ವಯಲೇಟ್ ಮಾಡಿದವರಿಗೆ ಮೊದಲು ಒಂದು ನೂರರಿಂದ ಒಂದು ಸಾವಿರದವರೆಗೆ ದಂಡ ವಿಧಿಸುತ್ತಿದ್ದೆವು: ಈಗ ಐದು ನೂರರಿಂದ ಐದು ಸಾವಿರದವರೆಗೆ ದಂಡ ವಿಧಿಸಬೇಕೆಂದು ಯೋಚಿಸುತ್ತಿದ್ದೇವೆ, ಅತಿ ಶೀಘ್ರದಲ್ಲಿ ಅದನ್ನು ಜಾರಿಗೆ ತರುತ್ತೇವೆಂದು ಹೇಳಬಯಸುತ್ತೇನೆ.

೬-೦೦ ಪಿ.ಎಂ.

ಹೋದ ವರ್ಷ ಈ ಮೋರ್ ಮಾಡಿಗ ಸೀಸೆಗಳಲ್ಲಿ ಸಾರಾಯಿಯನ್ನು ಮಾರತಕ್ಕಂಥ ಒಂದು ವ್ಯವಸ್ಥೆ ಈ ರಾಜ್ಯದಲ್ಲಿ ಮಾಡಿದ್ದೇವೆ. ಎಂದು ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿ ಬಹಳ ಸಾರಿ ಕೆಳಗಿನ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಈಗಾಗಲೇ ಹೇಳಿದ್ದಾರೆ. ಬಾಕಿ ಹೆಚ್ಚು ಇದೆ ನಿಮ್ಮ ಇಲಾಖೆಯಲ್ಲಿ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೇರೆ ಪಾರ್ಟಿಗಳು ಹಣವನ್ನು ಸರ್ಕಾರಕ್ಕೆ ಕೊಡುವುದರಲ್ಲಿ ಯಾವ ದುರುದ್ದೇಶದಿಂದಲೂ ನಾವು ಬಿಟ್ಟಿಲ್ಲ. ಕೆಲವು ಕಂಟ್ರಾಕ್ಟರ್‌ಗಳಿಗೆ ಕರ್ನಾಟಕ ನ್ಯಾಯಾಲಯ ತಡೆಯಾಜ್ಞೆ ಕೊಟ್ಟಿರುವುದರಿಂದ ಬಹಳ ಹಣವನ್ನು ವಸೂಲು ಮಾಡುವುದರಲ್ಲಿ ವಿಳಂಬವಾಗಿದೆ. ಆದರೆ ನಾವು ಈಗ ಮುಂದಿನ ವರ್ಷ ಅಬ್ಕಾರಿ ಕೊನೆಯ ದಿನದೊಳಗೆ ಸ್ಟೇ ವೆಕೇಟ್ ಮಾಡಿ ಎಲ್ಲಾ ಬಾಕಿಗಳನ್ನು ವಸೂಲು ಮಾಡಲಿಕ್ಕೆ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಮತ್ತು ಯಾರು ಬಾಕಿ ಕೊಡದೇ ಇರುತ್ತಾರೆ, ಅಂಥವರಿಗೆ ಹರಾಜಿನಲ್ಲಿ ಪಾರ್ಟಿಸಿಪೇಟ್ ಮಾಡಲಿಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎನ್ನುವ ಒಂದು ಅಭಿಪ್ರಾಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ ಬಾಕಿ ಕೊಡಬೇಕಾದಂಥ ಹಣಕ್ಕಾಗಿ ನಾವು ಕಂಟ್ರಾಕ್ಟ್‌ಗಳಿಂದ ಹದಿನೆಂಟು ಪರ್ಸೆಂಟ್ ಬಡ್ಡಿ ದರವನ್ನು ವಸೂಲು ಮಾಡುತ್ತಿದ್ದೇವೆ. ಅದೇ ರೀತಿಯಾಗಿ ಈಗಿರತಕ್ಕಂಥ ಒಂದು ತಿಂಗಳ ಕ್ಯಾಷ್ ಬ್ಯಾಲೆನ್ಸ್, ಹರಾಜು ವೇಳೆಯಲ್ಲಿ ಎರಡು ತಿಂಗಳ ಬ್ಯಾಂಕ್ ಗ್ಯಾರಂಟಿಯನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಆದರೆ ಮುಂದಿನ ಸಲ ಎರಡು ತಿಂಗಳ ಬ್ಯಾಂಕ್ ಗ್ಯಾರಂಟಿ ಅಥವಾ ಮೂರು ತಿಂಗಳ ಬ್ಯಾಂಕ್ ಗ್ಯಾರಂಟಿ ಮತ್ತು ಒಂದು ತಿಂಗಳ ಕ್ಯಾಷ್ ಬ್ಯಾಲೆನ್ಸನ್ನು ಹರಾಜು ವೇಳೆಯಲ್ಲಿ ಇಟ್ಟುಕೊಂಡು ಇದನ್ನು ಸಂಪೂರ್ಣವಾಗಿ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ.

ಇನ್ನು ಕಳ್ಳಭಟ್ಟಿ ವಿಚಾರದಲ್ಲಿ ಹೇಳುವುದಾದರೆ ಈ ಕಳ್ಳಭಟ್ಟಿಯನ್ನು ನಾವು ಸಂಪೂರ್ಣವಾಗಿ ತೆಗೆದುಹಾಕಿದ್ದೇವೆ ಎಂದು ಹೇಳಲಿಕ್ಕೆ ಬಯಸುವುದಿಲ್ಲ. ಏಕೆಂದರೆ ಕಳ್ಳಭಟ್ಟಿ ಸಮಾಜದ ಒಂದು ರೋಗ. ಎಷ್ಟು ಜನ ಬಡವರು ಆ ಉದ್ಯೋಗದಲ್ಲಿ ತೊಡಗಿದ್ದಾರೆ. ಅದನ್ನು ಸಾಧ್ಯವಾದ ಮಟ್ಟಿಗೆ ಕಡಿಮೆ ಮಾಡಲಿಕ್ಕೆ ಸರ್ಕಾರ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತದೆ ಎನ್ನುವ ಒಂದು ಅಭಿಪ್ರಾಯವನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಅದೇ ರೀತಿಯಾಗಿ ಈ ಕಳ್ಳಭಟ್ಟಿಯನ್ನು ಕಡಿಮೆ ಮಾಡುವ ಉದ್ದೇಶಕ್ಕೋಸ್ಕರ ನಾವು ಕಾನ್‌ಫಿಸ್‌ಕೇಷನ್ ಬಿಲ್ ಎಂದು ಏನು ಹೇಳುತ್ತೇವೆ, ಅದನ್ನು ಭಾರತ ಸರ್ಕಾರದ ಪ್ರೆಸಿಡೆಂಟ್‌ರವರಿಗೆ ಕಳುಹಿಸಿದ್ದೇವೆ. ಬಹುಶಃ ಅದು ಬೇಗ ಬರಬಹುದು ಎಂದು ನಾನು ಸದಸ್ಯರಿಗೆ ಹೇಳಬಯಸುತ್ತೇನೆ. ಇವತ್ತು ನಮ್ಮಲ್ಲಿ ಸಿಬ್ಬಂದಿ ಕೆಲಸ ಮಾಡುವಂಥವರು, ೩೦ ವರ್ಷ, ೧೫ ವರ್ಷ, ೨೫ ವರ್ಷ ಈ ಇಲಾಖೆಯಲ್ಲಿಯೇ ಕೆಲಸ ಮಾಡಿದ್ದೇವೆ, ಪ್ರೊಮೋಷನ್ ಇಲ್ಲ, ಸೀನಿಯಾರಿಟಿಲಿಸ್ಟ್ ಫೈನಲಿಸ್ ಆಗಿಲ್ಲ ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಮಾಡಿದ್ದಾರೆ ಅದಕ್ಕೋಸ್ಕರವಾಗಿ ನಾನ್ ಗೆಜೆಟೆಡ್ ಅಫಿಸಿಯಲ್ಸ್ ಸೀನಿಯಾರಿಟಿ ಲಿಸ್ಟನ್ನು ಫೈನಲೈಸ್ ಮಾಡಿದ್ದೇವೆ. ಗೆಜೆಟೆಡ್ ಆಫೀಸರ್ಸ್ ಲಿಸ್ಟ್ ಫೈನಲೈಸ್ ಆಗುವ ಮಟ್ಟದಲ್ಲಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿ ಹೋದ ವರ್ಷ ಆಯವ್ಯಯ ಕಾಲದಲ್ಲಿ ನಾನು ಹೇಳಿದ್ದೆ. ಅಬ್ಕಾರಿ ಸಿಬ್ಬಂದಿವರ್ಗದ ಕ್ಷೇಮನಿಧಿಯನ್ನು ಪೋಲೀಸ್ ಮತ್ತು ಅರಣ್ಯ ಇಲಾಖೆಗಳಲ್ಲಿರುವ ಹಾಗೆ ಮಾಡಲಾಗುತ್ತದೆ ಎಂದು ಹೋದ ಸಲ ನಾನು ಹೇಳಿದ್ದೆ. ಅದು ಕಾರ್ಯಾಚರಣೆಗೆ ಬರುವ ಕೊನೆಯ ಹಂತದಲ್ಲಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ,

ಕೆಲವೊಂದು ಸದಸ್ಯರುಗಳು ಈ ಇಲಾಖೆಯಲ್ಲಿ ಬಹಳ ದೇವಸ್ಥಾನಗಳಲ್ಲಿ ಇದ್ದಲ್ಲಿ ಮದ್ಯದ ಅಂಗಡಿಗಳನ್ನು ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಸದಸ್ಯರು ಮಾನ್ಯ ಧರ್ಮಸಿಂಗ್‌ರವರು, ಖರ್ಗೆಯವರು, ವೆಂಕಟರಾಮಯ್ಯನವರು ಇದರ ಬಗ್ಗೆ ಎಲ್ಲರೂ ವ್ಯಕ್ತ ಮಾಡಿದ್ದಾರೆ, ಆದರೆ ಸಾಧ್ಯವಾದ ಮಟ್ಟಿಗೆ ಅವರು ಕೊಟ್ಟಿರತಕ್ಕಂಥ ಎಲ್ಲಾ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಯಾವ ಯಾವ ದೇವಸ್ಥಾನ, ಶಾಲೆಗಳ ಹತ್ತಿರ ಮದ್ಯದ ಅಂಗಡಿಗಳು ಇವೆ, ಅಂತಹವುಗಳ

ಕಡೆ ಮಧ್ಯದ ಅಂಗಡಿಗಳನ್ನು ತೆಗೆಸಿಹಾಕಲಿಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನ ಮಾಡುತ್ತೇನೆ ಎನ್ನುವ ಒಂದು ಅಭಿಪ್ರಾಯವನ್ನು ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಡಿ.ಟಿ. ಜಯಕುಮಾರ್‌ರವರು ಈ ಇಲಾಖೆಯು ಬಹಳ ಚೆನ್ನಾಗಿ ಕೆಲಸ ಮಾಡಿದೆ ಎಂದು ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಾ ಮಾನ್ಯ ಸದಸ್ಯರಾದ, ಹಿರಿಯ ಸದಸ್ಯರಾದ ಖರ್ಗೆಯವರು ಬಹಳ ಆವೇಶದಲ್ಲಿ ಕೆಲವೊಂದು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಆದರೆ ಸದಸ್ಯರಿಗೆ ಆ ಕೋಪ ಯಾವ ರೀತಿ ಬಂದಿತ್ತೋ ನನಗಂತೂ ಗೊತ್ತಿಲ್ಲ. ಬಾಟ್ಲಿಂಗ್ ಹಗರಣದ ಬಗ್ಗೆ, ಸ್ಪಿರಿಟ್ ಸ್ಕ್ಯಾಂಡಲ್ಸ್ ಬಗ್ಗೆ ಹೇಳಿದ್ದಾರೆ. ಈ ಬಾಟ್ಲಿಂಗ್ ವಿಚಾರದಲ್ಲಿ ....

ಶ್ರೀ ಎಂ. ರಾಮಪ್ಪ.ಸ್ಕ್ಯಾಂಡಲ್ಸ್ ಎನ್ನುವುದನ್ನು ನೀವೇ ಒಪ್ಪಿಕೊಂಡಿದ್ದೀರಿ.

ಶ್ರೀ ರಮೇಶ ಸಿ. ಜಿಗಜಿಣಗಿ.—ಆ ತರಹ ಹೇಳಿದ್ದಾರೆ ಎಂದು ಹೇಳಿದ್ದೇನೆ. ಒಪ್ಪಿಕೊಳ್ಳುವುದು ನಿಮ್ಮ ಅಭಿಪ್ರಾಯ. ಸುಪ್ರೀಂ ಕೋರ್ಟಿನಲ್ಲಿ ಕೇಸ್ ನಡೆಯುತ್ತಿರುವುದರಿಂದ ಅದರ ಬಗ್ಗೆ ಯಾವ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ಬಯಸುವುದಿಲ್ಲ. ಈ ಸ್ಪಿರಿಟ್ ಸ್ಕ್ಯಾಂಡಲ್ಸ್ ಬಗ್ಗೆ ಹೇಳಿದ್ದಾರೆ. ನ್ಯಾಯಮೂರ್ತಿ ಬೋಪಣ್ಣ ತನಿಖಾ ಆಯೋಗದಿಂದ ವಿಚಾರಣೆ ಆಗುತ್ತಿದೆ. ಮಾನ್ಯ ಸದಸ್ಯರು ಬೇಕಾದರೆ ಅಲ್ಲಿ ಹೋಗಿ ಹೇಳಬಹುದು. ಇನ್ನೊಂದು ವಿಚಾರವನ್ನು ನಾನು ಸದನಕ್ಕೆ ಮತ್ತು ಇಲ್ಲಿರತಕ್ಕಂಥ ಸದಸ್ಯರುಗಳ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಕೇರಳ ಮತ್ತು ತಮಿಳುನಾಡಿನಲ್ಲಿ ಲಿಕ್ಕರ್ ಟ್ರೇಡಿಂಗ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ಅದೇ ರೀತಿ ಕರ್ನಾಟಕದಲ್ಲೂ ಏತಕ್ಕೆ ಮಾಡಬಾರದು ಎಂದು ಎಲ್ಲಾ ವಲಯಗಳಿಂದ ಸಲಹೆ ಸೂಚನೆಗಳು ಬಂದಿವೆ. ಸರ್ಕಾರದ ಹಿತದೃಷ್ಟಿಯಿಂದ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ಸರಿಯಾಗಿ ಯೋಚನೆ ಮಾಡಿ ಕರ್ನಾಟಕ ರಾಜ್ಯದಲ್ಲಿ ಲಿಕ್ಕರ್ ಟ್ರೇಡಿಂಗ್ ಕಾರ್ಪೊರೇಷನ್ ಮಾಡಬೇಕೋ ಬೇಡವೋ ಎಂಬುದರ ಬಗ್ಗೆ ಯೋಚನೆ ಮಾಡಿ ಒಂದು ಒಳ್ಳೆಯ ನಿರ್ಧಾರವನ್ನು ಬಹು ಬೇಗ ತೆಗೆದುಕೊಳ್ಳುತ್ತೇವೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇವತ್ತು ನನ್ನ ಇಲಾಖೆಯ ಮೇಲೆ ಬಹಳ ಕಡಿಮೆ ಪ್ರಮಾಣದಲ್ಲಿ ಸದಸ್ಯರು ಮಾತನಾಡಿದರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಕೆ ಬಿ. ಶಾಣಪ್ಪ.—ನನ್ನ ಸಲಹೆ ಏನಾಯಿತು?

ಶ್ರೀ ರಮೇಶ್ ಸಿ. ಜಿಗಜಿಣಗಿ.—ದೇವಸ್ಥಾನ ಮತ್ತು ಶಾಲೆಯ ಹತ್ತಿರ ಮಧ್ಯದ ಅಂಗಡಿಗಳು ಇದೆ, ಇದನ್ನು ತೆಗೆಸಬೇಕು ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತೆ ಎಕ್ಸೈಜ್ ಡಿಪಾರ್ಟ್‌ಮೆಂಟನ್ನು ರೀ-ಆರ್ಗನೈಸ್ ಮಾಡಿ ಡೆಪ್ಯುಟಿ ಕಮಿಷನರ್‌ಗವರಿಗೆ ಆ ಅಧಿಕಾರವನ್ನು ಕೊಡಬಾರದು ಎಂದು ಶಾಣಪ್ಪನವರು ಹೇಳಿದ್ದಾರೆ. ಅವರ ಸಲಹೆಯನ್ನು ತೆಮನದಲ್ಲಿಟ್ಟುಕೊಳ್ಳುತ್ತೇನೆ. ಎಲ್ಲಾ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಅಬ್ಕಾರಿ ಇಲಾಖೆಯ ಬೇಡಿಕೆಯ ಬಗ್ಗೆ ಮಾನ್ಯ ರಾಜ್ಯಪಾಲರು ಮಾಡಿರತಕ್ಕಂಥ ಶಿಫಾರಸ್ಸಿನ ಮೇರೆಗೆ ಮಂಜೂರಾತಿ ಕೊಡಬೇಕೆಂದು ತಮ್ಮ ಮುಖಾಂತರ ಎಲ್ಲಾ ಸದಸ್ಯರನ್ನೂ ಕೇಳಿಕೊಂಡು, ತಮ್ಮನ್ನೂ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್. ಮಾನ್ಯ ಅಧ್ಯಕ್ಷರೆ ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದಾಗ ಚೆನ್ನಾಗಿ ಉತ್ತರ ಹೇಳಿದ್ದಾರೆ. ಖರ್ಗೆಯವರು ಪ್ರಸ್ತಾಪ ಮಾಡಿದಾಗ ಸಬ್ ಜುಡೀಸ್ ಆಗುತ್ತದೆ ಎಂಬ ವಿಚಾರ ಬಂತಳು. ಅರಾಕ್ ಎಷ್ಟು ತಯಾರು ಮಾಡುತ್ತೀರಿ ? ಬಾಟ್ಲಿಂಗ್ ಎಷ್ಟು ತಯಾರು ಮಾಡುತ್ತೀರಿ ? ? ಮಾರಾಟ ಎಷ್ಟು ? ನಿಯಂತ್ರಣ ಎಷ್ಟು ಎಂಬುದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ಬಾಟ್ಲಿಂಗ್ ಮುಚ್ಚ ಮಾಡುವುದು ಬೇರೆ ಅರ್‍ಯಾಕನ್ನು ತಯಾರು ಮಾಡುವುದು ಬೇರೆ. ಅದರ ಮೇಲೆ ಸರ್ಕಾರಕ್ಕೆ ಹತೋಟಿ ಇದೆಯೋ ? ಎಂದು ಕೇಳಿದ್ದೆ. ಬೇರೆ ತರಹದ ವ್ಯವಹಾರ ಆಗುವುದಕ್ಕೆ ಅದರಲ್ಲಿ ಅವಕಾಶ ಇದೆ. ಆದ್ದರಿಂದ ನಾನು ಕೇಳುತ್ತಿದ್ದೇನೆ. ಡ್ರಗ್ ಅಡಿಕ್ಟ್ ಇದೂ ಕೂಡ ನಿಮ್ಮ ಖಾತೆಗೆ ಬರುತ್ತದೆ. ಗಾಂಜಾ, ಅಫೀಮು ಮತ್ತು ಮೆಡಿಕಲ್ ಷಾಪ್‌ಗಳಲ್ಲಿ ಸಿಗತಕ್ಕಂಥ ಟ್ಯಾಬ್ಲೆಟ್ಸ್ ಏನಿದೆ ಅದರ ಬಗ್ಗೆ ನಿಯಂತ್ರಣ ಇವುಗಳ ಬಗ್ಗೆ ಯಾವ ತರಹದ ಕೆಲಸ ನಿಮ್ಮ ಇಲಾಖೆಯು ಮಾಡುತ್ತಿದೆ ನೀವು ಎಷ್ಟೆಷ್ಟು ಕೇಸ್‌ಗಳನ್ನು ಹಿಡಿದಿದ್ದೀರಿ ಎಂಬುದನ್ನು ಹೇಳಬೇಕು. ದೇವಸ್ಥಾನದ

ಪಕ್ಕ ಮದ್ಯದ ಅಂಗಡಿಗಳು ಇರುವ ಬಗ್ಗೆ ಹೇಳಿದ್ದಾರ. ಅದು ನಡೆದುಹೋಗಲಿ ಆದರೆ ಸ್ಲಮ್‌ಗಳಲ್ಲಿ ಕೂಲಿಕಾರರು ಯಾರು ಇದ್ದಾರೆ ಅಂಥ ಪ್ರದೇಶದಲ್ಲ ಇರುವ ಮದ್ಯದ ಅಂಗಡಿಗಳನ್ನು ಬಂದ್ ಮಾಡ ಬೇಕು. ನಮ್ಮ ಕಾಲದಲ್ಲೂ ಕೂಡ ಹೇಳಿದ್ದೇವೆ. ಆದರೆ ತಾವು ಬಡವರು ಇರುವ ಕಡೆ ಮದ್ಯದ ಅಂಗಡಿಗಳನ್ನು ಹೆಚ್ಚು ಮಾಡುತ್ತಿದ್ದೀರಿ ಅದನ್ನು ಮಾಡಬಾರದು. ನಿಮಗೆ ಆದಾಯ ಬರುತ್ತದೆ, ದುಡ್ಡು ಹೆಚ್ಚು ಬರುತ್ತದೆ ಎಂಬ ದೃಷ್ಟಿಯಿಂದ ಎಲ್ಲಾ ಕಡೆ ಮಾಡುವ ಬದಲು ಬಡವರು ಇರುವ ಕಡೆ ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಬಾಟಲ್‌ಗಳ ಬಗ್ಗೆ, ಅರ್ರಾಕ್ ಮಾಡುವ ಬಗ್ಗೆ ಮತ್ತು ಮುಚ್ಚಳದ ಹಾಗೂ ಕಂಟ್ರೋಲ್ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಧರ್ಮಸಿಂಗ್ ರವರು ಕೇಳಿದ್ದಾರೆ. ಎಲ್ಲದರ ಮೇಲೂ ಸಂಪೂರ್ಣವಾದ ಒಂದು ಹತೋಟಿ ಇದೆ. ರಾಜ್ಯದಲ್ಲಿ ಎಲ್ಲಾ ಕಡೆ ವೇರ್‌ಹೌಸ್ ಇರುತ್ತವೆ. ಅಲ್ಲಿ ಅಧಿಕಾರಿಗಳು ಇದ್ದಾರೆ. ಸಂಪೂರ್ಣವಾಗಿ ಅವರ ಕಸ್ಟಡಿಯಲ್ಲಿ ಎಲ್ಲಾ ಇರುತ್ತವೆ. ಬಾಟ್ಲಿಂಗ್ ಯೂನಿಟ್‌ನಲ್ಲಿ ಅರ್ರಾಕನ್ನು ಕೊಡುತ್ತಿದ್ದೇವೆ. ಡೆಪ್ಯುಟಿ ಸೂಪ ರಿಂಟೆಂಡೆಂಟ್ ಆಫ್ ಎಕ್ಸೈಜ್ ಅವರ ಮೇಲ್ವಿಚಾರಣೆಯಲ್ಲಿ ಕೆಲಸ ನಡೆಯುತ್ತಿದೆ. ಎಲ್ಲಾ ಅರ್ರಾಕ್‌ನ್ನು ಅವರ ಕಸ್ಟಡಿಯಲ್ಲಿ ಕೊಟ್ಟಿರುತ್ತೇವೆ. ಅರ್ರಾಕ್ ಕಂಟ್ರೋಲ್, ಗಾಂಜಾ, ಅಫೀಮು ಇವೆಲ್ಲಾ ತಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು ಎಂದು ಹೇಳಿದ್ದಾರೆ ಈ ವರ್ಷ ಎರಡೂವರೆ ಕೆ.ಜಿ. ಗಾಂಜಾವನ್ನು ನಮ್ಮ ಅಧಿಕಾರಿಗಳು ಹಿಡಿದಿದ್ದಾರೆ, ಹಿಡಿದು ವಶಪಡಿಸಿಕೊಂಡಿದ್ದಾರೆ. ಸ್ಲಂಗಳಲ್ಲಿ ಬಡವರು ಹೆಚ್ಚಾಗಿರುವ ಕಡೆಗಳಲ್ಲಿ ಮದ್ಯದ ಅಂಗಡಿಗಳನ್ನು ಕೊಡಬೇಡಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಆ ರೀತಿ ಅಂಗಡಿಗಳನ್ನು ಎಲ್ಲೂ ಕೊಡಬಾರದು ಎಂದು ಇಲಾಖೆಯಲ್ಲಿ ತೀರ್ಮಾನ ತೆಗೆದು ಕೊಂಡಿದ್ದೇವೆ. ಬಡವರು ಇರುವ ಕಡೆ ಅಂಗಡಿಗಳನ್ನು ತೆರೆಯುವುದಕ್ಕೆ ಅವಕಾಶ ಕೊಡಬೇಡಿ ಎಂದು ಅಧಿಕಾರಿಗಳಿಗೆ ಸಲಹೆ ಕೊಡುತ್ತೇನೆ,

ಶ್ರೀ ಆರ್. ವೆಂಕಟರಾಮಯ್ಯ.— ೫೦ ಕೋಟಿ ರೂಪಾಯಿ ಬಾಕಿ ವಸೂಲಿ ಆಗಬೇಕಾಗಿದೆ. ಅದೇನೂ ಕಡಿಮೆ ಮೊತ್ತ ಅಲ್ಲ. ಅವರೆಲ್ಲಾ ಲಾಬಿ ಮಾಡಿ ವಸೂಲು ಮಾಡದಂತೆ ತಡೆಹಿಡಿದಿದ್ದಾರೆ ಎಂಬ ಆಪಾದನೆ ಇದೆ. ಹೆಂಡ ಕೊಡುವ ಬದಲು ಪಾಯಿಸನ್ ಕೊಡುತ್ತಿದ್ದಾರೆ, ಜೊತೆಗೆ ಕ್ಲೋರಲ್ ಹೈಡ್ರೇಟ್ ಉಪಯೋಗಿಸುತ್ತಿದ್ದಾರೆ. ಅದರ ವಿಷಯವನ್ನು ಮಾನ್ಯ ಸಚಿವರು ಹೇಳಲಿಲ್ಲ. ಬಾಗೇಪಲ್ಲಿ ಯಲ್ಲಿ ಎರಡು ಲಕ್ಷ ರೂಪಾಯಿ ಅಕ್ರಮ ವ್ಯವಹಾರ ನಡೆದಿದ್ದು ಸಂಬಂಧಪಟ್ಟ ಕಂಟ್ರಾಕ್ಟರನ್ನು ಒಂದು ಗಂಟೆ ಕೂಡ ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟುಕೊಳ್ಳದೇ ಬಿಟ್ಟುಬಿಟ್ಟರು. ಆ ವಿಚಾರ ಏನಾಯಿತು ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರ ಹತ್ತಿರ ಏನಾದರೂ ಮಾಹಿತಿ ಇದ್ದರೆ ನನಗೆ ಕೊಡಲಿ. ಅದರ ಮೇಲೆ ಕ್ರಮ ಕೈಗೊಳ್ಳುತ್ತೇನೆ. ಸೇಂದಿಯಲ್ಲಿ ಕ್ಲೋರಲ್ ಹೈಡ್ರೇಟ್ ಸೇರಿಸುತ್ತಿ ದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ನಮ್ಮ ಗಮನಕ್ಕೆ ಬಂದಿಲ್ಲ. ಹಂತಹಂತ ವಾಗಿ ಸೇಂದಿಯನ್ನು ಹೊಡೆದೋಡಿಸಬೇಕು ಎಂಬ ವಿಷಯ ಸರ್ಕಾರದ ಮುಂದೆ ಇದೆ ಎಂದು ಹೇಳ ಬಯಸುತ್ತೇನೆ. ಅರಿಯರ್ಸ್ ಬಗ್ಗೆ ಹೇಳಬೇಕಾದರೆ, ೫೫ ಕೋಟಿ ರೂಪಾಯಿ ಸರ್ಕಾರಕ್ಕೆ ಬರಬೇಕಾಗಿದೆ ಅದರ ಬಗ್ಗೆ ಸದನದ ಮುಂದೆ ಸವಿಸ್ತಾರವಾಗಿ ಹೇಳಿದ್ದೇನೆ. ಮಾನ್ಯ ಸದಸ್ಯರ ಭಾವನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಕಂಟ್ರಾಕ್ಟರ್ ಜೊತೆ ಸಾಮೀಲಾಗಿ ಅವರನ್ನು ಬಿಡುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದುದು ಎಂದು ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಂ. ರಾಮಪ್ಪ.—೫೦ ಕೋಟಿ ರೂಪಾಯಿ ಬಾಕಿ ಇದೆ ಎಂದು ಹೇಳಿದ್ದಾರೆ. ಕಂಟ್ರಾಕ್ಟರು ಗಳು ಒಂದು ತಮಾಷೆ ಮಾಡಿದ್ದಾರೆ. ಒಂದು ತಿಂಗಳ ರೊಕ್ಕ ಕೊಟ್ಟು ಎರಡು ತಿಂಗಳ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದಾರೆ. ಇನ್ನು ಮೂರು ತಿಂಗಳು ಕೋರ್ಟಿನಿಂದಲೋ ಇನ್ನೊಂದು ರೀತಿಯಲ್ಲೋ ಜಾಸ್ತಿ ತೆಗೆದುಕೊಂಡು ಬಾಕಿ ನಿಲ್ಲಿಸಿದ್ದಾರೆ. ಕಂಟ್ರಾಕ್ಟರುಗಳು ಯಾರು ಎಂದರೆ ಕಂಟ್ರಾಕ್ಟರ್ ಡ್ರೈವರ್ ಗಳು, ಕಂಟ್ರಾಕ್ಟರುಗಳ ಮನೆಯಲ್ಲಿ ಕೆಲಸ ಮಾಡುವವರು ಅವರ ಹೆಸರುಗಳಿವೆ. ಅವರಿಂದ ಹೇಗೆ ವಸೂಲಿ ಮಾಡುತ್ತೀರಿ ? ಕಂಟ್ರಾಕ್ಟರ್ ಎಂದರೆ ಅದಕ್ಕಿರುವ ನಾರ್ಮ್ಸ್ ಏನು ? ಎರಡು ತಿಂಗಳು, ಮೂರು ತಿಂಗಳು ಗ್ಯಾರಂಟಿ ಕೊಟ್ಟು ಆರೇಳು ತಿಂಗಳು ಬಾಕಿ ಕೊಡದೆ ಉಳಿಸಿಕೊಳ್ಳುತ್ತಾರೆ. ಅವರಿಗೆ ಏನು ನಾರ್ಮ್ಸ್ ಇದೆ ? ಐ.ಎಂ.ಎಫ್.ಎಲ್.ಗೆ ಲೈಸೆನ್ಸ್ ಕೊಡುವುದರಲ್ಲಿ ಅವ್ಯವಹಾರ ನಡೆದಿದೆ ಎಂದು ಕ್ಲೀನಾಗಿ ಹೇಳಬೇಕಾಗಿದೆ. ಉದಾಹರಣೆಗೆ, ನನ್ನ ಮಗನ ಹೆಸರಿನಲ್ಲಿ ಲೈಸೆನ್ಸ್‌ಗೆ ಅಪ್ಲೈ

ಮಾಡಿದ್ದೆ. ಫಸ್ಟ್ ಅಪ್ಲಿಕೇಷನ್ ಯಾರಿಂದ ಬರುತ್ತದೋ ಅವರಿಗೆ ಲೈಸೆನ್ಸ್ ಕೊಡಬೇಕೆಂದಿದೆ. ಆದರೆ ನನ್ನ ಮಗ ಆದಮೇಲೆ ಅರ್ಜಿ ಕೊಟ್ಟಿರುವ ಮಿಕ್ಕವರಿಗೆ ಕೊಟ್ಟಿದ್ದಾರೆ. ನನ್ನ ಮಗನಿಗೆ ಕೊಟ್ಟಿಲ್ಲ. ನನ್ನ ಮಗನಿಗೆ ಕೊಡಬೇಕೆಂದು ನಾನು ಕೇಳುವುದಿಲ್ಲ. ಆದರೆ ವ್ಯವಹಾರ ನಡೆದಿರುವ ವಿಚಾರದಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳುವುದಕ್ಕೋಸ್ಕರ ಮತ್ತು ಅದಕ್ಕೆ ಜನತಾ ಪಾರ್ಟಿಯವರು ಎಲ್ಲರೂ ಸಾಮಿಲಾಗಿದ್ದಾರೆಂದು ಡೈರೆಕ್ಟಾಗಿ ಹೇಳುವುದಕ್ಕೋಸ್ಕರ ಹೇಳುತ್ತಿದ್ದೇನೆ. ಅದಕ್ಕೆ ಸಮಾಧಾನ ಹೇಳಿ.

ಶ್ರೀ ರಮೇಶ್ ಆ ಜಿಗಜಿಣಗಿ.—ಕಂಟ್ರಾಕ್ಟರುಗಳ ಡ್ರೈವರ್ಸ್ ಹೆಸರಿನಲ್ಲಿ, ಬೇನಾಮಿ ಹೆಸರಿನಲ್ಲಿ ಹರಾಜು ಟೈಮಿನಲ್ಲಿ ಭಾಗವಹಿಸಿ ಆಕ್ಷನ್ ಹೊಡೆಯುತ್ತಾರೆ, ಸರಿಯಾಗಿ ದುಡ್ಡು ಕೊಡುವುದಿಲ್ಲ ಎಂದು ರಾಮಪ್ಪನವರು ಹೇಳುತ್ತಾರೆ. ಆದರಲ್ಲಿ ಸತ್ಯಾಂಶ ಇದೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಸಾಲ್ವೆನ್ಸಿ ಸರ್ಟಿಫಿಕೇಟನ್ನು ಆಕ್ಷನ್ ಟೈಂನಲ್ಲಿ ಕೊಡಬೇಕೆಂದು ನಿಯಮ ಹಾಕಿಕೊಂಡಿದ್ದೇವೆ. ಸಿ ಅಂಡ್ ಡಿ ಕೊಡುವುದರಲ್ಲಿ ಅವ್ಯವಹಾರ ನಡೆಯುತ್ತಿವೆ ಎಂದು ಆರೋಪ ಮಾಡುತ್ತಿದ್ದಾರೆ. ಅದು ಸರಿಯಲ್ಲ. ಅವರ ಮಗನ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ, ನನ್ನ ಮಗ ಲೈಸೆನ್ಸ್‌ಗೆ ಅಪ್ಲೈ ಮಾಡಿದ್ದರೂ ಅವನಿಗೆ ಕೊಡದೆ ಅವನ ಹಿಂದೆ ಬಂದವರಿಗೆ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅವರ ಮಗನ ಅಪ್ಲಿಕೇಷನ್ ಬಂದಿದ್ದರೆ, ಅವರ ನಂತರ ಬಂದವರಿಗೆ ಸ್ಯಾಂಕ್ಷನ್ ಮಾಡಿದ್ದರೆ ಇನ್ನೊಂದು ಸಾರಿ ಆ ವಿಚಾರವನ್ನು ರೀಕನ್‌ಸಿಡರ್ ಮಾಡಿಸುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ರಾಮಪ್ಪ.—ಅವರು ನನ್ನ ಮಗನಿಗೆ ಕೊಡುವುದು ಬೇಡ. ಆದರೆ ಅವರ ವ್ಯವಹಾರದ ಬಗ್ಗೆ ತಿಳಿಸಿದ್ದೇನೆ. ಎರಡನೆಯದಾಗಿ ಸಾಲ್ವೆನ್ಸಿ ಸರ್ಟಿಫಿಕೇಟ್ ಬಗ್ಗೆ ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ.- ಅವರ ಮಗನ ವಿಷಯ ರೀಕನ್‌ಸಿಡರ್ ಮಾಡುತ್ತೇವೆ ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ರಾಮಪ್ಪ.—ನನಗೆ ಬೇಕಾಗಿಲ್ಲ ಎಂದು ಹೇಳಿದ್ದೇನೆ. ಆ ರೀತಿ ಕೇಳಿ ಲೈಸೆನ್ಸ್ ತೆಗೆದುಕೊಳ್ಳುವ ನೀಚ ನಾನಲ್ಲ. ಸಾಲ್ವೆನ್ಸಿ ಎಂದರೆ ಇನ್‌ಕಂ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಬಾಕಿ ಇಲ್ಲ ಎಂದು ತರುತ್ತಾರೆ. ತಂದಮೇಲೆ ಅವರಿಗೆ ಕೊಡುತ್ತೀರಿ. ಕ್ರಮ ತೆಗೆದುಕೊಳ್ಳುವುದಕ್ಕೆ ನಿಮ್ಮಲ್ಲಿ ಏನು ಅಧಿಕಾರ ಇದೆ ? ನಾರ್ಮ್ಸ್ ಏನಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ —ಮುಖ್ಯವಾಗಿ ಶರಣಪ್ಪನವರು ಕೇಳಿದ್ದನ್ನು ನಾನು ಕೇಳಬೇಕೆಂದಿದ್ದೆ. ಪ್ರತಿಯೊಂದು ಫೈಲುಗಳೂ ಎಕ್ಸೈಜ್ ಸೂಪರಿಂಟೆಂಡೆಂಟ್‌ನಿಂದ ಡೆಪ್ಯುಟಿ ಕಮಿಷನರ್‌ಗೆ ಹೋಗಬೇಕು. ಡೆಪ್ಯುಟಿ ಕಮಿಷನರ್ ೮ ದಿವಸ ಟೂರ್ ಇದ್ದರೆ ಆ ಖಾತೆ ಕೆಲಸ ನಿಂತುಹೋಗುತ್ತದೆ. ಆದ್ದರಿಂದ ಎಲ್ಲ ಅಧಿಕಾರವನ್ನು ಎಕ್ಸೈಜ್ ಸೂಪರಿಂಟೆಂಡೆಂಟ್ ಅವರಿಗೆ ಕೊಟ್ಟು ಆಡಳಿತ ಸುಧಾರಣೆ ಮಾಡುತ್ತೀರಾ ? ಲಿಕ್ಕರ್ ಟ್ರೇಡ್ ಕಾರ್ಪೊರೇಷನ್ ಮಾಡುವ ಬಗ್ಗೆ ಸಲಹೆ ಕೊಟ್ಟಿದ್ದೇವೆ. ಅದನ್ನು ಮಾಡಬೇಕೋ ಬಿಡಬೇಕೋ ಎಂಬ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಿ ಅನೌನ್ಸ್ ಮಾಡುತ್ತೇವೆ ಎಂದು ಹೇಳಿದರು. ನಾವು ಕೇಳಿದ್ದು ಲಿಕ್ಕರ್ ಟ್ರೇಡಿಂಗ್ ಕಾರ್ಪೊರೇಷನ್ ಮಾಡುವ ಬಗ್ಗೆ, ಬಿಡುವ ಬಗ್ಗೆ ಅಲ್ಲ. ಸುಪ್ರೀಂ ಕೋರ್ಟಿಗೆ ಕೇಸ್ ಹೋದಮೇಲೆ ಅವರು ಹೇಳಿದ್ದು ಏನೆಂದರೆ, ಹೈಕೋರ್ಟ್ ಡೈರೆಕ್ಷನ್ ಪ್ರಕಾರ ರೂಲ್ಸ್ ಅಮೆಂಡ್ ಮಾಡಿ ಮಾರ್ಚ್ ಆದಮೇಲೆ ಯಾವರೀತಿ ಹೋಗಬೇಕು ಎಂಬ ಬಗ್ಗೆ ಹೇಳುತ್ತೇವೆ ಹೈಕೋರ್ಟ್ ಡೈರೆಕ್ಷನ್ ಫಾಲೋ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಮುಖ್ಯಮಂತ್ರಿಗಳು ಸದನದಲ್ಲಿ ಹೇಳಿದ್ದಾರೆ. ಸುಪ್ರೀಂ ಕೋರ್ಟಿನಲ್ಲಿ ಈಗ ಕೇಸ್ ಇದೆ. ಈ ಸಂದರ್ಭದಲ್ಲಿ ಹೈಕೋರ್ಟ್ ಡೈರೆಕ್ಷನ್ ಕೊಟ್ಟಿದ್ದನ್ನು ಫಾಲೋ ಮಾಡುತ್ತೀರೋ ಅಥವಾ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬರುವವರೆಗೆ ತಡೆಯುತ್ತೀರೋ ಹೇಗೆ ? ಮೂರನೇ ವಿಚಾರ ಏನೆಂದರೆ, ಅನೇಕ ದೇವಸ್ಥಾನಗಳ ಪಕ್ಕದಲ್ಲಿ, ಸ್ಕೂಲ್‌ಗಳ ಪಕ್ಕದಲ್ಲಿ ಸಾರಾಯಿ ಅಂಗಡಿಗಳನ್ನು ಕೊಡುತ್ತಿದ್ದಾರೆ. ಷೆಡ್ಯೂಲ್ಡ್ ಲೊಕ್ಯಾಲಿಟಿಯಲ್ಲಿ ಕೊಡುತ್ತಿದ್ದಾರೆ. ಆದರ ಬಗ್ಗೆ ಸ್ಟ್ರಿಕ್ಟಾಗಿ ಹೇಳಿದ್ದೇವೆ ಎಂದರೂ ಕೂಡ ಕಂಟ್ರಾಕ್ಟರುಗಳು ಅಲ್ಲಿರತಕ್ಕ ಎಕ್ಸೈಜ್ ಸೂಪರಿಂಟೆಂಡೆಂಟ್ ಮತ್ತು ಇನ್‌ಸ್ಪೆಕ್ಟರುಗಳು ಮೇಲೆ ಪ್ರಭಾವ ಬೀರಿ ಅಂಗಡಿ ತೆಗೆದುಕೊಳ್ಳುತ್ತಾರೆ. ಅಲ್ಲಿಟ್ಟರೆ ವ್ಯಾಪಾರ ಆಗುತ್ತದೆ ಇಲ್ಲದಿದ್ದರೆ ಆಗುವುದಿಲ್ಲ ಎಂದು ಒತ್ತಾಯ ಮಾಡಿ ಅಲ್ಲೇ ಇರಿಸುತ್ತಾರೆ. ದೇವಸ್ಥಾನದ ಪಕ್ಕದಲ್ಲಿರುವುದರಿಂದ ಪೂಜಾರಿಗಳು ಕೆಲವು

ಕಡೆ ಕುಡಿಯುತ್ತಾರೆ. ಸ್ಕೂಲ್ ಪಕ್ಕದಲ್ಲಿ ಇರುವುದರಿಂದ ಟೀಚರ್‌ಗಳು ಕುಡಿಯುತ್ತಾರೆ. ಆದ್ದರಿಂದ ಸರ್ಕಾರದವರು ದೇವಸ್ಥಾನದಲ್ಲಿ ಮತ್ತು ಸ್ಕೂಲಿನಲ್ಲೇ ಮದ್ಯವನ್ನು ಇಡತಕ್ಕ ವ್ಯವಸ್ಥೆ ಮಾಡುತ್ತೀರಾ? ಅದಕ್ಕೇನಾದರೂ ರೂಲ್ ಅಮೆಂಡ್‌ಮೆಂಟ್ ಮಾಡುತ್ತೀರಾ?

ಶ್ರೀ ಡಿ. ಜಿ. ಬಸವನಗೌಡ.—ಕೆಲವು ದೇವರುಗಳೂ ಕಲಿತಿವೆ, ಪೂಜಾರಿ ಮಾತ್ರವಲ್ಲ ಕುಡಿಯುವುದು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಹಿರಿಯ ಸದಸ್ಯರು ಮೂರು ನಾಲ್ಕು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೋರ್ಟ್ ಆಜ್ಞೆ ಪ್ರಕಾರ ಕೆಲಸ ಮಾಡುತ್ತೀರೋ ಅಥವಾ ಸುಪ್ರೀಂ ಕೋರ್ಟ್ ಆಜ್ಞೆ ಬರುವವರೆಗೆ ಕಾಯುತ್ತೀರೋ ಎಂದು ಕೇಳಿದ್ದಾರೆ. ನಾವು ಅಲ್ಲಿಯವರೆಗೆ ಕಾಯುವುದಿಲ್ಲ. ಕೋರ್ಟ್ ತೀರ್ಮಾನದ ಪ್ರಕಾರ ಇಲಾಖಾವತಿಯಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಡೆಪ್ಯುಟಿ ಕಮೀಷನರ್ ಅವರಿಗೆ ಕೆಲಸ ಕೊಡಬಾರದು, ಎಕ್ಸೈಜ್ ಸೂಪರಿಂಟೆಂಡೆಂಟರಿಗೇ ಅಧಿಕಾರ ಕೊಡಬೇಕೆಂದು ಹೇಳಿದ್ದಾರೆ. ಅಧಿಕಾರಿಗಳ ಜೊತೆ ಚರ್ಚೆ ಮಾಡಿ ರೀ ಆರ್ಗನೈಸ್ ಮಾಡುವುದಕ್ಕೆ ಸಂಪೂರ್ಣವಾಗಿ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಮತ್ತೆ ಅಂಗಡಿಗಳು ಕೊಡುವ ಬಗ್ಗೆ ಹೇಳಿದ್ದಾರೆ. ಅವರ ಸಲಹೆಯನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಶಾಲೆ ಮತ್ತು ದೇವಸ್ಥಾನಗಳ ಹತ್ತಿರ ಅಂಗಡಿಗಳನ್ನು ಇಡಬಾರದು ಎಂದು ಹೇಳಿದ್ದೇವೆ.

ಶ್ರೀ ಕೆ. ಬಿ. ಶಾನಪ್ಪ.—ಎಕ್ಸೈಜ್ ಟಾಡಿ ಕಂಟ್ರಾಕ್ಟರ್‌ಗಳು ೫೪ ಲಕ್ಷ ರೂಪಾಯಿ ಗುಲ್ಬರ್ಗಾದ್ದು. ಅವರು ಬಹಳ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಎಕ್ಸೈಜ್ ಆಕ್ಷನ್ ಮೇ ತಿಂಗಳಿನಲ್ಲಿ ಆಗುತ್ತದೆ ಮೇ ತಿಂಗಳಿನಲ್ಲಿ ಆಕ್ಷನ್ ಆದರೂ ಅವರು ಒಂದೆರಡು ತಿಂಗಳು ಬಾಕಿ ಇಡುತ್ತಾರೆ ಹರಾಜು ಮಾಡುವಾಗ ಎರಡು ತಿಂಗಳು ಬಿಟ್ಟುಕೊಟ್ಟರೆ ೧ ಕೋಟಿ ೮ ಲಕ್ಷ ರೂಪಾಯಿ ಉಳಿತಾಯವಾಗುತ್ತದೆ. ೧೯೮೫-೮೬ ಮತ್ತು ೧೯೮೬-೮೭ರಲ್ಲಿ ಇದೇ ಪ್ರಾಕ್ಟೀಸ್ ಮಾಡುವವರೂ ಇದ್ದಾರೆ. ಹೊಸ ಕಂಟ್ರಾಕ್ಟ್ ಕೊಡುವುದಕ್ಕೆ ಮೊದಲು ಹಳೆಯ ಕಂಟ್ರಾಕ್ಟರುಗಳಿಂದ ಇರತಕ್ಕ ಬಾಕಿಯನ್ನು ವಸೂಲಿ ಮಾಡುತ್ತೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಆಶ್ವಾಸನೆಯನ್ನು ಕೊಟ್ಟರೆ ಕಷ್ಟವಾಗುತ್ತದೆ. ಬಾಕಿ ಇರುವುದನ್ನು ಕಂಟ್ರಾಕ್ಟರುಗಳಿಂದ ಮುಂದಿನ ವರ್ಷ ವಸೂಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇರತಕ್ಕ ಬಾಕಿಯನ್ನು ಲೀಗಲ್ ಆಗಿ, ಕಾನೂನಿನ ಚೌಕಟ್ಟಿನಲ್ಲಿ ವಸೂಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಮತ್ತೊಮ್ಮೆ ಹೇಳುತ್ತೇನೆ.

ಅಧ್ಯಕ್ಷರು.—ಈಗ ಅಬಕಾರಿ ಮಂತ್ರಿಗಳಿಂದ ಉತ್ತರ ಮತ್ತು ವಿವರಣ ಮುಕ್ತಾಯವಾಯಿತು ಈಗ ಸಣ್ಣ ಉಳಿತಾಯ ಮತ್ತು ಬಂದೀಖಾನೆ ಸಚಿವರಿಂದ ಉತ್ತರ.

ಶ್ರೀ ವೀರಣ್ಣ (ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ನನ್ನ ಇಲಾಖೆಯ ಬಗ್ಗೆ ನನ್ನ ಬಗ್ಗೆ ಮಾನ್ಯ ಸದಸ್ಯರುಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಅಭಿನಂದನೆಗಳಿಗೆ ಇಡೀ ರಾಜ್ಯದ ಎಲ್ಲಾ ಇಲಾಖೆಗಳ ಅಧಿಕಾರಿಗಳು ವಿಶೇಷವಾಗಿ ಜಿಲ್ಲಾಧಿಕಾರಿಗಳು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಇದಕ್ಕೆ ಸಹಕಾರ ಕೊಟ್ಟ ಎಲ್ಲ ಶಾಸಕ ಮಿತ್ರರಿಗೆ ಮತ್ತು ಸಚಿವರುಗಳಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇವರೆಲ್ಲರೂ ಅಭಿನಂದನೆಗೆ ಅರ್ಹರು ಎಂದು ಹೇಳಲಿಕ್ಕೆ ಬಯಸುತ್ತೇನೆ. ಈ ಬೇಡಿಕೆಯ ಬಗ್ಗೆ ಮಾತನಾಡಿರತಕ್ಕ ಎಲ್ಲ ಶಾಸಕರು ಹಿರಿಯ ಸದಸ್ಯರುಗಳಾದ ಧರ್ಮಸಿಂಗ್‌ರವರು ಮತ್ತಿತರರು, ಮಾನ್ಯ ವೆಂಕಟರಾಮಯ್ಯನವರು ಸ್ವಾಮಿರಾವ್‌ರವರು, ಜಯಕುಮಾರ್‌ರವರು, ಮುಂಡಲಗಿರಿಯಪ್ಪನವರು, ಚಿಣ್ಣಪ್ಪನವರು, ಶಾನಪ್ಪನವರು ಅವರೆಲ್ಲರೂ ಮಾತನಾಡುವಾಗ ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪುನಃ ಏಪ್ರಿಲ್ ತಿಂಗಳಿನಲ್ಲಿ ಹೋಗುತ್ತಿದ್ದೇನೆ, ಇದೇ ರೀತಿ ತಾವೆಲ್ಲರೂ ಸಹಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈ ಇಲಾಖೆಯ ಪ್ರಗತಿಯನ್ನು ಹೇಳುವುದಾದರೆ, ೧೯೮೭-೮೮ರಲ್ಲಿ ಸಣ್ಣ ಉಳಿತಾಯದಿಂದ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಸಾಲವಾಗಿ ದೊರಕಿರುವುದು ೬೭ ಕೋಟಿ

ರೂಪಾಯಿಗಳು. ೧೯೮೨-೮೩ರಲ್ಲಿ ೫೨ ಕೋಟಿ ರೂಪಾಯಿ ಬಂದಿದೆ. ೧೯೮೩-೮೪ರಲ್ಲಿ ೬೮.೭೯ ಕೋಟಿ ರೂಪಾಯಿ ಬಂದಿದೆ. ೧೯೮೪-೮೫ರಲ್ಲಿ ೯೬.೩೧ ಕೋಟಿ ರೂಪಾಯಿ ಬಂದಿದೆ. ೧೯೮೫-೮೬ರಲ್ಲಿ ನವೆಂಬರ್ ಕೊನೆಯವರೆಗೆ ೧೪೪ ಕೋಟಿ ರೂಪಾಯಿ ಬಂದಿದೆ. ಡಿಸೆಂಬರ್ ತಿಂಗಳ ಹಣ ನಮಗೆ ಇನ್ನೂ ಬಿಡುಗಡೆಯಾಗಬೇಕು. ಡಿಸೆಂಬರ್ ತಿಂಗಳಿನಲ್ಲಿ ೨೪ ಕೋಟಿ ರೂಪಾಯಿ ಹಣ ಸಂಗ್ರಹವಾಗಿದೆ. ಅದರಲ್ಲಿ ನಮ್ಮ ಭಾಗ ೧೬ ಕೋಟಿ ರೂಪಾಯಿ ಬಿಡುಗಡೆಯಾಗಬೇಕಾಗಿದೆ. ಇದಕ್ಕೆಲ್ಲ ಕಾರಣ ಮಾನ್ಯ ಶಾಸಕರೆಂದು ಹೇಳುತ್ತಾ, ಈ ಎಲ್ಲ ಯೋಜನೆಗಳು ಕೇಂದ್ರ ಸರ್ಕಾರದ ಯೋಜನೆಗಳು. ಕೇಂದ್ರ ಸರ್ಕಾರ ಯಾವ ಉದ್ದೇಶದಿಂದ ಯೋಜನೆಗಳನ್ನು ತಂದಿದೆ ಅಂದು ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ದೇಶದ ಅಭಿವೃದ್ಧಿ ಸಮಸ್ಯೆಯನ್ನು ಮರೆತು ಸ್ವಾರ್ಥತೆಯನ್ನು ಹೆಚ್ಚು ಗಮನದಲ್ಲಿಟ್ಟುಕೊಂಡು ಯಾರೂ ಕೆಲಸ ಮಾಡಲಿಲ್ಲ. ದೇಶಸೇವೆಯ ಪ್ರಜ್ಞೆಯನ್ನುಂಟು ಮಾಡುವುದಕ್ಕೆ ಎಲ್ಲ ಯೋಜನೆಗಳನ್ನು ತಂದಿದ್ದೇವೆ. ಯೋಜನೆಗಳನ್ನು ಹಾಕಿಕೊಂಡು ಐದಾರು ವರ್ಷಗಳ ಕಾಲ ಒಂದೆರಡು ವರ್ಷಗಳ ಕಾಲ ಹಣವನ್ನು ಉಪಯೋಗಿಸಿ ಆ ಅವಧಿಯಲ್ಲಿ ದೇಶಸೇವೆ ಮಾಡುತ್ತೇವೆ ಎನ್ನತಕ್ಕ ಭಾವನೆ ಜನಗಳಲ್ಲಿ ಬರುವ ಉದ್ದೇಶದಿಂದ ಈ ಯೋಜನೆಗಳನ್ನು ತಂದಿದ್ದೇವೆ. ಅದಕ್ಕೋಸ್ಕರ ನೀವೆಲ್ಲರೂ ಸಹಕಾರ ಕೊಡಬೇಕು, ದೇಶಸೇವೆಯನ್ನು ನಾವು ಮಾಡುತ್ತೇವೆ. ಮಾನ್ಯ ಮೂಡಲಗಿರಿಯಪ್ಪನವರು ಯೋಜನೆಗೆ ಹಣವನ್ನು ಸಂಗ್ರಹ ಮಾಡುವಾಗ ಬಲವಂತ ಮಾಡಿ ಹಣ ಸಂಗ್ರಹ ಮಾಡುತ್ತಾರೆಂದು ಹೇಳುತ್ತಾರೆ. ನಾನು ಅವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಒಳ್ಳೆಯ ಕೆಲಸ ಮಾಡಬೇಕಾದರೆ ಸ್ವಲ್ಪ ಕಡ್ಡಾಯ ಮತ್ತು ಬಲವಂತ, ಒತ್ತಾಯ ಇಲ್ಲದಿದ್ದರೆ ಒಳ್ಳೆಯ ಕೆಲಸ ಮಾಡಲಿಕ್ಕೆ ಭಗವಂತ ಬದ್ಧಿ ಕೊಡುವುದಿಲ್ಲ. ಅನೇಕ ಶಾಸಕರು ಟೆಲಿಫೋನ್ ಬಿಲ್ ಕಟ್ಟಲಿಕ್ಕೆ ಹಣವಿಲ್ಲ, ೨೦೦ ರೂಪಾಯಿಗಳನ್ನು ಎಲ್ಲಿಂದ ಕೊಡಲಿಯೆಂದು ಹೇಳಿದರು. ಆಗ ಯೋಜನೆಗಳ ವಿವರಣೆಗಳನ್ನು ಹೇಳಿದಾಗ ಅವರು ೨೦೦ ಅಲ್ಲದೆ ಇನ್ನು ಹೆಚ್ಚಿಗೆ ೧೦೦, ೨೦೦ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ರೀತಿ ಮುಂದೆ ಬಂದರೆ ಅವರಿಗೇ ಲಾಭವಾಗುತ್ತದೆ. ಯಾವುದೇ ಬ್ಯಾಂಕಿನಲ್ಲಿ ಸಿಗುವ ಬಡ್ಡಿಗಿಂತ ಜಾಸ್ತಿ ಬಡ್ಡಿಯನ್ನು ಕೇಂದ್ರ ಸರ್ಕಾರದವರೇ ಕೊಡುತ್ತಾರೆ. ಅವರಿಗೂ ಲಾಭವಾಗುತ್ತದೆ. ದೇಶದ ಅಭಿವೃದ್ಧಿಗಾಗಿ ಹಣವನ್ನು ತೊಡಗಿಸಿದಂತಾಗುತ್ತದೆ. ಈ ಒಂದು ಭಾವನೆಯಿಂದ ಹೆಚ್ಚಿಗೆ ಹಣವನ್ನು ಕೊಡಲಿಕ್ಕೆ ಬಲವಂತ ಮಾಡಲಿಕ್ಕೆ ಪ್ರಯತ್ನ ನಡೆದಿರಬಹುದು. ಮಾನ್ಯ ಸದಸ್ಯರಾದ ಖರ್ಗೆಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಗೃಹ ರಕ್ಷಕ ದಳದ ಬಗ್ಗೆ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಗೃಹ ರಕ್ಷಕ ಇಲಾಖೆ ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಂದ ಸಂಯೋಜಿತವಾಗಿ ನಡೆಯತಕ್ಕ ಇಲಾಖೆ. ಇದು ಸ್ವಯಂಪ್ರೇರಿತ ಯೋಜನೆ. ಇದರಲ್ಲಿ ಯಾವುದೇ ಒತ್ತಾಯವಿಲ್ಲ. ಕೇಂದ್ರ ಸರ್ಕಾರದವರು ಸಂಖ್ಯಾಬಲವನ್ನು ನಿಗದಿ ಮಾಡಿರುತ್ತಾರೆ. ಅದಕ್ಕನುಗುಣವಾಗಿ ಟ್ರೈನಿಂಗ್‌ನ್ನು ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರದವರನ್ನು ಇನ್ನು ೫ ರಿಂದ ೭ ಸಾವಿರದವರೆಗೆ ಸಂಖ್ಯಾಬಲವನ್ನು ಹೆಚ್ಚು ಮಾಡಬೇಕಾಗುತ್ತದೆಂದೂ, ಅವರ ಅವಶ್ಯಕತೆ ಇದೆಯೆಂದೂ, ಹೆಚ್ಚು ಮಾಡಬೇಕೆಂದು ವಿನಂತಿ ಮಾಡಿಕೊಂಡಿದ್ದೇವೆ. ಕೇಂದ್ರ ಸರ್ಕಾರದವರು ನಮ್ಮ ವಿನಂತಿಯನ್ನು ಮನ್ನಿಸುತ್ತಾರೆಂಬ ಆಸೆ ಇದೆ. ಮಾನ್ಯ ಖರ್ಗೆಯವರು ಉನ್ನತವಾಗಿರತಕ್ಕ ಸಲಹೆಯನ್ನು ಕೊಟ್ಟಿರುತ್ತಾರೆ. ಯುವಕರಿಗೆ ವಾಲೆಂಟರಿ ಆರ್ಗನೈಸೇಷನ್‌ರವರು ಟ್ರೈನಿಂಗ್‌ನ್ನು ಕೊಟ್ಟರೆ ಅವರು ದೇಶಸೇವೆಯನ್ನು ಮಾಡಲಿಕ್ಕೆ ಅವಕಾಶವಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಡ್ಡಾಯ ಮಾಡುವಹಾಗೆ ಇಲ್ಲ, ಮನವೊಲಿಸಿ ಪ್ರಯತ್ನವನ್ನು ಮಾಡುತ್ತೇವೆ. ಮಾನ್ಯ ವೆಂಕಟರಾಮಯ್ಯನವರು ಒಂದು ವಿಷಯವನ್ನು ಹೇಳಿದರು. ಅದೇನೆಂದರೆ, ಕೋಲಾರ ಜಿಲ್ಲೆಯ ಡಿಸ್ಟ್ರಿಕ್ಟ್ ಸಬ್‌ಜೈಲ್‌ನ್ನು ಎರಡನೇ ದರ್ಜೆಗೆ ಇತಕ್ಕೆ ಪರಿವರ್ತನೆ ಮಾಡಬಾರದೆಂದು ಹೇಳಿದ್ದಾರೆ. ಅದನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಲ್ಲ ಶಾಸಕರಿಗೂ ಮೆಚ್ಚಿಗೆಯನ್ನು ವ್ಯಕ್ತಪಡಿಸಿ, ಪತ್ರಕರ್ತರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನಾನು ಮಂಡಿಸಿರುವ ಬೇಡಿಕೆಗಳನ್ನು ಪಾಸ್ ಮಾಡಿ ಕೊಡಬೇಕೆಂದು ಕೇಳಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಸಣ್ಣ ಉಳಿತಾಯ ಖಾತೆಯ ಮಂತ್ರಿಗಳಿಂದ ಉತ್ತರ ಮತ್ತು ವಿವರಣೆ ಮುಕ್ತಾಯವಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ.—

"೩೧ನೇ ಮಾರ್ಚಿ ೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೨೩ ಮತ್ತು ೧೯ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಈ ಸಭೆಯು ಮಂಜೂರು ಮಾಡಬೇಕು."

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

(ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರು ಮಾಡಿದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ಅಭಿಯಾಚನೆ ಕ್ರಮಾಂಕ ೨೩

ರಾಜ್ಯದ ಅಬಕಾರಿ

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯದ ಅಬಕಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩,೫೭,೬೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೯

ಸಣ್ಣ ಉಳಿತಾಯಗಳು

೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ಉಳಿತಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ ೧,೬೮,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಧ್ಯಕ್ಷರು.—ಇಂದಿನ ಸಭೆಯನ್ನು ನಾಳೆ ಬೆಳಿಗ್ಗೆ ೯ ಗಂಟೆಗೆ ಮುಂದೂಡಲಾಗಿದೆ.

(ಸಭೆಯು ೬ ಗಂಟೆ ೩೦ ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ ೧ನೇ ಮಾರ್ಚಿ ೧೯೮೬ರ ಶನಿವಾರದಂದು ಬೆಳಿಗ್ಗೆ ೯ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)